# ಅಧ್ಯಯನ – 8 Study - VIII

# ಇಸ್ರಾಯೇಲ್ಯರ ಪುನಃಸ್ಥಾಪನೆ

# The Restoration of Israel

**ಪಾಲೆಸ್ಟೈನಿನಲ್ಲಿ ಇಸ್ರಾಯೇಲ್ಯರ ಪುನಃಸ್ಥಾಪನೆ, ಸುಗ್ಗಿಯ ಕಾಲದೊಳಗೆ ನಿರೀಕ್ಷಿಸಬಹುದಾದ ಘಟನೆ, ಹೇಗೆ? ಮತ್ತು ಎಷ್ಟರಮಟ್ಟಿಗೆ? ಮತ್ತು ಯಾವ ವರ್ಗದವರೊಡನೆ ನಾವು ಈ ಪುನರ್‌ಸ್ಥಾಪನೆಯನ್ನು ನಿರೀಕ್ಷಿಸಬಹುದು – ಅದರ ಪ್ರಾರಂಭದ ದಿನಾಂಕ, ಅಂದಿನಿಂದ ಅದರ ನಿಜವಾದ ಪ್ರಗತಿಯ ನಿದರ್ಶನ. ಯಾಕೆ ಸಹಸ್ರಮಾನದ ಆಶೀರ್ವಾದಗಳು ಎಲ್ಲಾ ಮಾನವ ಜಾತಿಯನ್ನು ಉದ್ದೇಶಿಸಿವೆ, ಯೆಹೂದ್ಯರನ್ನು ಮೊದಲಿಗೆ ತಲುಪಿ ಪುನರುಜ್ಜೀವನಗೊಳಿಸುತ್ತವೆ – ಯೆಹೂದ್ಯ ಪುನರುಜ್ಜೀವನದ ನಿರೀಕ್ಷೆ – ಪ್ರಮುಖರಾದ ಯೆಹೂದ್ಯರ ಮತ್ತು ಅನ್ಯಜನದ ಲೇಖಕರ ಅವಲೋಕನ – ಪ್ರವಾದನೆಗಳೊಂದಿಗೆ ಇವರ ಸಾಮರಸ್ಯ – ಕ್ರಿಸ್ತನನ್ನು ಈಗಾಗಲೇ ನಿರಾಕರಿಸಿರುವ ಇಸ್ರಾಯೇಲ್ಯರ ಕುರುಡುತನವು ಈಗ ದೂರವಾಗುತ್ತದೆ – ಚಳುವಳಿಯ ಹರಡುವಿಕೆ ಮತ್ತು ತೀವ್ರತೆ – ದೇವರು ಅವರಿಗೆ ನೆರವಾಗುತ್ತಾನೆ.**

**"ಆ ದಿನದಲ್ಲಿ ನಾನು ದಾವೀದನ ಬಿದ್ದುಹೋಗಿರುವ ಗುಡಿಸಲನ್ನು ಎತ್ತಿ ಅದರ ಕಿಂಡಿಗಳನ್ನು ಮುಚ್ಚುವೆನು.ನಾನು ನನ್ನ ಜನರಾದ ಇಸ್ರಾಯೇಲ್ಯರ ದುರವಸ್ಥೆಯನ್ನು ತಪ್ಪಿಸುವೆನು; ಅವರ ಹಾಳುಬಿದ್ದ ಪಟ್ಟಣಗಳನ್ನು ಪುನಃ ಕಟ್ಟಿ ಅವುಗಳಲ್ಲಿ ವಾಸಿಸುವರು; ದ್ರಾಕ್ಷೆಯ ತೋಟಗಳನ್ನು ಮಾಡಿಕೊಂಡು ಅವುಗಳ ದ್ರಾಕ್ಷಾರಸವನ್ನು ಕುಡಿಯುವರು; ಫಲವೃಕ್ಷಗಳನ್ನು ಬೆಳೆಯಿಸಿ ಅವುಗಳನ್ನ ಹಣ್ಣನ್ನು ತಿನ್ನುವರು. ನಾನು ಅವರನ್ನು ಸ್ವದೇಶದಲ್ಲಿ ನೆಲೆಗೊಳಿಸುವೆನು; ಅವರಿಗೆ ನಾನು ದಯಪಾಲಿಸಿದ ಸೀಮೆಯೊಳಗಿಂದ ಇನ್ನು ಮುಂದೆ ಯಾರೂ ಅವರನ್ನು ಕಿತ್ತುಹಾಕರು; ಇದು ನಿನ್ನ ದೇವರಾಗಿರುವ ಯೆಹೋವನ ನುಡಿ" (ಆಮೋಸ 9 : 11,14,15)**

ನಮ್ಮ ದಿನದವರೆಗೆ ಇಳಿದು ಬಂದಿರುವ ಪ್ರಾಚೀನ ಕಾಲದ ಉಳಿಕೆಯ ಅವಶೇಷಗಳಲ್ಲಿ ಯೆಹೂದ್ಯ ಜನರಷ್ಟು ಆಸಕ್ತಿಕರವಾದ ವಿಷಯವು ಮತ್ತೊಂದಿಲ್ಲ. ಪುರಾತನ ಜ್ಞಾನದ ಬಗ್ಗೆ ಶೋಧಕರು ಚಾರಿತ್ರಿಕ ಅಥವಾ ವೈಜ್ಞಾನಿಕ ಸಂಗತಿಗಳ ಬಗ್ಗೆ ಅಲ್ಪ ಮಾಹಿತಿಯನ್ನಾದರೂ ನೀಡಬಹುದಾದ ನಿರ್ಜೀವ ವಸ್ತುಗಳನ್ನು ಅವಿಶ್ರಾಂತವಾಗಿ ಪ್ರಶ್ನಿಸುತ್ತಿದ್ದಾರೆ. ಸ್ಮಾರಕಗಳು, ಬಲಿಪೀಠಗಳು, ಸಮಾಧಿಗಳು, ಸಾರ್ವಜನಿಕ ಮತ್ತು ಖಾಸಗಿ ಭವನಗಳ ಅವಶೇಷಗಳು, ವರ್ಣಚಿತ್ರಗಳು, ಶಿಲ್ಪಕಲೆ, ಸಂಕೇತ ಲಿಪಿಗಳು ಮತ್ತು ಮೃತ ಭಾಷೆಗಳು ಎಲ್ಲವನ್ನೂ ಪುನರ್ವಿಚಾರಿಸ ಲಾಯಿತು; ನಿಜವಾದ ಸತ್ಯವನ್ನು ಕಂಡುಕೊಳ್ಳುವಂತೆ ಕೆಲವನ್ನು ತಾಳ್ಮೆಯಿಂದ ಪ್ರಯತ್ನಿಸಲಾಯಿತು. ಅದು ಬಹುಶಃ ಹಲವು ಶತಮಾನಗಳಿಂದ ಹರಿದು ಬಂದ ಅನೇಕ ಕಾಲ್ಪನಿಕ ಸಂಪ್ರದಾಯಗಳನ್ನು, ದಂತಕಥೆಗಳು ಮತ್ತು ಹಾಡುಗಳು ಮುಂತಾದವುಗಳಿಗೆ ಸ್ಫೂರ್ತಿ ನೀಡಿತು. ಇವುಗಳನ್ನೆಲ್ಲಾ ಕಲಿತುಕೊಳ್ಳಲು ಮಾನವನ ಉತ್ಪತ್ತಿ, ಆತನ ಇತಿಹಾಸ ಮತ್ತು ದೈವಪೂರ್ವ ನಿರ್ಧಾರಿತ ಘಟನೆಗಳನ್ನು ತಿಳುಕೊಳ್ಳುವುದು ಸಾಧ್ಯವಾಯಿತು. ಆದರೆ, ಅತ್ಯಂತ ಆಸಕ್ತಿಕರವಾದ ಅವಶೇಷ ಮತ್ತು ಯಾರ ಇತಿಹಾಸದ ಗುಪ್ತಲಿಪಿಯನ್ನು (ಗೂಢಾರ್ಥವನ್ನು) ಸುಲಭವಾಗಿ ಓದಬಹುದೋ, ಅರ್ಥ ಮಾಡಿಕೊಳಬಹುದೋ ಅವರೇ ಯೆಹೂದ್ಯ ಜನರು. ಅವರಲ್ಲಿ ಅಂದಾಜಿಸಲಾಗದ ಬೆಲೆಯುಳ್ಳ ಪ್ರಾಚೀನವಾದ ಸ್ಮಾರಕಗಳಿವೆ. ಅವುಗಳ ಮೇಲೆ ಸುಲಭವಾಗಿ ಓದಬಹುದಾದ ಅಕ್ಷರಗಳಲ್ಲಿ ಇಡೀ ಮಾನವ ಕುಲದ ಉತ್ಪತ್ತಿ, ಪ್ರಗತಿ ಮತ್ತು ಅಂತಿಮ ದೈವನಿರ್ಧಾರಿಕ ಘಟನೆ ಇವುಗಳು ದಾಖಲಾಗಿವೆ – ಇದು ಮಾನವ ಸಂಗತಿಗಳ ಅದ್ಭುತವಾದ ಉದ್ದೇಶಗಳ ಕ್ರಮವಾಗಿ ಮಾಡಿ ಮುಗಿಸಿದ ಜೀವಂತ ಮತ್ತು ಬುದ್ಧಿವಂತ ಸಾಕ್ಷಿಗಳಾಗಿವೆ ಮತ್ತು ಅವರ ದೈವಿಕ ಸ್ಫೂರ್ತಿ ಹೊಂದಿದ ಪ್ರವಾದಿಗಳ ಮತ್ತು ದಿವ್ಯಜ್ಞಾನಿಗಳ ಭವಿಷ್ಯವಾಣಿಗಳಿಗೆ ಸರಿಯಾದ ದೃಢತೆಯುಳ್ಳದ್ದಾಗಿದೆ.

ಅವರು ಒಂದು ಜನಾಂಗವಾಗಿ, ಅವರ ಚರಿತ್ರೆಯ ಪ್ರತಿಯೊಂದು ಸಂದರ್ಭಗಳಿಂದ ಮತ್ತು ಸಾಮಾನ್ಯವಾದ ಧಾರ್ಮಿಕ ನಂಬಿಕೆಗಳಿಂದ, ಮಾತ್ರವಲ್ಲದೆ ರಾಷ್ಟ್ರೀಯ ಧಾರ್ಮಿಕತೆಯ ಪ್ರತಿಯೊಂದು ಮೂಲವಸ್ತು ವಿನಲ್ಲಿಯೂ ಅವರ ಮುಖಲಕ್ಷಣ ಶಾಸ್ತ್ರದಲ್ಲಿಯೂ ಮತ್ತು ಅವರ ಶಿಷ್ಟಾಚಾರ ಮತ್ತು ಸಂಪ್ರದಾಯ ಗಳಲ್ಲಿಯೂ ಭಿನ್ನರಾದವರು ಮತ್ತು ವಿಶಿಷ್ಟರೂ ಎಂದು ಗುರುತಿಸಲ್ಪಟ್ಟಿದ್ದಾರೆ. ಅನೇಕ ಶತಮಾನಗಳ ಹಿಂದಿನ ರಾಷ್ಟ್ರೀಯ ಗುಣಲಕ್ಷಣಗಳು ಅಂದರೆ ಐಗುಪ್ತದ ಲೀಕ್ಸ್, ನೀರುಳ್ಳಿ ಮತ್ತು ಬೆಳ್ಳುಳ್ಳಿ ಇವುಗಳ ಬಗ್ಗೆ ಅವರಿಗಿರುವ ಅತಿಯಾದ ಪ್ರೀತಿ ಮತ್ತು ಅವರ ಮೊಂಡಾಟ, ಹಟಮಾರಿತನಗಳು ಎಲ್ಲವೂ ಸೇರಿದಂತೆ. ಈಗಲೂ

ಪ್ರಾಧಾನತೆಯುಳ್ಳವುಗಳಾಗಿವೆ. ದೇವರ ದೈವೋಕ್ತಿಗಳನ್ನು (Oracles) ಹೊಂದಿದ ಜನರಾಗಿ ಅವರು ನಿಜವಾಗಿಯೂ ಎಲ್ಲಾ ವಿಧವಾದ ಸೌಕರ್ಯಗಳನ್ನು ಹೊಂದಿದ್ದಾರೆ. ಅವರಲ್ಲಿ ಕವಿಗಳು, ವಕೀಲರುಗಳು, ರಾಜಕೀಯ ಮುತ್ಸದ್ದಿಗಳು ಮತ್ತು ತತ್ವಜ್ಞಾನಿಗಳು ಅಭಿವೃದ್ಧಿಹೊಂದಿಕೊಳ್ಳುತ್ತಿದ್ದಾರೆ ಮತ್ತು ಅವರ ಮಹಿಮೆಯ ಪರಕಾಷ್ಠೆಯಾಗಿದ್ದ ಸೊಲೊಮೋನನ ಕಾಲದಲ್ಲಿ ಇದ್ದಂತೆ ಅವರನ್ನು ದಾಸತ್ವದಿಂದ ಮೇಲಕ್ಕೆ ಹಂತ ಹಂತವಾಗಿ ಎತ್ತಲಾಗುತ್ತಿದೆ. ಅವರು ರಾಷ್ಟ್ರಗಳಲ್ಲಿ ಗೌರವಿಸಲ್ಪಟ್ಟವರಾಗಿ, ಲೋಕದ ಜನರು ಆಶ್ಚರ್ಯವನ್ನು ಆಡಳಿತ ಜ್ಞಾನವನ್ನು ಮೆಚ್ಚುಗೆಯಿಂದ ಹೊಂದಿ ಕೊಳ್ಳುತ್ತಿದ್ದಾರೆ (ರೋಮಾ. 3:1,2: 1 ಅರಸು 4:30–34 ; 10: 1– 29).

ಪಾಲೆಸ್ಟೈನ್ ದೇಶದಲ್ಲಿ ಇಸ್ರಾಯೇಲ್ಯರ ಪುನಃಸ್ಥಾಪನೆಯು ಕರ್ತನ ಈ ದಿನಗಳಲ್ಲಿ ನಾವು ನಿರೀಕ್ಷಿಸಬೇಕಾಗಿರುವ ಘಟನೆಗಳಲ್ಲಿ ಒಂದಾಗಿದೆ ಮತ್ತು ಪ್ರವಾದಿಯ ಮೇಲಿನ ಹೇಳಿಕೆಯಿಂದ ನಾವು ಈ ಬಗ್ಗೆ ಪೂರ್ಣ ಭರವಸೆ ಹೊಂದಿದ್ದೇವೆ. ಈ ಪ್ರವಾದನೆಯನ್ನು ಯಾವುದೇ ಸಾಂಕೇತಿಕ ಅರ್ಥದಲ್ಲಿ ಅರ್ಥವಿವರಣೆ ಮಾಡುವಂತಿಲ್ಲ ಎಂಬುದನ್ನು ಗಮನಿಸಿರಿ. ಅದು ಅವರು ಪರಭಾರೆ ಮಾಡಲ್ಪಟ್ಟಿರುವ ಪರಲೋಕದಲ್ಲಿರುವ ಕಾನಾನ್ ಅಲ್ಲ, ಆದರೆ ಅದು ಈ ಭೂಲೋಕದ ಮೇಲಿರುವ ಕಾನಾನ್ ಆಗಿದೆ. ಅವರುಗಳನ್ನು ದೇವರು ಅವರಿಗಾಗಿ ದಯಪಾಲಿಸಿದ್ದೇನೆಂದು ಹೇಳುವ ಅವರ ದೇಶದ ಮೇಲೆ ನೆಲೆಗೊಳಿಸಬೇಕಾಗಿದೆ. ಈ ದೇಶವು ಅಬ್ರಹಾಮನಿಗೆ ವಾಗ್ದಾನ ಮಾಡುವಾಗ ದೇವರು – "ನೀನಿರುವ ಸ್ಥಳದಿಂದ ದಕ್ಷಿಣೋತ್ತರ ಪೂರ್ವ ಪಶ್ಚಿಮಗಳಿಗೆ ಕಣ್ಣೆತ್ತಿ ನೋಡು. ನೀನು ನೋಡುವ ಈ ದೇಶವನ್ನೆಲ್ಲಾ ನಿನಗೂ ನಿನ್ನ ಸಂತತಿಗೂ ಶಾಶ್ವತವಾಗಿ ಕೊಡುವೆನು, ನಿನ್ನ ಸಂತಾನದವರನ್ನು ಭೂಮಿಯ ಧೂಳಿನಷ್ಟು ಅಸಂಖ್ಯವಾಗಿ ಮಾಡುವೆನು. ಭೂಮಿ ಯಲ್ಲಿರುವ ಧೂಳನ್ನು ಲೆಕ್ಕಮಾಡುವುದಾದರೆ ನಿನ್ನ ಸಂತಾನವನ್ನೂ ಲೆಕ್ಕಿಸಲಾದೀತು. (ಆಗ ತಿಳಿಸಿದ ಬಹಳ ದೂರದ ಕಾಲ, ಅಬ್ರಹಾಮನ ಸಂತತಿಯು ಹೆಚ್ಚಾಗಿ ಅಭಿವೃದ್ಧಿಯಾಗಲು ಸವಿಸ್ತಾರ ಸಮಯ) ನೀನೆದ್ದು ಈ ದೇಶದ ಎಲ್ಲಾ ಕಡೆಗಳಲ್ಲಿಯೂ ತಿರುಗಾಡು" (ಆದಿ. 13:14–17) "ನೀನು ಪ್ರವಾಸವಾಗಿರುವ ಕಾನಾನ್ ದೇಶವನ್ನೆಲ್ಲಾ ನಿನಗೂ ನಿನ್ನ ಸಂತತಿಗೂ ಶಾಶ್ವತ ಸ್ವಾಸ್ಥವನ್ನಾಗಿ ಕೊಟ್ಟು ಅವರಿಗೆ ದೇವರಾಗಿರುವೆನು" (ಆದಿ. 17:8) ಅಂದನು. ಅವರು ಒಮ್ಮೆ ಪ್ರವೇಶಿಸುವಂತೆ ಹಕ್ಕು ದೊರೆತ ದೇಶವು ಮತ್ತು ಶತಮಾನಗಳಿಂದ ಅವರು ನೆಲೆಸಿದ್ದ ದೇಶವು ಇದೇ ಆಗಿದೆ. ಆದರೆ ಅವರು ಆ ಸಮಯದಲ್ಲಿ ಬಹಳಷ್ಟು ಸಾರಿ ಅಲ್ಲಿಂದ ಕಿತ್ತುಹಾಕಲ್ಪಟ್ಟರು ಮತ್ತು ಬೇರೆ ದೇಶಗಳಿಗೆ ಸೆರೆಯಾಗಿ ಒಯ್ಯಲ್ಪಟ್ಟರು, ಅದೇ ಸಮಯದಲ್ಲಿ ಪರದೇಶಿಯರು ಅವರ ದೇಶವನ್ನು ಹಾಳುಮಾಡಿದರು, ಅವರ ದ್ರಾಕ್ಷೆ ತೋಟದ ದ್ರಾಕ್ಷಾರಸವನ್ನು ಕುಡಿದರು. ಅವರ ತೋಟದ ಹಣ್ಣುಗಳನ್ನು ತಿಂದರು. ಅಂತಿಮವಾಗಿ ಅವರೆಲ್ಲರೂ ಬೇರು ಸಮೇತ ಕಿತ್ತುಹಾಕಲ್ಪಟ್ಟರು. ಅವರ ದೇಶವು ವ್ಯರ್ಥವೂ, ನಿರ್ಜನವೂ ಆಗಿ ಪಾಳುಬಿದ್ದಿತು. ಅವರುಗಳು ಅಲೆದಾಡುವವರಾಗಿ, ದೇಶಭ್ರಷ್ಟರಾಗಿ ಅಲ್ಲಿಂದ ಲೋಕದ ಅನೇಕ ದೇಶ ವಿದೇಶಗಳಿಗೆ ಹೊರಡಿಸಲ್ಪಟ್ಟರು. ಆದರೆ ವಾಗ್ದಾನದ ಪ್ರಕಾರ ದೇವರು ಅವರನ್ನು ಪುನಃ ಆ ದೇಶದಲ್ಲಿ ನೆಲೆಗೊಳಿಸುವಾಗ, ಯಾರೂ ಅವರನ್ನು ಅಲ್ಲಿಂದ ಕಿತ್ತುಹಾಕರು (ಅವರು ಹಿಂದೆ ಜೀವಿಸಿದ್ದ ನಾಡು) (ಆಮೋಸ 9:15). "ಪುರಾತನ ಕಾಲದಲ್ಲಿ ಹಾಳಾದ ನಿವೇಶನಗಳನ್ನು ತಿರುಗಿ ಕಟ್ಟುವರು, ಪೂರ್ವದಲ್ಲಿ ಪಾಳುಬಿದ್ದದನ್ನು ಪುನಃ ಎಬ್ಬಿಸುವರು, ತಲತಲಾಂತರಗಳಿಂದ ಹಾಳುಬೀಳಾದ ಪಟ್ಟಣಗಳನ್ನು ಜೀರ್ಣೋದ್ಧಾರ ಮಾಡುವರು" (ಯೆಶಾಯ 61:4). ಚದುರಿಹೋದ, ಮನೆ ಇಲ್ಲದ, ಪಾಳುಬಿದ್ದ ಮತ್ತು ಹಿಂಸೆಗೊಳಗಾದ ಜನರು, ಇನ್ನೂ ಸಹ ವಿಭಿನ್ನವಾದ ಮತ್ತು ಒಂದೇ ಬಗೆಯ ಜನರಾಗಿದ್ದಾರೆ. ರಕ್ತ ಸಂಬಂಧದ ಬಲವಾದ ಬಂಧನದಲ್ಲಿ ಅನ್ಯೋನ್ಯಗೊಂಡು, ದೇವರ ಅದ್ಭುತವಾದ ವಾಗ್ದಾನಗಳ ಮೇಲಿನ ಸಾಮದಾಯಿಕ ನಂಬಿಕೆಯಲ್ಲಿ ಸ್ಫೂರ್ತಿ ಹೊಂದಿದವರಾಗಿ, ಅವರು ಆ ವಾಗ್ದಾನಗಳನ್ನು ಮಸುಕಾಗಿ ಅರ್ಥಮಾಡಿಕೊಂಡಿದ್ದರೂ, ಇನ್ನೂ ಮುಂದಕ್ಕೂ, ದೇಶಭ್ರಷ್ಟತೆಯ ಸಲುವಾಗಿ ಅವರ ಸಾಮುದಾಯಿಕ ಸಂಕಷ್ಟ ಮತ್ತು ತಾತ್ಸಾರಗಳಿಂದ ಹುಟ್ಟಿದ ಅನುಕಂಪದ ಬಂಧನದಿಂದ ಒಟ್ಟಿಗೆ ಬಂಧಿಸಲ್ಪಟ್ಟವರಾಗಿ ಅವರು ಈ ದಿನದವರೆಗೂ ಇಸ್ರಾಯೇಲಿನ ನಿರೀಕ್ಷೆಯನ್ನು ಹಂಬಲಿಸುವವರಾಗಿದ್ದಾರೆ.

ಒಂದು ಜನಾಂಗವಾಗಿ ಅವರಿಗೆ ದೇವರಲ್ಲಿ ಇನ್ನೂ ಸಹ ನಂಬಿಕೆಯಿದೆ. ಆದರೂ, ಅವರ ಕುರುಡುತನ ಮತ್ತು ಹೃದಯದ ಅಹಂಕಾರದಿಂದಾಗಿ ಲೋಕದ ರಕ್ಷಣೆಗಾಗಿ ದೇವರು ನೇಮಿಸಿದ ದೂತನ ನಮ್ರತೆಯ ಬಗ್ಗೆ ಎಡವಿದ ಕಾರಣ ಆತನನ್ನು, ಮಹಿಮೆಯ ಅರಸನನ್ನು ಸ್ವೀಕರಿಸುವ ಬದಲಾಗಿ ಅವರು ಆತನನ್ನು ಶಿಲುಬೆಗೆ ಹಾಕಿದರು. ಆದಾಗ್ಯೂ, ಅಪೋಸ್ತಲರುಗಳು ಮತ್ತು ಪ್ರವಾದಿಗಳು ನಮಗೆ ತೋರಿಸುವುದೇನೆಂದರೆ ಈ ಕಣ್ಣುಕುಕ್ಕುವ ಅಪರಾಧಕ್ಕೆ ಅವರ ಜಂಬ ಮತ್ತು ಸ್ವಚಿತ್ತ ಅವರನ್ನು

ದೂಡಿದಾಗ್ಯೂ ಅದು ಅವರನ್ನು ಎಂದಿಗೂ ಕ್ಷಮಿಸಲಾಗದ್ದಲ್ಲ, ಅವುಗಳ ದೆಸೆಯಿಂದ ಅವರು ಶಿಕ್ಷೆ ಅನುಭವಿಸಿದ್ದಾರೆ ಅದೂ ಕಠೋರವಾಗಿ. ಅವರು ನೀತಿವಂತನನ್ನು ಖಂಡಿಸಿದಾಗ "ಆತನ ರಕ್ತವು ನಮ್ಮ ಮೇಲೆಯೂ, ನಮ್ಮ ಮಕ್ಕಳ ಮೇಲೆಯೂ ಇರಲಿ" ಎಂದು ಹೇಳಿದಾಗ ಅದನ್ನು ಅನುಸರಿಸುವ ಭಯಾನಕ ಪ್ರತಿಫಲದ ಬಗ್ಗೆ ಅವರು ಸ್ವಲ್ಪವಾದರೂ ಎದುರು ನೋಡಲಿಲ್ಲ.

ಜೀವನದ ಘೋರ ತೊಂದರೆಗಳು ಮತ್ತು ನಷ್ಟಗಳು, ಅವರ ಪವಿತ್ರ ನಗರ ಮತ್ತು ದೇವಾಲಯದ ನಾಶನ, ಅವರ ರಾಷ್ಟ್ರೀಯ ಅಸ್ತಿತ್ವದ ಸಂಪೂರ್ಣವಾದ ಅಂತ್ಯ, ಜೀವದಿಂದುಳಿದಿರುವ ಉಳಿದವರು ಎಲ್ಲಾ ದೇಶಗಳಲ್ಲಿ ಗಡಿಪಾರಾಗಿ ಚದುರಿಹೋಗಿರುವುದು ಅವರ ಸುಗ್ಗಿಯ ಕಾಲದ ಕಾರ್ಯಗಳನ್ನು ಪೂರ್ತಿಗೊಳಿಸುತ್ತದೆ. ಪಂಗಡಗಳ ಕಲಹದಲ್ಲಿ ಇದು ಪ್ರಾರಂಭಗೊಂಡು ಒಂದು ರೋಮನ್ ಆಕ್ರಮಣಕಾರಿ ಸೈನ್ಯದಿಂದ ಮುಕ್ತಾಯ ಗೊಂಡಿತು, ಬೆಂಕಿ, ಕತ್ತಿ ಮತ್ತು ಬರ ಇವುಗಳು ಅವರ ಮೇಲೆ ತಕ್ಕ ಪ್ರತಿಫಲವಾಗಿ ಭಯಾನಕವಾಗಿ ನೆರವೇರಿತು.

ಅಂದಿನಿಂದ ಇಸ್ರಾಯೇಲ್ ಒಂದು ಚದುರಿಹೋದ ಮತ್ತು ಸುಲಿಗೆಗೊಳಗಾದ ರಾಷ್ಟ್ರವಾಗಿ ದೇಶದಿಂದ ದೇಶಕ್ಕೆ, ಪ್ರಾಂತ್ಯದಿಂದ ಪ್ರಾಂತ್ಯಕ್ಕೆ ಗಡಿಪಾರಾಗಿ ಅಟ್ಟಲ್ಪಟ್ಟಿತು. ಇತರೆ ಜನರು ಬಹುಮಟ್ಟಿಗೆ ಅನುಭವಿಸುತ್ತಿರುವ ಎಲ್ಲಾ ಹಕ್ಕುಗಳನ್ನೂ, ಸವಲತ್ತು ಗಳಿಂದ ವಂಚಿತರಾದರು. ಕ್ರೈಸ್ತತ್ವವನ್ನು ಭ್ರಷ್ಟತೆಯುಳ್ಳದ್ದನ್ನು ಮತ್ತು ಪ್ರಾಮಾಣಿಕವಾದದ್ದನ್ನು ನಿರಾಕರಿಸಿದ್ದರಿಂದ ಅವರುಗಳು ಕಾನೂನುಬದ್ಧ ಅಧಿಕಾರದ ಬಗ್ಗೆ ಅವಿಧೇಯರಾಗಿಯೂ ಮತ್ತು ರೋಮಿನ ಸಭೆಯ ನಿಷ್ಠೂರ ಹಿಂಸೆಗಳ ವಸ್ತುಗಳೂ ಆದರು.

ಒಬ್ಬ ಇತಿಹಾಸಕಾರನು ಹೀಗೆ ಹೇಳುತ್ತಾನೆ – "ಜರ್ಮನಿ, ಫ್ರಾನ್ಸ್, ಇಂಗ್ಲೆಂಡ್ ಮತ್ತು ಇಟಲಿಗಳಲ್ಲಿ ಅವರುಗಳು ಸಭೆಯ ಆಜ್ಞೆಗಳ ಮತ್ತು ಕಾನೂನುಗಳ ಹಕ್ಕಿನಿಂದ ಮತ್ತು ನಾಗರೀಕ ಅಧಿಕಾರದಿಂದ ನಿಬಂಧನೆಗೊಳಪಟ್ಟರು. ಅವರುಗಳನ್ನು ಎಲ್ಲಾ ಗೌರವಾನ್ವಿತ ಹುದ್ದೆಗಳಿಂದ ಹೊರಗಿಡಲಾಯಿತು ಮತ್ತು ಸ್ಥಳದಿಂದ ಸ್ಥಳಕ್ಕೆ ಅಟ್ಟಲಾಗುತ್ತಿತ್ತು, ವಾಣಿಜ್ಯ ಹುದ್ದೆಗಳ ಮತ್ತು ಬಡ್ಡಿ ವ್ಯವಹಾರಗಳ ಮೂಲಕ ಹೊಟ್ಟೆಹೊರಕೊಳ್ಳುವಂತೆ ಒತ್ತಾಯಿಸಲಾಗುತ್ತಿತ್ತು. ಅವರುಗಳ ಮೇಲೆ ವಿಪರೀತವಾದ ಕಂದಾಯ ಹೇರಲಾಗುತ್ತಿತ್ತು ಮತ್ತು ಅವರನ್ನು ನಗರಗಳಲ್ಲಿ ಕೀಳಾಗಿ ನೋಡಿಕೊಳ್ಳಲಾಗುತ್ತಿತ್ತು, ಇಕ್ಕಟ್ಟಾದ ವಸತಿಗಳಲ್ಲಿ ಇಡಲಾಗುತ್ತಿತ್ತು ಮತ್ತು ಅವರ ವಸ್ತ್ರಗಳ ಮೇಲೆ ಕಾನೂನು ವಿರೋಧಿಗಳು, ಅಪಹರಣಕಾರರು, ಕಾನೂನಿಲ್ಲದ ಕೆಳದರ್ಜೆಯವರು, ಕಾಸಿಲ್ಲದ ಅರಸರುಗಳು ಇತ್ಯಾದಿಯಾಗಿ ಮುದ್ರೆ ಒತ್ತಲಾಗುತ್ತಿತ್ತು. ಅವರುಗಳು ಪೌರರ ಬದ್ಧದ್ವೇಷದ ಕಲಹಗಳಲ್ಲಿ ಸುಲಭವಾದ ಆಹಾರವಾಗುತ್ತಿದ್ದರು, ಮೇಲಿಂದ ಮೇಲೆ ಅವರ ದ್ರವರೂಪದ ಬಾಧ್ಯತೆಗಳನ್ನು ದೋಚಿಕೊಳ್ಳಲಾಗುತ್ತಿತ್ತು. ಅವರುಗಳನ್ನು ಚಕ್ರವರ್ತಿಗಳು ತಮ್ಮ ಸ್ವಂತ ಜೀತದಾಳುಗಳನ್ನಾಗಿ ಮಾಡಿಕೊಳ್ಳುತ್ತಿದ್ದರು ಇಲ್ಲವೇ ಹಾಗೆ ಮಾರಾಟಮಾಡುತ್ತಿದ್ದರು, ಅವರುಗಳನ್ನು ಸಾಮೂಹಿಕವಾಗಿ ಅಥವಾ ದಂಗೆ ಎದ್ದ ಗ್ರಾಮೀಣರ ಮೂಲಕವಾಗಿ ವಧಿಸಲಾಗುತ್ತಿತ್ತು, ಪಾದ್ರಿಗಳು ಅವರನ್ನು ಅಟ್ಟಿಸಿಕೊಂಡು ಹೋಗುತ್ತಿದ್ದರು, ಅಂತಿಮವಾಗಿ ಧರ್ಮ ಯುದ್ಧದಲ್ಲಿ ತೊಡಗಿದವರು ಇಸ್ರಾಯೇಲ್ಯರ ಸಹಸ್ರಾರು ಜನರನ್ನು ಸುಟ್ಟುಹಾಕುತ್ತಿದ್ದರು. ಅವರುಗಳು ತಮ್ಮ ಸಹೋದರರನ್ನು ಯೆರೂಸಲೇಮಿನ ಯೆಹೂದಿ ಸಭಾಮಂದಿರಗಳಲ್ಲಿ ಸಹ ಸುಟ್ಟುಹಾಕುವವರಾಗಿದ್ದರು ಅಥವಾ ಪರಿಹಾಸ್ಯದ, ನಿಂದಾತ್ಮಕವಾದ ಪ್ರಸಂಗಗಳಿಂದ, ವಿಕಟಾಕೃತಿಯ ದೋಷಾರೋಪಣೆಗಳಿಂದ, ವಿಚಾರಣೆ ಗಳಿಂದ, ಬೆದರಿಕೆಗಳಿಂದ ಮತ್ತು ಪರಿವರ್ತನೆಯ ಪ್ರಯೋಗಗಳಿಂದ ಅವರನ್ನು ಬಹಳವಾಗಿ ಪೀಡಿಸುತ್ತಿದ್ದರು.... ಅವರುಗಳು ಯಾವುದೇ ಭೂಮಿಯನ್ನು ಸ್ವಂತದ್ದಾಗಿ ಮಾಡಿಕೊಳ್ಳುವಂತಿಲ್ಲ, ಯಾವುದೇ ಯಂತ್ರಶಾಸ್ತ್ರದ ಸಂಘಗಳನ್ನು ಹೊಂದಿಕೊಳ್ಳುವಂತಿಲ್ಲ, ಯಾವುದೇ ರೀತಿಯ ಕಲೆಯಲ್ಲಿ ತಮ್ಮನ್ನು ತೊಡಗಿಸಿಕೊಳ್ಳುವಂತಿಲ್ಲ. ಅವರಿಗೆ ಪ್ರತ್ಯೇಕವಾಗಿ ಎಲ್ಲಾ ವಿಧವಾದ ವ್ಯಾಪಾರಗಳೂ ಬಹುಮಟ್ಟಿಗೆ ಮುಚ್ಚಲ್ಪಟ್ಟಿದ್ದವು. ಎಲ್ಲಾ ಮಾನವ ಜಾತಿಯವರೂ ತಮ್ಮ ಮೇಲೆ ಯುದ್ಧ ಮಾಡುವವರಾಗಿದ್ದಾರೆಂಬುದನ್ನು ಕಂಡುಕೊಂಡರೂ ಅವರ ರಾಷ್ಟ್ರೀಯ ಹೆಮ್ಮೆ ಮತ್ತು ಅಹಂಕಾರ ಯಾವುದೇ ರೀತಿಯಲ್ಲಿ ಮೃದುಗೊಳ್ಳಲಿಲ್ಲ ಮತ್ತು ಇದರ ಪರಿಣಾಮವಾಗಿ ಎಲ್ಲಾ ಕಡೆಗಳಲ್ಲಿಯೂ ಯೆಹೂದ್ಯರ ಮತ್ತು ಅವರ ನೆರೆಯವರ ಅನ್ಯಜನರ ಮಧ್ಯದಲ್ಲಿ ಬಿರುಕು ಅಗಲವಾಗತೊಡಗಿತು".

ಈ ರೀತಿಯಾಗಿ ದೇವರಿಂದ ದೂರವಾಗಿ ಮತ್ತು ಎಲ್ಲಾ ರಾಷ್ಟ್ರಗಳಲ್ಲಿ ಚದುರಿರುವ ಅವರ ಸಂಗಡಿಗರಿಂದ ಅಗಲಿಸಲ್ಪಟ್ಟು ಅವರ ದಾರುಣ ಪರಿಸ್ಥಿತಿಯು ದುಃಖಕರವೂ, ಕನಿಕರಪಡುವಂತಾದ್ದೂ ಆಗಿತ್ತು. ಪೋಪನ ನಿಷ್ಕರುಣವುಳ್ಳ ತೊಂದರೆಗಳಿಂದ ಅವರು

ಯೇಸುವಿನ ಭಕ್ತರೊಂದಿಗೆ ಮತ್ತು ಹತಸಾಕ್ಷಿಗಳೊಡನೆ ಸಮಾನವಾಗಿ ಕಷ್ಟವನ್ನನುಭವಿಸಿದರು – ಕ್ರೈಸ್ತರು ಕ್ರಿಸ್ತವಿರೋಧಿಯನ್ನು ತಿರಸ್ಕರಿಸಿದ್ದರಿಂದ, ಯೆಹೂದ್ಯರು ಕ್ರಿಸ್ತನನ್ನೂ, ಕ್ರಿಸ್ತವಿರೋಧಿ ಇಬ್ಬರನ್ನೂ ತಿರಸ್ಕರಿಸಿದ್ದರಿಂದ ಕಿರುಕುಳವನ್ನನುಭವಿಸಿದರು. ಸುವಾರ್ತೆಯನ್ನೂ ಮತ್ತು ವಿಮೋಚಕನನ್ನು ನಿರಾಕರಿಸಿದ ರಾಷ್ಟ್ರೀಯ ಅಪರಾಧಕ್ಕೆ ಶಿಕ್ಷೆಯಾಗಿ ಈ ವ್ಯಥೆಗಳನ್ನೂ, ತೊಂದರೆಗಳನ್ನೂ ದೇವರು ಅನುಮತಿಸಿದ್ದರಿಂದ, ಪರಂತೂ ಆತನು ಸೂಕ್ತಸಮಯದಲ್ಲಿ ಅವರಿಗೆ ಆತನ ವಾಗ್ದಾನಗಳಲ್ಲಿ ಇರುವ ಅವರ ನಂಬಿಕೆಯ ದೃಢತೆಗೆ ಬಹುಮಾನವನ್ನು ನೀಡುವವನಾಗಿದ್ದಾನೆ. ಇದನ್ನು ಅವರು ಇಷ್ಟೊಂದು ದೀರ್ಘಕಾಲ ನಿಷ್ಠಾಪೂರ್ವಕವಾಗಿ ಹಿಡುಕೊಂಡಿದ್ದಾರೆ. ದೇವರು ಅವರ ಅಹಂಕಾರ ಮತ್ತು ಕಠಿಣ ಹೃದಯದ ಬಗ್ಗೆ ಮೊದಲೇ ತಿಳಿದಿದ್ದನು ಮತ್ತು, ಅದನ್ನು ಮತ್ತು ಅವರ ಮೇಲೆ ಬರಲಿರುವ ಕೆಡಕುಗಳನ್ನೆಲ್ಲಾ ಮುಂತಿಳಿಸಿದ್ದನು: ಮತ್ತು ಕಡಿಮೆಯಿಲ್ಲದ ತೀಕ್ಷ್ಣರೂಪದಲ್ಲಿ ಅವರ ಕುರುಡುತನದ ಹೊಗಲಾಡುವಿಕೆಯನ್ನೂ ಮತ್ತು ಅಬ್ರಹಾಮನಿಗೆ ಬಹಳ ಹಿಂದೆಯೇ ಮಾಡಿದ್ದ ಮತ್ತು ಒಬ್ಬರ ನಂತರ ಒಬ್ಬ ಪವಿತ್ರ ಪ್ರವಾದಿಗಳಿಗೆ ಪುನರುಚ್ಚರಿಸಿದ ಅವರ ಭೂಲೋಕದ ಎಲ್ಲಾ ವಾಗ್ದಾನಗಳೂ ನೆರವೇರುವುದನ್ನೂ ಆತನು ಮುಂತಿಳಿಸಿದ್ದನು.

ದೇವರು ಇಸ್ರಾಯೇಲ್ಯರಿಗೆ ನೀಡಿದ ಆತನ ಕೃಪೆಯ ಪುನಃಸ್ಥಾಪನೆಯ ವಾಗ್ದಾನಗಳು ನೆರವೇರುವ ಕಾಲವು ಸಮೀಪಿಸುತ್ತಿರುವಾಗ, ಅದಕ್ಕಾಗಿ ಸಿದ್ಧತೆಗಳನ್ನು ಮಾಡುತ್ತಿರುವುದನ್ನು ನಾವು ನೋಡುತ್ತೇವೆ. ಪ್ರಸ್ತುತ ಶತಮಾನದೊಳಗೆ ಸೋಸುವ ಮತ್ತು ಪ್ರತ್ಯೇಕಗೊಳಿಸುವ ಪ್ರಕ್ರಿಯೆಯು ಅವರಲ್ಲಿ ನೆರವೇರುತ್ತದೆ ಮತ್ತು ಅವರನ್ನು ಸಾಂಪ್ರದಾಯಿಕ ಮತ್ತು ಸಾಂಪ್ರದಾದಾಯಿಕವಲ್ಲದ ಯೆಹೂದ್ಯರ ಎರಡು ವರ್ಗಗಳನ್ನಾಗಿ ವಿಭಾಗಿಸುತ್ತದೆ. ಮೊದಲಿನವರು ಇನ್ನೂ ದೇವರ ವಾಗ್ದಾನಗಳನ್ನು ಹಿಡಿದುಕೊಂಡಿದ್ದಾರೆ ಮತ್ತು ದೇವರು ಚಿಯೋನಿಗೆ ಸಿದ್ಧಪಡಿಸಿರುವ ಕೃಪಾಕಾಲವು ಬರುತ್ತದೆ ಎಂಬ ನಿರೀಕ್ಷೆಯನ್ನು ಇನ್ನೂ ಸಹ ಇಟ್ಟುಕೊಂಡಿದ್ದಾರೆ. ಎರಡನೆಯವರು ವ್ಯಕ್ತಿಗಳ ದೇವರ ಮೇಲಿನ ವಿಶ್ವಾಸವನ್ನು, ಅಬ್ರಹಾಮನಿಗೆ ನೀಡಿದ ವಾಗ್ದಾನಗಳ ಮೇಲಿನ ವಿಶ್ವಾಸವನ್ನೂ ಕಳಕೊಳ್ಳುತ್ತಿದ್ದಾರೆ ಮತ್ತು ಲಿಬರಲ್ ಪಕ್ಷದ ಸಿದ್ಧಾಂತಗಳ ಕಡೆಗೆ, ಉದಾರವಾದ, ವಿಚಾರವಾದದ ಕಡೆಗೆ ಮತ್ತು ಧರ್ಮವಿರೋಧದ ಕಡೆಗೆ ಗೊತ್ತುಗುರಿ ಇಲ್ಲದಂತೆ ಕೊಚ್ಚಿಕೊಂಡು ಹೋಗುತ್ತಿದ್ದಾರೆ. ಮೊದಲನೆಯ ಸಂಪ್ರಾದಾಯಕರಲ್ಲಿ ಹೆಚ್ಚಿನವರು ಬಡವರು ಮತ್ತು ಶೋಷಣೆಗೊಳಗಾದ ಯೆಹೂದ್ಯರು ಇದ್ದಾರೆ. ಮಾತ್ರವಲ್ಲದೆ ಕೆಲವರು ಹಣವಂತರೂ, ವಿದ್ಯಾವಂತರೂ ಸಂಪ್ರದಾಯಿಕವಲ್ಲದವರಿಗಿಂತ ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ಎರಡನೆಯವರು ಹಲವೊಮ್ಮೆ ವರ್ತಕರು, ಲೇವಾದೇವಿ ಮಾಡುವವರೂ, ಸಂಪಾದಕರೂ ಮುಂತಾದವರೂ ಆಗಿದ್ದರೂ ಹೆಚ್ಚು ಪ್ರಭಾವಿಗಳೂ, ಗೌರವಾನ್ವಿತರೂ ಆಗಿದ್ದಾರೆ.

ಸಂಪ್ರದಾಯಿಕ ಯೆಹೂದ್ಯರ ವಿಶ್ವಾಸದ ಮಾತುಗಳ ಸಾರಾಂಶ ಇಂತಿವೆ :–

"ನಾನು ಸತ್ಯವಾದ ಮತ್ತು ಸಮರ್ಪಕವಾಗಿ ನಂಬುವುದೆಂದರೆ (1) ದೇವರು ಸೃಷ್ಟಿಕರ್ತನು, ತನ್ನ ಸೃಷ್ಟಿಯ ಎಲ್ಲವುಗಳನ್ನು ಪರಿಪಾಲಿಸುವಾತನು ಮತ್ತು ಉಂಟುಮಾಡುವಾತನೂ ಆಗಿದ್ದಾನೆ, (2) ಸೃಷ್ಟಿಕರ್ತನು ಒಬ್ಬನೇ, ಆತನು ಮಾತ್ರವೇ ಈಗಲೂ ಯಾವಾಗಲೂ ನಮ್ಮ ದೇವರಾಗಿದ್ದಾನೆ, (3) ಸೃಷ್ಟಿಕರ್ತನು ಭೌತಿಕವಾದವನಲ್ಲ, ಯಾವುದೇ ದೈಹಿಕ ಗುಣಲಕ್ಷಣ ವುಳ್ಳವನಾಗಿದ್ದಾನೆಂದು ಗ್ರಹಿಸಲಾಗದು ಮತ್ತು ಯಾವುದೇ ದೈಹಿಕ ಮೂಲವಸ್ತುವನ್ನು ಆತನಿಗೆ ಹೋಲಿಸಲಾಗದು, (4) ಆತನಿಗಿಂತ ಮೊದಲು ಏನೂ ಇದ್ದಿಲ್ಲ, ಮತ್ತು ಆತನು ಸದಾಕಾಲಕ್ಕೂ ಇರುವಾತನಾಗಿದ್ದಾನೆ, (5) ಆತನನ್ನು ಮಾತ್ರವೇ ಆರಾಧಿಸತಕ್ಕದ್ದು, ಬೇರೆ ಯಾರನ್ನೂ ಆರಾಧಿಸಕೂಡದು, (6) ಪ್ರವಾದಿಗಳ ಎಲ್ಲಾ ಮಾತುಗಳೂ ಸತ್ಯವಾದವುಗಳೇ, (7) ಮೋಶೆಯ ಪ್ರವಾದನೆಗಳು ಸತ್ಯವಾಗಿವೆ, ಆತನ ಹಿಂದೆ ಜೀವಿಸಿದ ಮತ್ತು ಮುಂದೆ ಜೀವಿಸಲಿರುವ ಎಲ್ಲಾ ಬುದ್ಧಿವಂತ ಮನುಷ್ಯರಲ್ಲಿ, ಆತನೇ ಮುಖ್ಯವಾದವ ನಾಗಿದ್ದಾನೆ (ಅಂಥಾಃ ಕೀರ್ತಿವಂತ ಮತ್ತು ಯೋಗ್ಯ ಪಾತ್ರದ ಬಗ್ಗೆ ಅವರ ಈ ಮಿತಿಮೀರಿದ ಅಂದಾಜಿಗಾಗಿ ನಾವು ಅವರನ್ನು ಕ್ಷಮಿಸಬಹುದು), (8) ನಮ್ಮ ಕೈಯಲ್ಲಿರುವ ಎಲ್ಲಾ ಧರ್ಮಶಾಸ್ತ್ರವೂ ನಮ್ಮ ದೇವರಿಂದಲೇ ನಮ್ಮ ಒಡೆಯನಾದ ಮೋಶೆಗೆ ನೀಡಲ್ಪಟ್ಟವುಗಳು, (9) ಈ ಧರ್ಮನಿಯಮಗಳನ್ನು ಮತ್ತು ದೇವರಿಂದ ಕೊಡಲ್ಪಡುವ ಬೇರೆ ಯಾವ ಧರ್ಮನಿಯಮಗಳನ್ನು ಎಂದಿಗೂ ಬದಲಾಯಿಸ ಕೂಡದು, (10) ದೇವರು ಮನುಷ್ಯರ ಎಲ್ಲಾ ಆಲೋಚನೆಗಳನ್ನೂ ಕಾರ್ಯಗಳನ್ನು ಅರ್ಥ ಮಾಡಿಕೊಳ್ಳುತ್ತಾನೆ, ಪ್ರವಾದನೆಯಲ್ಲಿ ಬರೆದಿರುವಂತೆ – "ಅವರೆಲ್ಲರ ಹೃದಯಗಳನ್ನು ನಿರ್ಮಿಸಿದವನೂ, ಅವರ ಕೃತ್ಯಗಳನ್ನೆಲ್ಲಾ ವಿವೇಚಿಸುವವನೂ ಆತನೇ" (ಕೀರ್ತನೆ 33:15), (11) ದೇವರು ತನ್ನ ಆಜ್ಞೆಗಳನ್ನು

ಪಾಲಿಸುವವರಿಗೆ ಒಳ್ಳೆಯ ಪ್ರತಿಫಲಗಳನ್ನೇ ನೀಡುತ್ತಾನೆ ಮತ್ತು ಅವುಗಳನ್ನು ಉಲ್ಲಂಘಿಸುವವರನ್ನು ಶಿಕ್ಷಿಸುತ್ತಾನೆ, (12) ಮೆಸ್ಸೀಯನು ಇನ್ನೂ ಬರಬೇಕಾಗಿದೆ, ಆತನು ತನ್ನ ಬರೋಣದ ಬಗ್ಗೆ ತಡಮಾಡುತ್ತಿರುವುನಾದರೂ 'ನಾನು ಆತನ ಬರೋಣಕ್ಕಾಗಿ ಕಾಯುತ್ತಿರುತ್ತೇನೆ', (13) ಸತ್ತವರು ಸೃಷ್ಟಿಕರ್ತನಿಗೆ ಯೋಗ್ಯರಾಗಿ ಕಂಡುಬಂದರೆ ಪುನಃ ಜೀವಹೊಂದಿಕೊಳ್ಳುವರು, ಆತನ ನಾಮವು ಆಶೀರ್ವದಿಸಲ್ಪಡುವುದು, ಆತನ ನೆನಪನ್ನು ಅಂತ್ಯವಿಲ್ಲದೆ ಆಚರಿಸಲಾಗುವುದು. ಆಮೆನ್".

ಅವರ ದೇವಾಲಯವು ನಾಶನಗೊಂಡದ್ದರಿಂದ ಮತ್ತು ಅವರ ಚದುರುವಿಕೆಯ ಕಾರಣ, ಯಜ್ಞ ಸಮರ್ಪಣೆಗಳನ್ನು ಸ್ಥಗಿತಗೊಳಿಸಲಾಯಿತು. ಆದರೆ ಹೆಚ್ಚಿನ ಇತರೆ ವಿಷಯಗಳಲ್ಲಿ ಸಾಂಪ್ರದಾಯಿಕ ಯೆಹೂದ್ಯರು ಮೋಶೆಯ ಅಗತ್ಯತೆಗಳನ್ನು ಇನ್ನೂ ಪಾಲಿಸಬೇಕಾಗಿದೆ. ಅವರ ಆರಾಧನೆಯು ಹಿಂದಿನಂತೆಯೇ ಧರ್ಮ ಗ್ರಂಥವನ್ನು ಓದುವುದು, ಪ್ರಾರ್ಥನೆ ಮತ್ತು ಸ್ತೋತ್ರಗಳನ್ನು ಸಲ್ಲಿಸುವುದು ಇವುಗಳನ್ನು ಒಳಗೊಂಡಿದೆ. ಅವರ ತುತ್ತೂರಿ ಹಬ್ಬದ ಎರಡನೆಯ ದಿನದಲ್ಲಿ ಅವರು ಅಬ್ರಹಾಮನು ತನ್ನ ಮಗನಾದ ಇಸಾಕನನ್ನು ಸಮರ್ಪಣೆಯ ಮಾಡಲು ಸಿದ್ಧನಾದ ಬಗ್ಗೆ, ದೇವರು ಆತನ ಮತ್ತು ಆತನ ಸಂತಾನಕ್ಕೆ ನೀಡಿದ ಆಶೀರ್ವಾದಗಳ ವಿವರಗಳನ್ನು ಓದುತ್ತಾರೆ. ನಂತರದಲ್ಲಿ ಅವರು ತುತ್ತೂರಿಯನ್ನು ಊದಿ, ದೇವರು ತಮ್ಮನ್ನು ಪುನಃ ಯೆರೂಸಲೇಮಿಗೆ ಕರೆತರಲಿ ಎಂದು ಪ್ರಾರ್ಥಿಸುತ್ತಾರೆ.

ಸಾಂಪ್ರದಾಯಿಕರಲ್ಲದ ಅಥವಾ ಸುಧಾರಿತ ಯೆಹೂದ್ಯರು, 'ತೀವ್ರವಾದಿಗಳು' (Radicals). ಸಾಂಪ್ರದಾಯಿಕರಿಂದ ಬಹಳವಾಗಿ ಭಿನ್ನವಾಗಿರುತ್ತಾರೆ. ಅವರಲ್ಲಿ ಅನೇಕರು ಮುಕ್ತವಾಗಿ ನಾಸ್ತಿಕರಾಗಿದ್ದು ವ್ಯಕ್ತಿಗತ ದೇವರನ್ನು ಅಲ್ಲಗಳೆಯುತ್ತಾರೆ. ಯಾವ ಮೆಸ್ಸೀಯನು ಬರಲಿದ್ದಾನೆ ಎಂಬುದನ್ನೂ ಅವರು ನಿರಾಕರಿಸುತ್ತಾರೆ. ಅವರು ಪ್ರವಾದನೆಯನ್ನು ಸಂಪೂರ್ಣವಾಗಿ ಅಲ್ಲಗಳೆಯುವುದಿಲ್ಲವಾದರೂ ಅವರು ಯೆಹೂದ್ಯ ದೇಶವೇ ಮೆಸ್ಸೀಯ, ಅದು ಕ್ರಮೇಣವಾಗಿ ಪ್ರಪಂಚದ ಸುಧಾರಣೆ ಮಾಡುವುದಾಗಿದೆ ಮತ್ತು ಮೆಸ್ಸೀಯನ ಬಗ್ಗೆ ಹೇಳಿರುವ ಬಾಧೆಗಳು ಅವರು ಜನರಾಗಿ ಅನುಭವಿಸಿದ ಕಷ್ಟ ತೊಂದರೆ ಮತ್ತು ಶ್ರಮೆಗಳ ಮೂಲಕ ನೆರವೇರಿದೆ ಎಂದು ಹೇಳುತ್ತಾರೆ. ಅವರಲ್ಲಿ ಇತರರು ನಾಗರೀಕತೆಯು ಮಾತ್ರವೇ ಅವರು ನಿರೀಕ್ಷಿಸುವ ಈ ಲೋಕದ ಒಬ್ಬನೇ ರಕ್ಷಕ ಎಂದು ಹೇಳುತ್ತಾರೆ.

ನಿಸ್ಸಂದೇಹವಾಗಿ, ಮೊದಲಿನ ವರ್ಗದವರೇ ಪುನಃ ಕೂಡಿಕೊಂಡು ಮೆಸ್ಸೀಯನು ಎರಡನೆಯ ಸಾರಿ ಮಹಿಮೆ ಮತ್ತು ಅಧಿಕಾರದಿಂದ ಬರುವಾಗ "ಆಹಾ, ಈತನೇ ನಮ್ಮ ದೇವರು, ನಮ್ಮನ್ನು ರಕ್ಷಿಸಲಿ" ಎಂದು ಈತನನು ನಿರೀಕ್ಷಿಸಿಕೊಂಡಿದ್ದೇವೆ. ಈತನೇ ಯೆಹೋವನು. ಈತನನ್ನು ನಿರೀಕ್ಷಿಸಿಕೊಂಡಿದ್ದೇವೆ; ಈತನ ರಕ್ಷಣೆಯಲ್ಲಿ ಆನಂದಿಸಿ ಉಲ್ಲಾಸಪಡುವೆವು" (ಯೆಶಾಯ 25:9) ಎಂದು ಹೇಳುವರು. ಮೆಸ್ಸಿಯನ ಬೋಧನೆಗಳ ಸ್ಪಷ್ಟವಾದ ಬೆಳಕಿನಲ್ಲಿ, ಈಗಲೂ ದೇವರ ನಿಯಮಗಳಿಗೆ ಅಮೂಲ್ಯವಾದ ಸೇರ್ಪಡೆಗಳು ಎಂದೆಣಿಸಿರುವ ವ್ಯರ್ಥವಾದ ಸಂಪ್ರದಾಯಗಳು ಮಾಯವಾಗುವುವು. ದೇವರು ಇಸ್ರಾಯೇಲ್ಯರೊಡನೆ ಶಾಂತಿಯ ಬಗ್ಗೆ ಮಾತನಾಡುವ ಸಮಯವು ತೀವ್ರಗತಿಯಲ್ಲಿ ಸಮೀಪಿಸುತ್ತಿದೆ ಮತ್ತು ಅವರನ್ನು ಸಮಾಧಾನಪಡಿಸುವುದು ಮತ್ತು ಅವರ ಅಂಧತ್ವವನ್ನು ಪೂರ್ಣವಾಗಿ ಬದಲಾಯಿಸುವುದು. ಇದರಿಂದ ನಾವು ದೇವರು ಇಸ್ರಾಯೇಲ್ಯರೊಡನೆ ಶಾಂತಿಯ ಪ್ರಸ್ತಾಪ ಮಾಡುವಾಗ ಧರ್ಮನಿಂದನೆಯಿಂದ ಬಹುದೂರ ಅಲೆದಾಡಿದವರ ಅಂಧತೆಯು ಎಂದೂ ತೆಗೆಯಲ್ಪಡುವುದಿಲ್ಲ ಎಂಬ ಅರ್ಥವನ್ನು ನಾವು ಎಂದಿಗೂ ತಿಳಿಸುತ್ತಿಲ್ಲ. ದೇವರು ಹಾಗೆ ಮಾಡದಿರಲಿ (God forbid), ಎಲ್ಲರ ಮತ್ತು ಎಲ್ಲಾ ರಾಷ್ಟ್ರದವರ ಕುರುಡು ಕಣ್ಣುಗಳು ತೆರೆಯಲ್ಪಡುತ್ತವೆ; ಮತ್ತು ಎಲ್ಲಾ ಕಿವುಡ ಕಿವಿಗಳು ಮುಚ್ಚಲಾಗದೇ ಹೋಗುತ್ತವೆ. ಆದರೆ, ಹಿಂತಿರುಗಲಿರುವ ವಿಶೇಷ ಅನುಗ್ರಹವು ಈ ಧರ್ಮಭ್ರಷ್ಟ ಯೆಹೂದ್ಯರಿಗೆ ಯಾವುದೇ ವಿಶೇಷ ಕೃಪೆಯು ದೊರೆಯುವುದಿಲ್ಲ; "ಹೊರಗೆ ಮಾತ್ರ ಯೆಹೂದ್ಯ ನಾಗಿರುವವನು, ಬಾಹ್ಯತೋರಿಕೆಯುಳ್ಳವನು ಕೇವಲ ಕುಟುಂಬ ಸಂಬಂಧದಿಂದಾಗಲೀ ಮತ್ತು ಮುಖಭಾವದಿಂದಾಗಲೀ ಯೆಹೂದ್ಯನಲ್ಲ". ದೇವರು ಯೆಹೂದ್ಯರನ್ನು ಅಬ್ರಹಾಮನ ಮಕ್ಕಳು ಎಂದು ಯಾರನ್ನು ಅಂಗೀಕರಿಸುತ್ತಾನೆ ಎಂದರೆ ಅವರು ಆತನ ವಾಗ್ದಾನಗಳ ಬಗ್ಗೆ ಅಬ್ರಹಾಮನಲ್ಲಿದ್ದ ನಂಬಿಕೆಯನ್ನು ಮತ್ತು ದೇವರ ವಾಗ್ದಾನದಲ್ಲಿ ವಿಶ್ವಾಸವಿಟ್ಟಿರುವರೋ ಅವರನ್ನು ಮಾತ್ರ ಹೊಂದಿದ್ದಾರೆ.

### ಆಂಗ್ಲೋ– ಇಸ್ರಾಯೇಲ್ಯರು :

ಆಂಗ್ಲೋ–ಸಾಕ್ಸನ್ಸ್ ಬುಡಕಟ್ಟಿನ ಜನರು ಧರ್ಮಗ್ರಂಥದಲ್ಲಿ ವಾಗ್ದಾನಪಡಿಸಿದ ಇಸ್ರಾಯೇಲ್ಯರು ಎಂಬ ಹಕ್ಕೇಳಿಕೆಯ ಬಗ್ಗೆ ನಾವು ಇಲ್ಲಿ ನಮ್ಮ ಅಸಮ್ಮತಿಯನ್ನು ಸೂಚಿಸಲೇ ಬೇಕಾಗುತ್ತದೆ. ಸಂಕ್ಷಿಪ್ತವಾಗಿ ಹೇಳುವುದಾದರೆ, ಸಂಯುಕ್ತ ಸಂಸ್ಥಾನ

ಮುಂತಾದ ಕಡೆಯ ಜನರಾದ ಆಂಗ್ಲೋ–ಸಾಕ್ಸನ್‌ಗಳು ಸೊಲೊಮೋನನ ಮರಣಾನಂತರ ಯೂದ ಮತ್ತು ಬೆನ್ಯಾಮೀನ ಕುಲಗಳಿಂದ ಪ್ರತ್ಯೇಕಗೊಂಡಿದ್ದ ಇಸ್ರಾಯೇಲಿನ ಹತ್ತು ಕುಲಗಳ ಸಂತತಿಗಳಿಗೆ ಸೇರಿದವರು. ಇವರನ್ನು ಹಲವೊಮ್ಮೆ 'ಕಳೆದುಹೋದ ಹತ್ತು ಕುಲದವರು' ಎಂದು ಕರೆಯುವುದೂ ಉಂಟು. ಯಾಕೆಂದರೆ, ಎಲ್ಲಾ ಹನ್ನೆರಡು ಕುಲಗಳವರನ್ನು ಬಾಬೇಲಿನಲ್ಲಿ ಸೆರೆಹಿಡಿದ ನಂತರದಲ್ಲಿ, ಈ ಹತ್ತು ಕುಲಗಳವರು ಕಾನಾನ್ ದೇಶದಲ್ಲಿ ಎಂದೂ 'ಇಸ್ರಾಯೇಲ್ಯರಾಗಿ' ಪುನಃಸ್ಥಾಪಿತಗೊಳ್ಳಲಿಲ್ಲ. ಆದರೆ ಅನೇಕ ದೇಶಗಳಲ್ಲಿ ಕುಲಗಳಾಗಿ ವ್ಯಕ್ತಿಗಳಾಗಿ ಚದುರಿಸಲ್ಪಟ್ಟರು. ನಾವೀಗ ತಮ್ಮ ಪ್ರಯಾಣವನ್ನು ಗ್ರೇಟ್ ಬ್ರಿಟನ್ ಜಾಡುಹಿಡಿದು ಪತ್ತೆಹಚ್ಚಬಹುದು ಎಂಬ ವಿಚಾರಸರಣಿಯನ್ನು ಟೀಕಿಸುತ್ತಿದ್ದೇವೋ ಅವರು ಆಂಗ್ಲಭಾಷೆಯನ್ನು ಮಾತನಾಡುವ ಪ್ರಪಂಚದ ಜನರ ಮಹತ್ವದ ಮತ್ತು ಪ್ರಭಾವಗಳಿಂದ ತಾವುಗಳು ಇಸ್ರಾಯೇಲಿನವರು ಮತ್ತು ಇಸ್ರಾಯೇಲ್ಯರಿಗೆ ಮಾಡಿದ ವಾಗ್ದಾನಗಳಿಗೆ ಬಾಧ್ಯಸ್ಥರು ಎಂಬ ಸತ್ಯವನ್ನು ಪತ್ತೆಹಚ್ಚಬಲ್ಲದು ಎಂಬ ಹಕ್ಕೀಳಿಕೆ ನೀಡುವವರಾಗಿದ್ದಾರೆ.

ಇದಕ್ಕೆ ನಮ್ಮ ಉತ್ತರವೇನೆಂದರೆ: ಅವರುಗಳು 'ಕಳೆದು ಹೋದ ಕುಲಗಳು' ಎಂಬುದಕ್ಕೆ ನೀಡುವ ಕೆಲವೊಂದು ಸಾಕ್ಷ್ಯಗಳು ಬಲವಾದುದಕ್ಕಿಂತ ದೂರವಾಗಿವೆ ಎಂದು ಕಂಡುಬರುತ್ತವೆ. ಆದರೆ ಅವರ ಹಕ್ಕೀಳಿಕೆಗಳನ್ನೆಲ್ಲಾ ನಾವು ಒಪ್ಪಿಕೊಳ್ಳುವುದಾದರೂ, ಅದು ಅವರ ಸ್ಥಾನವನ್ನು ಸಾಬೀತುಪಡಿಸದು. ಆಂಗ್ಲೋ–ಸಾಕ್ಸನ್ ಕುಲದವರ ಮಹತ್ವ ಮತ್ತು ಪ್ರಭಾವಗಳಿಗೆ ಅವರುಗಳು ಸ್ವಾಭಾವಿಕ ಇಸ್ರಾಯೇಲ್ಯ ಸಂತತಿ ಎಂದಾಗಲೀ ಅಥವಾ ಕಳೆದು ಹೋದವರು ಎಂಬದರಿಂದ ಸಾಧಿಸಲು ಆಗದು. ಅವರ ಮಹತ್ವವು ಅವರ ಸ್ವಾತಂತ್ರ್ಯ ಮತ್ತು ಬುದ್ಧಿವಂತಿಕೆಯಿಂದಲೇ. ಇದನ್ನು ಅವರು ಕಳೆದುಹೋದದರಿಂದ ಪತ್ತೆ ಹಚ್ಚುವುದಲ್ಲ ಅಥವಾ ದೈಹಿಕರಾಗಿ ಅವರು ಇಸ್ರಾಯೇಲ್ಯರಾಗಿ ಜನಿಸಿದ್ದರಿಂದ ಪತ್ತೆಹಚ್ಚುವುದಲ್ಲ. ಆದರೆ, ಕ್ರಿಸ್ತನ ಸಿದ್ಧಾಂತಗಳಿಗೆ, ಅಬ್ರಹಾಮನ ಆತ್ಮೀಕ ಸಂತತಿಯವರು ಅವರ ಮಧ್ಯೆ ಬೆಳಕನ್ನು ಬೀರಿದ ಪರಿಣಾಮವಾಗಿದೆ.

ಆ ಹತ್ತು ಕುಲಗಳು ಎರಡು ಕುಲಗಳಿಂದ ಬಿಟ್ಟುಹೋದರೆಂಬ ಸತ್ಯಸಂಗತಿಯು ಅವರಿಗೆ ಗೌರವ ತರುವಂಥಾದ್ದಲ್ಲ, ಅದಕ್ಕೆ ವಿರೋಧವಾದುದು. ಇದು ಅವರುಗಳು ದೇವರ ವಾಗ್ದಾನವನ್ನು ತಿರಸ್ಕರಿಸುವ ಮನಸ್ಸುಮಾಡಿದರು ಎಂಬುದನ್ನು ಸಾಬೀತುಪಡಿಸುತ್ತದೆ. ಇದು ಅಪನಂಬಿಕೆಯ ಧರ್ಮಭ್ರಷ್ಟತೆಗೆ ಸಂಕೇತವಾಗಿದೆ, ಏಕೆಂದರೆ ಧರ್ಮನಿಯಮಗಳನ್ನು ನೀಡುವಾತನು, ರಕ್ಷಕನು, ವಿಮೋಚಕನು, ಅರಸನು ಆದವನ ಮೂಲಕವಾಗಿ ವಾಗ್ದಾನಗಳು ನೆರವೇರಬೇಕಾಗಿದೆ, ಮತ್ತು ಆತನು ಯೂದಾಯದ ಮೂಲಕ ಬರುತ್ತಾನೆ ಎಂಬುದನ್ನು ದೇವರು ಅವರಿಗೆ ಮುಂದಾಗಿ ತಿಳಿಸಿದ್ದನು. ಯೂದಾಯ ಕುಲವಲ್ಲದೇ, ಬೆನ್ಯಾಮೀನ ಕುಲವು ಏಕೈಕ ಕುಲವು – ದಂಗೆಯ ಸಮಯದಲ್ಲಿ ದೇವರ ವಾಗ್ದಾನದಲ್ಲಿ ನಂಬಿಕೆಯನ್ನು ವ್ಯಕ್ತಪಡಿಸಿತು. ಆದರೆ ಬಾಬೇಲಿನ ಸೆರೆಯಿಂದ ಕಾನಾನಿಗೆ ಹಿಂತಿರುಗಿ ಬರುವಾಗ, ಅನೇಕರು ದೇವರಲ್ಲಿ, ಆತನ ವಾಗ್ದಾನದಲ್ಲಿ ವಿಶ್ವಾಸದ ಮುಂದುವರಿಕೆಯನ್ನು ತೋರಿದ್ದರೂ ಅವುಗಳು ಹೆಚ್ಚಾಗಿ ಬೆನ್ಯಾಮೀನ್ ಮತ್ತು ಯೂದ ಕುಲಗಳೇ ಆಗಿದ್ದವು, ಆದರೆ ಹಿಂತಿರುಗಿ ಬಂದವರಲ್ಲಿ ಎಲ್ಲರೂ ಈ ಎರಡೂ ಕುಲದವರಲ್ಲ. ಅವರುಗಳಲ್ಲಿ ಕೆಲವರು ಬೇರೆ ಕುಲಗಳಿಗೆ ಸೇರಿದವರಾಗಿದ್ದರು. ಅವರುಗಳು ದೇವರನ್ನು ಪ್ರೀತಿಸುವವರಾಗಿದ್ದರು ಮತ್ತು ಪಶ್ಚಾತ್ತಾಪಗಳಿಂದ ಆತನನ್ನು ಬಯಸುವವರಾಗಿದ್ದರು, ಮತ್ತು ಇನ್ನೂ ಆತನ ವಾಗ್ದಾನಗಳ ಮೇಲೆ ಆತುಕೊಂಡವರಾಗಿದ್ದರು. ಪರಂತು, ಈ ಹತ್ತು ಕುಲಗಳಲ್ಲಿ ಅಪಾರವಾಗಿ ಹೆಚ್ಚಿನ ಸಂಖ್ಯೆಯ ಜನರು, ಮತ್ತು ಎರಡು ಕುಲಗಳವರು ಸಹ ವಾಗ್ದತ್ತ ದೇಶಕ್ಕೆ ಹಿಂತಿರುಗುವ ಅವಕಾಶವನ್ನು ತಮಗಾಗಿ ಉಪಯೋಗಿಸಿಕೊಳ್ಳದೆ, ಬಾಬೇಲನ್ನು ಮತ್ತಿತರ ದೇಶಗಳನ್ನು ಆರಿಸಿಕೊಂಡರು. ಅವುಗಳಲ್ಲಿ ಅನೇಕವು ವಿಗ್ರಹಾರಾಧನೆಗೆ ಬಿದ್ದಿದ್ದು ದೇವರ ವಾಗ್ದಾನದಲ್ಲಿ ಗೌರವವನ್ನು ಕಳಕೊಂಡಿದ್ದರು.

ಜೆರುಬ್ಬಾಬೆಲನ ನೇತೃತ್ವದಲ್ಲಿ ಅವರ ದೇಶಕ್ಕೆ ಕೆಲವರು ಮಾತ್ರವೇ ಹಿಂತಿರುಗಿ ಬಂದರು ಮತ್ತು ನೆಹಮಿಯನ ಮತ್ತು ಎಜ್ರನ ಸಂಗಡ ಬಂದವರಲ್ಲಿ ಯಾರೂ ಸೆರೆಯಾಳಾಗಿ ಕೊಂಡೊಯ್ದವರಲ್ಲ. ಅವರಲ್ಲಿ ಹೆಚ್ಚಿನವರು ಅನೇಕ ವರ್ಷಗಳ ಹಿಂದೆಯೇ ಬಾಬೇಲಿನಲ್ಲಿ ತೀರಿಕೊಂಡರು ಎಂಬುದನ್ನು ನಾವು ನೆನಪು ಮಾಡಿಕೊಳ್ಳಬೇಕು. ಇವರುಗಳು ಅವರ ಮಕ್ಕಳು, ಅವರ ಹೃದಯಗಳಲ್ಲಿ ಅವರ ತಂದೆಯರ ನಂಬಿಕೆಯ ಇನ್ನೂ ಉರಿಯುತ್ತಿತ್ತು. ಅವರು ಇನ್ನೂ ಅಬ್ರಹಾಮನ ಸಂತತಿಯವರಿಗೆ ನೀಡಿದ್ದ ಅಶೀರ್ವಾದಕರ ಮತ್ತು ಗೌರವಾನ್ವಿತ ವಾಗ್ದಾನಗಳನ್ನು ನಿರೀಕ್ಷಿಸುವವರಾಗಿದ್ದರು. ಈ ರೀತಿಯಲ್ಲಿ ಐವತ್ತು ಸಾವಿರಕ್ಕೂ ಕಡಿಮೆ ಮಂದಿಯು ಹಿಂತಿರುಗಿ ಬರೋಣದಲ್ಲಿ ಆಗ ಉಳಿದುಕೊಂಡ ಎಲ್ಲಾ

ಕುಲಗಳ ಇಸ್ರಾಯೇಲ್ಯರೂ ಒಳಗೊಂಡಿದ್ದರು. ಅವರುಗಳು ವಾಗ್ದತ್ತ ದೇಶಕ್ಕೆ ಹಿಂದಿರುಗಿ ಬಂದ ಕಾರ್ಯದಿಂದ ಅವರು ಇನ್ನೂ ಅಬ್ರಹಾಮನ ನಂಬಿಕೆಯುನ್ನು ಹಿಡುಕೊಂಡಿದ್ದಾರೆಂಬುದನ್ನು ತೋರಿಸಿಕೊಟ್ಟರು. ಇಸ್ರಾಯೇಲ್ಯರ ಎಲ್ಲಾ ಕುಲಗಳಿಂದ ಸೋಸಲ್ಪಟ್ಟ ಈ ಅತ್ಯಂತ ಸಮರ್ಥರ ಸಂತತಿಯವರಿಗೆ – ಪ್ರಧಾನವಾಗಿ ಎರಡು ಕುಲದವರು ಮತ್ತು ಎಲ್ಲಾ ಯೆಹೂದ್ಯರು, ಅವರಲ್ಲೂ ರಾಜವಂಶಸ್ಥ ಮತ್ತು ಪ್ರಬಲವಾದ ಕುಲ (ಯೂದ) ಇವರಿಗಾಗಿ ನಮ್ಮ ಕರ್ತನು ತನ್ನನ್ನು ಮತ್ತು ತನ್ನ ರಾಜ್ಯವನ್ನು ತನ್ನ ಪ್ರಥಮ ಆಗಮನದಲ್ಲಿಯೇ ಸಮಗ್ರ ಇಸ್ರಾಯೇಲನ್ನು ಪವಿತ್ರ ದೇಶವಾಗಿ ಪ್ರಸ್ತುತಿಪಡಿಸಿದನು.

ನಮ್ಮ ಕರ್ತನು ಅವರನ್ನು ಇಸ್ರಾಯೇಲೆಂದು ಉಲ್ಲೇಖಿಸಿದನೇ ಹೊರತು ಇಸ್ರಾಯೇಲಿನ ಭಾಗವೆಂದಲ್ಲ ಅಥವಾ ಕೇವಲ ಯೂದಾಯವೆಂದಲ್ಲ. ಆತನು ವಾಗ್ದಾನಕ್ಕೆ ಅಂಟಿಕೊಂಡಿರುವವರ ಬಗ್ಗೆಯೂ, ಮತ್ತು ಬೇರೆ ತಪ್ಪಿಸಿಕೊಂಡ ಕುರಿಮರಿಗಳಂತಿರುವ ಇಸ್ರಾಯೇಲ್ಯರ ಬಗ್ಗೆಯೂ ಮಾತನಾಡುತ್ತಾ– ಅವರು ಸುಳ್ಳು ಕುರುಬರುಗಳು ಅವರನ್ನು ದೇವರ ನಿರ್ದೇಶನದಂತೆ ನಡೆಸದೇ ಅವರದೇ ಮಾರ್ಗದಲ್ಲಿ ನಡೆಸಿದ್ದರಿಂದ ಸತ್ಯದಿಂದ ಬಹಳ ದೂರಕ್ಕೆ ಸರಿದಿದ್ದಾರೆ ಎಂದಿದ್ದಾನೆ. ಆದುದರಿಂದ "ತಪ್ಪಿಸಿಕೊಂಡ ಕುರಿಗಳಂತಿರುವ ಇಸ್ರಾಯೇಲ್ಯನ ಮನೆತನದವರ ಬಳಿಗೇ ಹೊರತು ಮತ್ತ್ಯಾರ ಬಳಿಗೂ ನಾನು ಕಳುಹಿಸಲ್ಪಟ್ಟವನಲ್ಲ" (ಮತ್ತಾಯ 15:24) ಎನ್ನುತ್ತಾನೆ. ಇಸ್ರಾಯೇಲ್ಯರ ಮನೆತನದವರಿಗೆ ಆತನ ಸೇವೆಯು ನಿರ್ಬಂಧಿಸಲ್ಪಟ್ಟಿತ್ತು ಎಂಬುದು ಹಿಂದಿನ ವಚನಗಳ ಸಾಮರಸ್ಯದಲ್ಲಿ ಕಂಡುಬರುತ್ತದೆ ಮತ್ತು ತಿಳುಕೊಳ್ಳಬಹುದು. 'ಎಲ್ಲಾ ಇಸ್ರಾಯೇಲ್ಯರು' ಎಂಬ ಪದವು, ನಮ್ಮ ಹನ್ನೆರಡು ಕುಲಗಳು ನಿರಂತರವಾಗಿ ದೇವರನ್ನು ಸೇವಿಸುತ್ತಿದ್ದರು ಮುಂತಾದ ಕರ್ತನ ಮತ್ತು ಅಪೋಸ್ತಲರ ಹೇಳಿಕೆಗಳು ಆತನ ಕಾಲದ ಯೆಹೂದ್ಯರು ಮಾತ್ರವೇ ಇಸ್ರಾಯೇಲ್ಯರೆಂದು ಮಾನ್ಯ ಮಾಡಲ್ಪಟ್ಟ ಪ್ರತಿನಿಧಿ ಗಳಾಗಿದ್ದರು ಎಂದು ಸೂಚಿಸುತ್ತವೆ. ಈ ಹೇಳಿಕೆಗೆ ಸಂಬಂಧಿಸಿದಂತೆ ನಮ್ಮ ಕರ್ತನ ಸೇವೆಯು ಇಸ್ರಾಯೇಲ್ಯರಿಗೆ ಸೀಮಿತವಾಗಿದ್ದು ಆತನ ಶಿಷ್ಯರು ಪಾಲೆಸ್ಟೈನಿನ ಯೆಹೂದ್ಯರಿಂದ ಹೊರಗೆ ಹೋಗುವುದನ್ನು ನಿಷೇಧಿಸುತ್ತದೆ (ಮತ್ತಾಯ 10: 5,6: 15:24).

ಅಪೋಸ್ತಲರು ಆ ಕಾಲದಲ್ಲಿ ಪಾಲೆಸ್ಟೈನಿನಲ್ಲಿ ವಾಸಿಸುತ್ತಿದ್ದವರ ಬಗ್ಗೆ ಮಾತನಾಡುವಾಗ "ಇಸ್ರಾಯೇಲ್" ಎಂಬ ಪದವನ್ನೇ ಹೊರತು "ಯೂದಾಯ" ಎಂಬ ಪದವನ್ನು ಬಳಸಲಿಲ್ಲ ಎಂಬುದನ್ನು (ಅ,ಕೃ. 2:22 ; 3:12; 5:35; 13:16; 21:28) ಮತ್ತು ಅವರು ಹೇಗೆ ಇಸ್ರಾಯೇಲ್ಯರ ಉಳಿಕೆಗಳು ಎಂಬ ಯೆಶಾಯನ ಮಾತುಗಳನ್ನು ಹೋಲಿಕೆ ರೂಪದಲ್ಲಿ ಸುವಾರ್ತೆಯನ್ನು ಸ್ವೀಕರಿಸಿದ ಕೆಲವರಿಗೆ ಅನ್ವಯಿಸಿದರೆಂಬುದನ್ನು ಗಮನಿಸಿರಿ (ರೋಮಾ. 9:4, 27, 29, 31–33; 10:1–4; 11;1, 7–14, 25, 26, 31) ಮತ್ತು ಉಳಿದವರ ಬಗ್ಗೆ ಕುರುಡರು ಮತ್ತು ಮುಗ್ಗರಿಸವವರೂ ಆಗಿದ್ದಾರೆ ಎಂದು ಹೇಳುತ್ತಾರೆ. ಹಾಗಾದರೆ, ಆಗ ಆಂಗ್ಲೋ–ಸಾಕ್ಸನ್ ಜನರು ಕಳೆದು ಹೋಗಿದ್ದ ಹತ್ತು ಕುಲಗಳ ಭಾಗವಾಗಿದ್ದಾರೆಂದು ನಿರೂಪಿಸುವಾಗಲೂ ಒಡಂಬಡಿಕೆಯ ಎಣಿಕೆಯಲ್ಲಿ ಅವರಿಗೆ ಯಾವ ಕೃಪೆಯೂ ಒದಗಿಬರಲಿಲ್ಲ ವೆಂಬುದನ್ನು ನಾವು ಸ್ಪಷ್ಟವಾಗಿ ನೋಡುತ್ತೇವೆ. ಯಾಕೆಂದರೆ ಅವರು ಇಸ್ರಾಯೇಲ್ಯ ನಿಬಂಧನೆಯನ್ನು ಪರಿತ್ಯಜಿಸಿ ವಿಗ್ರಹಾರಾಧಕರೂ, ಅವಿಶ್ವಾಸಿಗಳೂ ಬಹಳಮಟ್ಟಿಗೆ ಅನ್ಯಜನರೂ ಆಗಿದ್ದಾರೆ. ಇದರೊಂದಿಗೆ, ಈಗಾಗಲೇ ಗಮನಿಸಿರುವಂತೆ (Vol. II, Chapter VII) ಅವರೆಲ್ಲರೂ ಅಬ್ರಹಾಮನ ಸ್ವಾಭಾವಿಕ ಸಂತಾನ ದವರಾಗಿದ್ದು ಕ್ರಿಸ್ತನನ್ನು ತಿರಸ್ಕರಿಸುವುದನ್ನು ಮುಂದುವರಿಸುತ್ತಿರುವ ಕ್ರಿಸ್ತನ ಮರಣದಿಂದೀಚೆಗೆ 1879ರವರೆಗೆ ದಯಪಾಲಿಸಲ್ಪಟ್ಟ ಎಲ್ಲಾ ಕೃಪಾವರ ಗಳಿಂದ ಅವರು ತೊಡೆದುಹಾಕಲ್ಪಟ್ಟವರೂ ಆಗಿದ್ದಾರೆ. ಕಾಲಾನುಕ್ರಮದಲ್ಲಿ ದೈವಿಕ ಕೃಪೆಯು ಅವರಿಗೆ ಹಿಂದಿರುಗುವ ಮತ್ತು ಅವರ ಅಂಧತ್ವವು ತೆಗೆದು ಹಾಕಲ್ಪಡುವುದು. ಹೀಗಾಗಿ ಕಳೆದ ಶತಮಾನಗಳಲ್ಲಿ ಆಂಗ್ಲೋ–ಸಾಕ್ಸನ್‌ರವರಿಗೆ ದೊರೆತಿರುವ ಪ್ರಾಮುಖ್ಯತೆಯು ಯಾವುದೇ ಅರ್ಥದಲ್ಲಿ ಇಸ್ರಾಯೇಲ್ಯರಿಗೆ ಹಿಂದಿರುಗುವ ಕೃಪೆಯಾಗಲಾಗಿರದು. ಕರ್ತನನ್ನು ತಿರಸ್ಕರಿಸಿದ ಮತ್ತು ಶಿಲುಬೆಗೆ ಹಾಕಿಸಿದ ಕಾರಣದಿಂದ ಕೃಪೆಯನ್ನು ಹಿಂಪಡೆಯಪಟ್ಟವರೇ ಈಗ ಆ ಕೃಪೆಯನ್ನು ಪುನಃ ಪಡಕೊಳ್ಳುವವರಾಗಿದ್ದಾರೆ. ಆ ಸಮಯದಲ್ಲಿ, ಇಂದಿನವರೆಗೂ ಇಸ್ರಾಯೇಲ್ಯರು 'ಯೆಹೂದ್ಯ'ರಿಂದ ಪ್ರತಿನಿಧಿಸಲ್ಪಡುತ್ತಿದ್ದಾರೆ (ರೋಮಾ. 2:9,10). ಈಗ ಯೆಹೂದ್ಯರು ಸುವಾರ್ತಾಯುಗದಲ್ಲಿ ಅಬ್ರಹಾಮನ ಸ್ವಾಭಾವಿಕ ಸಂತಾನವಾಗುವ ಕೃಪೆಯನ್ನು ಹೊಂದಿದ್ದಾರೆ (ಇವರುಗಳು ಆತ್ಮೀಕ 'ಸಂತತಿ'ಯೊಂದಿಗೆ ಸುವಾರ್ತಾ ಯುಗದಲ್ಲಿ ಇಸ್ರಾಯೇಲಿನ ಉಳಿಕೆಯವರು, ಅನ್ಯಜನರಿಂದ ಜನಶೇಷವಾಗಿ ಕೂಡಿಸಲ್ಪಟ್ಟವರಾಗಿದ್ದಾರೆ). ಅವರುಗಳು

ಲೋಕದ ಮೇಲಿನ ಎಲ್ಲಾ ಕುಟುಂಬಗಳಿಗೆ ದೇವರ ಆಶೀರ್ವಾದದ ಪಾರುಪತ್ಯಗಾರರಾಗಿ ಆಯಲ್ಪಟ್ಟಿದ್ದಾರೆ.

ಇಸ್ರಾಯೇಲ್ಯರಿಗೆ ಬರಲಿರುವ ಕೃಪೆಯು ಮೀಸಲಾದ ಕೃಪೆಯಾಗಿರುವುದಿಲ್ಲ. ಒಡಂಬಡಿಕೆ ವಾಗ್ದಾನಗಳಲ್ಲಿ ನಂಬಿಕೆಯಿಟ್ಟವರೆಲ್ಲರೂ ಆ ಹಿಂದಿರುಗುವ ಕೃಪೆಗಳನ್ನು ಸ್ವಾಭಾವಿಕ ಸಂತಾನ ದವರೊಡನೆ ಹಂಚಿಕೊಳ್ಳಬಹುದು. ಹೇಗೆಂದರೆ, ಈ ಯುಗದಲ್ಲಿ ಕ್ರಿಸ್ತನನ್ನು ಸ್ವೀಕರಿಸುವ ಯಾವುದೇ ಯೆಹೂದ್ಯನು ಆತ್ಮೀಕ ಆಶೀರ್ವಾದಗಳಿಗೆ ಮತ್ತು ಯುಗದಲ್ಲಿ ದಯಪಾಲಿಸಲ್ಪಡುವ ಕೃಪೆಗೆ ಅರ್ಹನಾಗಿರುತ್ತಾನೆ. ಅಂತೆಯೇ, ಹೇಗೆ ಕೇವಲ ಸಣ್ಣ ಉಳಿಕೆಯವರು ಮಾತ್ರವೇ ಪ್ರಾರಂಭದಲ್ಲಿ ಸುವಾರ್ತಾ ಕೃಪೆಯನ್ನು ನಂಬಿ ಸ್ವೀಕರಿಸಿದಂತೆಯೇ, ಯೆಹೂದ್ಯರೊಂದಿಗೆ, ಕೇವಲ ಸಣ್ಣ ಪ್ರಮಾಣದ ಮನುಕುಲದವರು ಮಾತ್ರವೇ ಮಹಿಮೆ ಹೊಂದಿದ ಕರ್ತನ ಮತ್ತು ಮಹಿಮೆ ಹೊಂದಿದ ಸಭೆಯ ಅಧೀನದಲ್ಲಿ ಸಹಸ್ರಮಾನದ ನೂತನ ನಿಯಮಗಳಿಗೆ ಮತ್ತು ಶರತ್ತುಗಳಿಗೆ ಸಿದ್ಧರಾಗುತ್ತಾರೆ. ಹೀಗಾಗಿ ಮೊದಲಿಗೆ, ಮನುಕುಲದ ಕೆಲವರು ಮತ್ತು ಯೆಹೂದ್ಯರು ಮಾತ್ರವೇ ಅದರಡಿಯಲ್ಲಿ ಆಶೀರ್ವಾದ ಹೊಂದಿಕೊಳ್ಳುತ್ತಾರೆ.

ಯೆಹೂದ್ಯನು, ದೀರ್ಘಕಾಲ ಹೆಣಗಾಟ ಮಾಡುವವನಾಗಿದ್ದು ಮತ್ತು ತನಗಾಗಿ ದೇವರ ಆಶೀರ್ವಾದವನ್ನು ಪಡಕೊಳ್ಳವಂತೆ ಧರ್ಮಶಾಸ್ತ್ರಕ್ಕೆ ವಿಧೇಯತೆಯನಾಗುವ ಕಾರ್ಯಗಳನ್ನು ನಂಬುವವ ನಾಗಿದ್ದರೂ, ಸುವಾರ್ತಾ ಯುಗದ ಆರಂಭದ ಲಕ್ಷಣಗಳಲ್ಲಿ ಮುಗ್ಗರಿಸುವವನಾಗಿದ್ದನು. ಕ್ರಿಸ್ತನ ಪರಿಪೂರ್ಣವಾದ ಕಾರ್ಯಗಳನ್ನು ಮತ್ತು ಪಾಪಗಳಿಗಾಗಿ ಮಾಡಿದ ಸಾಕಾಗುವಷ್ಟು ಬಲಿದಾನವನ್ನು ನಂಬುವ ಪ್ರತಿಯೊಬ್ಬನಿಗೆ ಕರ್ಮವಿಲ್ಲದೆ ದೊರೆಯುವ ಪಾಪ ಕ್ಷಮಾಪಣೆಯನ್ನು ನಂಬದೆ ಮುಗ್ಗಿರಿಸಿದನು. ಆದರೆ ಧರ್ಮಶಾಸ್ತ್ರಕ್ಕೆ ತೋರುವ ಯೆಹೂದ್ಯನ ಗೌರವವು ಸಹಸ್ರಮಾನದ ಉದಯದಲ್ಲಿ ಅವನ ಅನುಕೂಲತೆಗಾಗಿ ಹಿಂತಿರುಗುವುದು ಕಟ್ಟುನಿಟ್ಟಾದ ಅಗತ್ಯತೆಗಳಿಗೆ ಮತ್ತು ಆ ಯುಗದ ಧರ್ಮನಿಯಮಗಳಿಗೆ ಆತನಿಗಿಂತ ಹೆಚ್ಚಾಗಿ ಸಿದ್ಧರಾಗಿರುವುದಿಲ್ಲ; ಮತ್ತು ಕ್ರಿಸ್ತನ ಬಗ್ಗೆ ಮತ್ತು ಆತನು ಪಾಪಗಳ ಸಲುವಾಗಿ ಮಾಡಿದ ತ್ಯಾಗದ ಬಗ್ಗೆ ಆತನ ಕುರುಡುತನ ಇವುಗಳು ತೀರಿಹೋದ ಮೇಲೆ, ಕ್ರಿಸ್ತನ ಮೇಲೆ ನಂಬಿಕೆ ಹೊಂದಿದ ಮೇಲೆ ಹಿಂದೆ ಅಂಗೀಕರಿಸದಿದ್ದ ಕಾರ್ಯಗಳು ಈಗ ಅಗತ್ಯವಿದೆ. ಮತ್ತು ಯೆಹೂದ್ಯನು ಕ್ರಿಸ್ತನಲ್ಲಿನ ದೇವರ ಪ್ರೀತಿ ಮತ್ತು ಕೃಪೆಯನ್ನು ಅಂಗೀಕರಿಸುವಾಗ ಅನೇಕರು ಈಗ ಮಾಡುವಂತೆ ದೇವರ ನ್ಯಾಯವನ್ನು ಕಾಣದವರಂತೆ ಒರೆಯಾಗುವುದಿಲ್ಲ. ಇದಕ್ಕೆ ವ್ಯತಿರಿಕ್ತವಾಗಿ ಇತರರು ಕೆಲವು ಸಮಯಕ್ಕೆ ಕುರುಡರಾಗಿ ನ್ಯಾಯವನ್ನು ನೂಲನ್ನಾಗಿಯೂ, ನೀತಿಯನ್ನು ಮಟ್ಟಗೋಲ ನ್ನಾಗಿಯೂ ಎಂಬ ರಾಜ್ಯದ ನಿಯಮಗಳನ್ನು ಗ್ರಹಿಸಲು ಸಿದ್ಧರಾಗಿರುವುದಿಲ್ಲ.

ಯೆಹೂದ್ಯನು ಧರ್ಮಶಾಸ್ತ್ರವನ್ನು ತಪ್ಪಾದ ದೃಷ್ಟಿಕೋನದಿಂದ ಕುರುಡನಾಗಿರುವುದರಿಂದ, ಅನೇಕ ತಪ್ಪು ಬೋಧನೆಗಳಿಂದ ನಿರರ್ಥಕ ಮಾಡಿದ್ದರಿಂದ, ಅನೇಕ ಅನ್ಯಜನರು ಸಹಸ್ರಮಾನದ ಕೃಪಾ ಪರಿಸ್ಥಿತಿಯನ್ನು ಹಿಡುಕೊಳ್ಳುವುದಕ್ಕೆ ಅಡ್ಡಿ ಮಾಡಲ್ಪಟ್ಟಿದ್ದಾರೆ. ಇದಕ್ಕೆ ಪಾಪಗಳನ್ನು ಕ್ಷಮಿಸುವಲ್ಲಿ ಇರುವ ದೇವರ ದಯೆಯ ಬಗ್ಗೆ ಈಗಿನ ಕಾಲದ ಸುಳ್ಳು ಬೋಧಕರು ಬೋಧಿಸುವ ತಪ್ಪಾದ ಸಿದ್ಧಾಂತಗಳೇ ಕಾರಣವಾಗಿದೆ. ಅವರುಗಳು ತಮ್ಮನ್ನು ಕೊಂಡುಕೊಂಡ ಕ್ರಿಸ್ತನನ್ನು ಅಲ್ಲಗೆಳೆಯುವವರು (2 Pet. 2:1). ಮಾನವರ ಪುನರ್ವಶಕ್ಕೆ ಯಾವುದೇ ಈಡುಬಲಿಯ ಬೆಲೆಯನ್ನು ತೆರುವುದು ಅಗತ್ಯವಾಗಿದೆ ಎಂಬುದನ್ನು ಅಲ್ಲಗಳೆಯುವ ಕುತರ್ಕಗಳಿಂದ ದೇವರ ದಯೆಯನ್ನು ವ್ಯರ್ಥ ಗೊಳಿಸುತ್ತಾರೆ. ಅವರು ತಪ್ಪು ಮಾಡುವುದು ಮಾನವನ ಸಹಜ ಗುಣ, ಆದರೆ ಕ್ಷಮಿಸುವುದು ದೇವರ ಗುಣ ಎಂದು ಸಾಧಿಸುತ್ತಾರೆ. ಹೀಗಾಗಿ ಅವರ ತೀರ್ಮಾನದ ಪ್ರಕಾರ, ಸಂದರ್ಭಾನುಸಾರವಾದ ಪಾಪವನ್ನು ಕ್ಷಮಿಸ ಬಹುದಾಗಿದೆ. ಶಿಕ್ಷೆಯ ತೀವ್ರತೆ, ಈಡುಬಲಿ ಮುಂತಾದವುಗಳನ್ನು ಭಾವಿಸಬೇಕಿಲ್ಲ. ಯಾಕೆಂದರೆ, ಕ್ಷಮಿಸಲಿಕ್ಕೆ ಪಾಪವೇ ಇಲ್ಲವಾದರೆ ಅದು ದೇವರ ಸಂತೋಷವನ್ನು ಮತ್ತು ಕ್ಷಮಿಸುವ ಆತನ ಉದ್ಯೋಗವನ್ನೇ ಕಿತ್ತುಕೊಳ್ಳುತ್ತದೆ ಎಂದು ಹೇಳುತ್ತಾರೆ. ದೇವರ ನ್ಯಾಯದ ದೃಷ್ಟಿಕೋನವನ್ನು ಕಳಕೊಂಡವರಾಗಿ, ಅವರು ಶಿಲುಬೆಯಲ್ಲಿ ಸುರಿಯಲ್ಪಟ್ಟ ಕರ್ತನ ರಕ್ತದ ಮೂಲಕ, ಈಡುಬಲಿಯ ಮೂಲಕವೇ ಪಾಪ ಪರಿಹಾರ, ಅಂಥವರು ಮಾತ್ರವೇ ಕ್ರಿಸ್ತನನ್ನು ಅಂಗೀಕರಿಸಿಕೊಳ್ಳುವರು ಮತ್ತು ಪಾಪದ ವಿರುದ್ಧ ಹೆಣಗಾಡುವರು ಎಂಬ ಆತನ ಪುನಃಸಂಧಾನದ ಯೋಜನೆಯ ತತ್ವಜ್ಞಾನವನ್ನು ಅರ್ಥಮಾಡಿಕೊಳ್ಳುವಲ್ಲಿ ವಿಫಲರಾಗಿದ್ದಾರೆ. ದೇವರ ನ್ಯಾಯದ ಬಗ್ಗೆ ಮತ್ತು ಅದರ ಕಟ್ಟುನಿಟ್ಟಿನ ಬಗ್ಗೆ ಅವರ ಅಲಕ್ಷ್ಯದ ಶಿಥಿಲ ಭಾವನೆಗಳಿಂದ ಕುರುಡರಾಗಿದ್ದಾರೆ. ಕೆಲವು ಯೆಹೂದ್ಯರು ಮಾತ್ರವೇ ಕಟ್ಟುನಿಟ್ಟಾಗಿ ತಮ್ಮ ಸಾಮರ್ಥ್ಯಾನುಸಾರ ಸಿದ್ಧತೆಮಾಡಿಕೊಳ್ಳುತ್ತಾರೆ. ಇದು ಮುಂದಿನ ಯುಗದಲ್ಲಿ ಎಲ್ಲರಿಗೂ ಅಗತ್ಯವಾಗಿದೆ.

ಯೇಸುವಿನ ಮರಣವನ್ನು ಒಂದು ಈಡುಬಲಿಯೆಂದು, ಅನುಗುಣವಾದ ಬೆಲೆಯಾಗಿ, ಮಾನವರ ಪಾಪಕ್ಕಾಗಿ ನ್ಯಾಯೋಚಿತವಾದ ಪ್ರಾಯಶ್ಚಿತ್ತ ಎಂದು ಯೆಹೂದ್ಯರು ಮಾನ್ಯ ಮಾಡುವ ಸಿದ್ಧತೆಯ ದೃಷ್ಟಾಂತವಾಗಿ ನಾವು ಈ ಕೆಳಗೆ ಕ್ರಿಸ್ತನ ಕಡೆಗೆ ತಿರುಗಿಕೊಂಡ ಒಬ್ಬ ಯೆಹೂದ್ಯನ ಲೇಖಣಿಯಿಂದ ಈಗ ಸಂಪ್ರದಾಯವಾದ ಯೆಹೂದ್ಯರಿಂದ ಆಚರಿಸಲ್ಪಡುವ ಮಹಾ ಪಾಪ ನಿವೃತ್ತಿ ದಿನದ ಆಚರಣೆಯಲ್ಲಿ ಹೊರಬಿದ್ದ ಸಾಲುಗಳನ್ನು ಉಲ್ಲೇಖಿಸುತ್ತೇವೆ. Hebrew Christian ಎಂಬ ಪತ್ರಿಕೆಯಲ್ಲಿ ಇದುಕೆಳಕಂಡಂತೆ ಪ್ರಕಟವಾಗಿದೆ :–

“Yom Kippur", ಅಥವಾ ಮಹಾಪಾಪನಿವೃತ್ತಿ ದಿನವು ನನ್ನ ತಂದೆಯೊಂದಿಗೆ ಕಳೆಯುವ ಒಂದು ಗಮನಾರ್ಹವಾದ ದಿನವಾಗಿತ್ತು; ಯಾಕೆಂದರೆ, ಆ ದಿನ ಆತನು ಪಾಪ ಪರಿಹಾರಕ್ಕಾಗಿ ದಂಡ ತೆರುವ ಆ ದಿನದಲ್ಲಿ ಉಪವಾಸ ಪ್ರಾರ್ಥನೆ ಇವುಗಳನ್ನು ಮಾಡುವುದಲ್ಲದೆ, ತನ್ನನ್ನು ತಾನು ದೇಹದಂಡನೆಗೆ ಒಳಪಡಿಸುತ್ತಿದ್ದನು ಮತ್ತು ಇಡೀ ರಾತ್ರಿಯನ್ನು ಸಭಾಮಂದಿರದಲ್ಲಿಯೇ ಉಪಾಸನೆಯಲ್ಲಿ ಕಳೆಯುತ್ತಿದ್ದನು. ನನ್ನ ಭಕ್ತಿವಂತ ತಂದೆಯು ಆ ಮಹಾದಿನದಲ್ಲಿ ಕಣ್ಣೀರಿಡುತ್ತಾ ದೇವರು ಪಾಪನಿವಾರಣಾರ್ಥ ನೇಮಿಸಿದ್ದ ಕೆಲವೊಂದು ಯಜ್ಞಗಳನ್ನು ಸಮರ್ಪಣೆಗಳನ್ನು ಅನುಸರಿಸುವ ಮನಕರುಗುವ ಅರಿಕೆಗಳನ್ನು ಮಾಡುವುದನ್ನು ನಾನು ನೋಡಿದ್ದೇನೆ ಮತ್ತು ಅನೇಕ ಸಲ ನಾನೂ ಸಹಾ ಈ ಗೋಳಾಟದಲ್ಲಿ ಆತನೊಡಗೂಡಿ ನಮಗೆ ದೇವಾಲಯ ಇಲ್ಲದಿರುವುದಕ್ಕಾಗಿ, ಮಹಾಯಾಜಕನಿಲ್ಲದಿರುವುದಕ್ಕಾಗಿ, ಯಾವುದೇ ಬಲಿಪೀಠ, ಯಜ್ಞಸಮರ್ಪಣೆಗಳು ಇಲ್ಲದೇ ಇರುವುದಕ್ಕಾಗಿ ಅನುಕಂಪದಿಂದ ಕಣ್ಣೀರಿಟ್ಟಿದ್ದೇನೆ. ಆ ವಿಧಿಯುಕ್ತ ದಿನದ ಹಿಂದಿನ ದಿನದಲ್ಲಿ ಆತನು ಬೇರೆ ಯೆಹೂದ್ಯರೊಂದಿಗೆ ಜೊತೆಗೂಡಿ ಒಂದು ಹುಂಜವನ್ನು ತೆಗೆದುಕೊಂಡು, ಕೆಲವೊಂದು ಪ್ರಾರ್ಥನೆಗಳ ಪುನರುಚ್ಚಾರಣೆಯ ಸಮಯದಲ್ಲಿ ಆತನು ಆ ಜೀವಂತ ಹುಂಜವನ್ನು ತನ್ನ ತಲೆಯ ಸುತ್ತಲೂ ಮೂರು ಬಾರಿ ಸುತ್ತಿಸುತ್ತಾ “ಇದು ನನ್ನ ಬದಲಿಯಾಗಿದೆ, ಇದು ವಿನಿಮಯವಾಗಿದೆ, ಇದು ನನ್ನ ಪ್ರಾಯಶ್ಚಿತ್ತವಾಗಿರಲಿ, ಈ ಹುಂಜವು ಮರಣಕ್ಕೊಳಪಡುವುದು ಮತ್ತು ನಾನು ಆಶೀರ್ವಾದ ಜೀವಿತಕ್ಕೆ ಹೋಗುವೆನು” ಎಂಬ ಮಾತುಗಳನ್ನು ಪುನರುಚ್ಚರಿಸುತ್ತಿದ್ದನು. ನಂತರದಲ್ಲಿ ಆತನು ಅದನ್ನು ತನ್ನ ಕೈಗಳ ಮೇಲಿಟ್ಟು, ಆ ಕೈಗಳು ಸಮರ್ಪಣೆಯ ಕೈಯಾಗಿರುವಂತೆ ಮಾಡಿ ಅದನ್ನು ಕೂಡಲೆ ವಧಿಸಲು ಕೊಡುತ್ತಿದ್ದನು. ಈಗ ಇದು ಇಸ್ರಾಯೇಲಿನಲ್ಲಿ ಸುರಿಸಲ್ಪಡುವ ಒಂದೇ ರಕ್ತ ಇದಾಗಿದೆ. ಇನ್ನು ಮುಂದೆ ಹೋರಿ ಹೋತಗಳ ರಕ್ತವು ತಾಮ್ರದ ಯಜ್ಞವೇದಿಯ ಪಕ್ಕದಲ್ಲಿ ಹರಿಯುವದಿಲ್ಲ”

“ಒಂದು ಬಿಳಿಹುಂಜವನ್ನು ಪಡಕೊಳ್ಳಲು ನನ್ನ ತಂದೆಯು ಬಹಳಷ್ಟು ಶ್ರಮಪಡುತ್ತಿದ್ದನು ಮತ್ತು ಕೆಂಪು ಹುಂಜವನ್ನು ಒಟ್ಟಾರೆಯಾಗಿ ದೂರವಿರಿಸುತ್ತಿದ್ದನು. ಈ ರೀತಿ ಮಾಡಲು ಕಾರಣವೇನೆಂದು ನಾನು ಆತನನ್ನು ಕೇಳಿದಾಗ, ಆತನು ಕೆಂಪು ಹುಂಜವು ಈಗಾಗಲೇ ಪಾಪದಿಂದ ಮುತ್ತಿಕೊಂಡಿದೆ, ಯಾಕೆಂದರೆ, – ನಿಮ್ಮ ಪಾಪಗಳು ಕಡು ಕೆಂಪಾಗಿದ್ದರೂ ಉಣ್ಣೆಯಂತೆ ಬೆಳ್ಳಗಾಗುವುವು” (ಯೆಶಾಯ 1:18) ಎಂದು ಬರೆದಿರುವಂತೆ ಪಾಪವು ತಾನೇ ಕೆಂಪಾಗಿರುತ್ತದೆ ಎಂದು ಹೇಳುತ್ತಿದ್ದನು. ಮತ್ತು ಮುಂದುವರಿಸಿ ಆತನು “ರಬ್ಬಿಗಳು ಅದನ್ನು ಯೆಹೂದಿ ಕಾನೂನು ಪುಸ್ತಕ (Talmud) ಬರೆದಿರುವುದನ್ನು ನೀನು ನೋಡಬಹುದು, ಹುಂಜವು ಬಿಳಿಯದಾಗಿದ್ದರೆ ಅದು ಯಾವ ಪಾಪದಿಂದಲೂ ಸೋಂಕಿತವಾಗಿಲ್ಲ, ಆದುದರಿಂದ ಅದು ಯೆಹೂದ್ಯರ ಪಾಪಗಳನ್ನು ಹೊತ್ತುಕೊಳ್ಳುತ್ತದೆ; ಆದರೆ ಅದು ಕೆಂಪಾಗಿದ್ದರೆ, ಅದು ಒಟ್ಟಾರೆ ಪಾಪದಿಂದ ಆವರಿಸಲ್ಪಟ್ಟಿದೆ ಮತ್ತು ನಮ್ಮ ಅಪರಾಧಗಳನ್ನು ಹೊತ್ತುಕೊಳ್ಳಲು ಯೋಗ್ಯವಲ್ಲ” ಎಂದು ಹೇಳುತ್ತಿದ್ದನು.

“ಅವರು ಬೇರೆ ಪ್ರಾಣಿಗಿಂತ ಹುಂಜವನ್ನೇ ಆಯ್ಕೆ ಮಾಡಿಕೊಳ್ಳುತ್ತಿದ್ದ ಕಾರಣವೇನೆಂದರೆ, ಇಬ್ರಿಯ ಭಾಷೆಯಲ್ಲಿ ಮನುಷ್ಯನನ್ನು 'Gever' ಎಂದು ಕರೆಯುತ್ತಾರೆ. ಈಗ ಈ 'Gever' (ಮನುಷ್ಯ) ಪಾಪಮಾಡಿದರೆ, 'Gever' ಆ ಪಾಪದ ದಂಡನೆಯನ್ನು ಸಹಿಸಿಕೊಳ್ಳಬೇಕು. ಆದರೆ ಆ ದಂಡನೆಯು ಯೆಹೂದ್ಯರು ಸಹಿಸಿಕೊಳ್ಳುವುದಕ್ಕಿಂತ ಭಾರಿಯಾಗಿರುವುದರಿಂದ, ರಬ್ಬಿಗಳು ಅವರಿಗೆ ಹುಂಜವನ್ನು ಬದಲಿಯಾಗಿ ಹೇಳಿದ್ದಾರೆ. ಯಾಕೆಂದರೆ ಅದನ್ನು Chadlee ಉಪಭಾಷೆಯಲ್ಲಿ 'Gever' ಎಂದು ಹೇಳುತ್ತಾರೆ. ಹೀಗಾಗಿ 'Gever' ಪಾಪ ಮಾಡಿದಾಗ 'Gever'ನ್ನೇ ಅಂದರೆ 'ಹುಂಜ' ಅರ್ಪಿಸಲಾಗುತ್ತಿದ್ದು ಅದರಿಂದ ದೈವಿಕ ಕೃಪೆಯು ತೃಪ್ತಿಪಡಕೊಳ್ಳುತ್ತದೆ ಎಂದು ಭಾವಿಸಿದ್ದರು !

ಈ ವ್ಯರ್ಥವಾದ ಕಲ್ಪನೆಯು ಅತ್ಯಂತ ಎದ್ದುಕಾಣುವ ಸತ್ಯಕ್ಕೆ ಗಮನಾರ್ಹವಾದ ಪುರಾವೆಯಾಗಿದೆ ಎಂದು ಕಂಡುಕೊಳ್ಳಲಾಗುತ್ತದೆ. ಈ ದಿನಗಳಲ್ಲಿ ಅನೇಕ ಯೆಹೂದಿಗಳು ಪಾಪನಿವೃತ್ತಿಯನ್ನು ಒಟ್ಟಾರೆಯಾಗಿ ಅಲ್ಲಗಳೆಯುತ್ತಿದ್ದಾರೆ. ಪಾಪಗಳಿಗಾಗಿ ಯಜ್ಞವು ನಿರಪೇಕ್ಷವಾಗಿ ಅಗತ್ಯವಾಗಿದೆ ಮತ್ತು

ಪಾಪನಿವೃತ್ತಿಯಾಗದ ಪಶ್ಚಾತ್ತಾಪಕ್ಕೆ ರಕ್ಷಣೆ ದೊರೆಯುವುದಿಲ್ಲ ಎಂದಿರುವಾಗ, ದೇಶದ ಮುಖ್ಯ ಭಾಗದ ಜನರು ಇನ್ನೂ ಪಾಪ ಪ್ರಾಯಶ್ಚಿತ್ತದ ಅವಶ್ಯಕತೆಯಿದೆ ಎಂಬ ಭಾವನೆ ಇರಿಸಿಕೊಂಡಿದ್ದಾರೆ. ಪ್ರಾಯಶ್ಚಿತ್ತ ಪಶ್ಚಾತ್ತಾಪವಿಲ್ಲದೆ ರಕ್ಷಣೆಯಿಲ್ಲ. ರಬ್ಬೀಯರ ಕಲ್ಪನಾ ಕಥೆಗಳನ್ನು ಓದುವ ಬದಲು ಯೆಹೂದ್ಯರು ಸತ್ಯವೇದವನ್ನು ಓದಿದರೆ ಅವರುಗಳು ನಿಜ ಮೆಸ್ಸೀಯನಾದ ಯೇಸುಕ್ರಿಸ್ತನು ಒಬ್ಬ ಆಶೀರ್ವದಿತ ವ್ಯಕ್ತಿಯಾಗಿ ತನ್ನನ್ನೇ ಪಾಪ ನಿವಾರಣೆಯ ಈಡುಬಲಿಯನ್ನು ಸಮರ್ಪಿಸಿದ್ದಾನೆ. ಇದನ್ನು ಅವರುಗಳು ಹುಂಜವನ್ನು ಅರ್ಪಿಸುವುದರಿಂದ ದೊರೆಯುಬಹುದೆಂದು ಭಾವಿಸಿದ್ದಾರೆ. 'Gever' (ಮನುಷ್ಯ) ನು ಪಾಪಮಾಡಿದ್ದಾನೆ ಮತ್ತು 'Gever' (ಮನುಷ್ಯ) ನಾದ ಯೇಸುವೇ ತನ್ನ ಆತ್ಮವನ್ನು ಪಾಪದ ಪ್ರಾಯಶ್ಚಿತ್ತ ಯಜ್ಞವನ್ನಾಗಿ ಅರ್ಪಿಸಿದ್ದಾನೆ (ಯೆಶಾಯ 53:10).

## ಯೆಹೂದ್ಯರಿಗೆ ಮೊದಲು
## To the Jew First

ಹಾಗಾದರೆ, ನಾವು ಇಸ್ರಾಯೇಲ್ಯರು ಅವರ ಆಜ್ಞಾ ನಿಬಂಧನೆಗಳಿಂದ (ಕೆಲವು ನಂಬಿಗಸ್ತರನ್ನು ಹೊರತುಪಡಿಸಿ) ಕುರುಡರಾಗಿದ್ದಾರೆಂಬ (ರೋಮಾ. 11:9) ದೇವರ ಭವಿಷ್ಯವಾಣಿಯು ಸ್ವಾಭಾವಿಕ ರೀತಿಯಲ್ಲಿ ನೆರವೇರಿತು. ಮಾತ್ರವಲ್ಲದೆ ಈ ಮುಂದಿನ ಪ್ರವಾದನೆಯು ಅಂದರೆ ಸಹಸ್ರಮಾನ ಯುಗದ ಕೃಪೆಗಳು ಮತ್ತು ನಿಯಮಗಳು ಅವರಲ್ಲಿ ಅನೇಕರನ್ನು ಇತರರಿಗಿಂತ ಹೆಚ್ಚು ತ್ವರಿತವಾಗಿ ಆಶೀರ್ವದಿಸುತ್ತವೆ ಎಂಬುದು ಸಮರ್ಪಕವಾದ ಸ್ವಾಭಾವಿಕ ರೀತಿಯಲ್ಲಿ ಬರಲಿವೆ ಮತ್ತು ಸಮಂಜಸವಾದ ಕಾರಣಗಳಿಂದ ಫಲನೀಡುತ್ತವೆ.

ಹೀಗೆ ಸಹಸ್ರಮಾನದ ಕೃಪೆಗಳು ಯೆಹೂದ್ಯರಿಗೆ ಮೊದಲು, ಒಡಂಬಡಿಕೆ ಮುಂತಾದ ಕಾರಣಗಳಿಂದ ಸಹ ಸುವಾರ್ತಾ ಕೃಪೆಗಳು ಅವರಿಗೆ ಮೊದಲನೆಯದಾಗಿ ನೀಡಲ್ಪಟ್ಟಿವೆ. ಹೀಗಾಗಿ ಇದು – "ಇಗೋ, ಈತನು ಇಸ್ರಾಯೇಲ್ ಜನರಲ್ಲಿ ಅನೇಕರು ಬೀಳುವುದಕ್ಕೂ ಅನೇಕರು ಏಳುವುದಕ್ಕೂ ಕಾರಣನಾಗಿರುವನು" (ಲೂಕ 2:34) ಎಂದು ಅಂತಿಮವಾಗಿ ಸಿಮಿಯೋನನು ಪ್ರವಾದಿಸಿದಂತೆ ಮತ್ತು ಇದುವರೆಗೆ ಕೃಪೆಯಿಂದ ಬಿದ್ದುಹೋಗಿರುವ ಆ ಜನಾಂಗವನ್ನು ಎಬ್ಬಿಸುವ ಸಮಯವು ಸಮೀಪವಾಗಿದೆ.

ಆದರೆ, ಈ ವಾಗ್ದಾನಗಳನ್ನು ಬೆಂಬಲಿಸುವಂತೆ ನೋಡುವ – "ಇದಾದ ಮೇಲೆ ನಾನು ಹಿಂತಿರುಗಿ ಬಂದು ದಾವೀದನ ಬಿದ್ದು ಹೋಗಿರುವ ಗುಡಾರನ್ನು ಎತ್ತುವೆನು, ಅದರಲ್ಲಿ ಹಾಳಾದದ್ದನ್ನು ನಾನು ಸರಿಮಾಡಿಸಿ ಅದನ್ನು ನೆಟ್ಟಗೆ ನಿಲ್ಲಿಸುವೆನು" (ಅ.ಕೃ. 15:16); "ಆತನು ಮಹಾಪುರುಷನಾಗಿ ಪರಾತ್ಪರನ ಕುಮಾರನೆನಿಸಿ ಕೊಳ್ಳುವನು; ಇದಲ್ಲದೆ ದೇವರಾಗಿರುವ ಕರ್ತನು ಆತನ ಮೂಲಪಿತನಾದ ದಾವೀದನ ಸಿಂಹಾಸನವನ್ನು ಆತನಿಗೆ ಕೊಡುವನು" (ಲೂಕ 1:32) ಮತ್ತು "ನನ್ನ ಸೇವಕನಾದ ದಾವೀದನು ಅವರಿಗೆ ರಾಜನಾಗಿರುವನು; ಅವರೆಲ್ಲರಿಗೂ ಒಬ್ಬನೇ ಪಾಲಕನಿರುವನು; ಅವರು ನನ್ನ ನಿಯಮಗಳನ್ನು ಅನುಸರಿಸಿ ನನ್ನ ವಿಧಿಗಳನ್ನು ಕೈಕೊಂಡು ಆಚರಿಸುವರು" (ಯೆಹೆಜ್ಕೇಲ 37:24) ಎಂಬ ಹೇಳಿಕೆಗಳನ್ನು ಅಕ್ಷರಶಃ ತೆಗೆದುಕೊಳ್ಳಬೇಕೆಂಬ ಅನೇಕರ ಅಭಿಪ್ರಾಯಗಳಿಂದ ಉಂಟಾಗುವ ಬಹಳ ಸಾಮಾನ್ಯವಾದ ತಪ್ಪಿನಿಂದ ನಾವು ಕಾಪಾಡಿ ಕೊಳ್ಳಬೇಕಾಗಿದೆ. ಇಸ್ರಾಯೇಲ್ಯರು ತಮ್ಮ ನಾಡಿಗೆ ಹಿಂತಿರುಗುವರೆಂಬ ವಾಗ್ದಾನದ ಅಕ್ಷರಾರ್ಥವು ಮತ್ತು ಯೆರೂಸಲೇಮನ್ನು ಅದರ ಸ್ವಂತ ರಾಶಿಯ ಮೇಲೆ ಪುನಃ ಕಟ್ಟುವಿಕೆ ಇವುಗಳನ್ನು ಪ್ರಶ್ನೆಮಾಡುವಂತಿಲ್ಲ, ನಾವು ದಾವೀದನ ಮನೆ ಮತ್ತು ಸಿಂಹಾಸನವೆಂದರೆ ಅದು ಅಕ್ಷರಶಃವಾದ ಕಲ್ಲುಗಳು, ಮರದ ದಿಮ್ಮಿ ಮುಂತಾದವುಗಳು ಎಂಬ ಅರ್ಥವಲ್ಲವೆಂಬ ಸಮಾನವಾದ ಭರವಸೆಯುಳ್ಳವರಾಗಬೇಕು, ದಾವೀದನ ಮನೆಯ ಪುನಃಸ್ಥಾಪನೆಯು ದಾವೀದನ ಪೀಳಿಗೆಯಲ್ಲಿ ಯಾರಾದರೂ ಒಬ್ಬರಿಂದ ರಾಜ ಪದವಿಯ, ಸಾಮ್ರಾಜ್ಯದ ಪುನಃಸ್ಥಾಪನೆ ಎಂದು ನಿರ್ದೇಶಿಸಲಾಗಿದೆ. ಕ್ರಿಸ್ತ ಯೇಸುವು ವಾಗ್ದಾನ ಮಾಡಲ್ಪಟ್ಟ ದಾವೀದನ ವಂಶಸ್ಥನಾಗಿದ್ದಾನೆ, ಅವನು ಸಿಂಹಾಸನದ ಬಾಧ್ಯಸ್ಥನಾಗಿದ್ದಾನೆ; ಆತನ ಅಧಿಕಾರದ ಸ್ಥಾಪನೆಯು ಪ್ರಾರಂಭಗೊಳ್ಳುವಾಗ ಅದುವೇ ಏಳಿಗೆಯು ಪ್ರಾರಂಭವಾಗಲಿದೆ ಉರುಳಿಸಲ್ಪಟ್ಟು ಅನೇಕ ಶತಮಾನಗಳವರೆಗೆ ಧೂಳಿನಲ್ಲಿ ಮಲಗಿದ್ದ ಹಿಂದಿನ ತಾತ್ಕಾಲಿಕ ಮನೆಯ ಅಥವಾ ದಾವೀದನ ಗುಡಾರದ ಶಾಶ್ವತವಾದ ಸ್ಥಾಪನೆಯಾಗಿದೆ. ಹೀಗೆ, ಅದರಂತೆ, ಮೆಸ್ಸಿಯನು ಕುಳಿತುಕೊಳ್ಳಲಿರುವ 'ದಾವೀದನ ಸಿಂಹಾಸನ'ವೆಂದರೆ ದಾವೀದನು ತನ್ನ ಘನತೆ, ಶಕ್ತಿಯೊಡನೆ ಅಧಿಕಾರದೊಡನೆ ಕೆಲವು ವರ್ಷಗಳ ಕಾಲ ಅಧಿಕಾರ ಚಲಾಯಿಸಲು ಆಸನಾರೂಢನಾಗಿದ್ದ ಬಂಗಾರ ಮತ್ತು ದಂತ ಖಚಿತವಾದ ಮರದ ಸಿಂಹಾಸನವಲ್ಲ. ಆದರೆ ದಾವೀದನು ಕೆಲವು ವರ್ಷಗಳ ಅನುಭವಿಸಿದ

ಕಾರ್ಯಾಚರಣೆ ಅಥವಾ ಸಿಂಹಾಸನ, ಅಧಿಕಾರ ಸ್ಥಾನವನ್ನು ಇನ್ನೂ ಭವ್ಯವಾದ ರೀತಿಯಲ್ಲಿ ಯೆಹೋವನಿಂದ ಪ್ರತಿಷ್ಠೆಗೊಂಡ ನಮ್ಮ ಕರ್ತನಾದ ಯೇಸುವು ವಹಿಸಿಕೊಳ್ಳುವುದು.

ಆದರೆ, ದಾವೀದನು ಹೊಂದಿದ್ದ ಮತ್ತು ಚಲಾಯಿಸಿದ ಅಧಿಕಾರವು ಯಾವುದು? ಅದು ಯೆಹೋವನ ಅಧಿಕಾರವಾಗಿದೆ ಎಂದು ನಾವು ಉತ್ತರಿಸುತ್ತೇವೆ: ದಾವೀದನು "ಯೆಹೋವನ ಸಿಂಹಾಸನದ ಮೇಲೆ ಕೂತುಕೊಂಡನು" (1 ಪೂರ್ವ 29:23) ಮತ್ತು ಇದೇ ಅಧಿಕಾರವು ಕ್ರಿಸ್ತನಿಗೆ ಸಹಸ್ರಮಾನದ ಯುಗದಲ್ಲಿ ಬೆಂಬಲಿಸುವುದು. ಸರಿಯಾಗಿ ನೋಡುವಾಗ ದಾವೀದ ಮತ್ತು ಆತನ ಸಿಂಹಾಸನ ಅಥವಾ ದೈವಿಕ ಅಧಿಕಾರವು ಇಸ್ರಾಯೇಲ್ ಎಂಬ ಸಾಂಕೇತಿಕ ರಾಜ್ಯದಲ್ಲಿ ಸ್ಥಾಪಿತಗೊಂಡಿದ್ದು ಅದು ಕೇವಲ ಕ್ರಿಸ್ತನ ಮತ್ತು ಆತನ ರಾಜ್ಯದ ಸಂಕೇತಿಕೆವಾಗಿದೆ; ದಾವೀದನ ಮುಖ್ಯ ಗೌರವವನ್ನು ಮತ್ತು ಆತನು ಅರ್ಹನೆಂದು ಲೆಕ್ಕಮಾಡುವುದಾದರೆ ಅದು ಆತನ ರಾಜ್ಯದ ಭೂಲೋಕದ ಹಂತವನ್ನು ಇಮ್ಮಾನುವೇಲನು ಅರಸರುಗಳಲ್ಲಿ ಒಬ್ಬನಿಗೆ ಒಪ್ಪಿಸುವುದಾಗಿದೆ (ಕೀರ್ತನೆ 45 : 16).

ದಾವೀದನ ಹೆಸರು ಮತ್ತು ಆತನ ರಾಜ್ಯವು ಸಾಂಕೇತಿಕವಾಗಿತ್ತು. ದಾವೀದ ಎಂಬ ಹೆಸರು 'ಪ್ರಿಯನು' ಎಂಬುದನ್ನು ಸಾಂಕೇತಿಸುತ್ತದೆ. ಆ ದಿನದಲ್ಲಿ ಸಮಸ್ತ ಭೂಮಿಯ ಮೇಲೆ ಅರಸನಾಗಲಿರುವವನು 'ಪ್ರಿಯನಾಗಿರುವ ದೇವರ ಮಗನು', ಹಿಂದಿನ ಕಾಲದಲ್ಲಿ ಪ್ರಿಯನ ನಮೂನೆಯಾಗಿದ್ದ ದಾವೀದನಲ್ಲ. ಅದಲ್ಲದೇ ನೂತನ ಯೆರೂಸಲೇಮ್‌ನ ಪರಲೋಕದ ಅಥವಾ ಆತ್ಮೀಕ ನಗರವನ್ನೂ ಅದರಲ್ಲಿ 12 ಬುನಾದಿಗಳಿರುವ ಅಪೋಸ್ತಲರನ್ನೂ ಮತ್ತು ಪುರಾತನ ಯೆರೂಸಲೇಮಿನ ಹಳೆಯ ಗುಡ್ಡೆಯ ಮೇಲೆ ಪುನಃ ನಿರ್ಮಾಣ ಮಾಡಲಿರುವುದಕ್ಕಿರುವ ವ್ಯತ್ಯಾಸವನ್ನು ಗುರುತಿಸಬೇಕು. ಹಳೆಯ ಯೆರೂಸಲೇಮಿನ ವಾಗ್ದತ್ತ ಪುನಃಸ್ಥಾಪನೆಯು ಕೇವಲ ಕಟ್ಟಡ ಮುಂತಾದವುಗಳ ಪುನಃ ಕಟ್ಟುವಿಕೆಯನ್ನು ಮಾತ್ರವಲ್ಲ, ವಿಶೇಷವಾಗಿ ಇಸ್ರಾಯೇಲ್ ಸರ್ಕಾರದ ಮಾನ್ಯತೆಯೆಂಬ ಅರ್ಥನೀಡುತ್ತದೆ; ಯಾಕೆಂದರೆ ಪ್ರವಾದನೆಯುಲ್ಲಿರುವ ನಗರವು ಸದಾಕಾಲವೂ ಸರ್ಕಾರದ ಸಂಕೇತ ಅಥವಾ ಪ್ರತಿನಿಧಿತ್ವವಾಗಿದೆ. ಅದುದರಿಂದ, ಯೆರೂಸಲೇಮನ್ನು ಹಳೆಯ ಬುನಾದಿಯ ಮೇಲೆ ಪುನಃಸ್ಥಾಪನೆಗೊಳಿಸುವ ವಾಗ್ದಾನವು ಯೆರೂಸಲೇಮನ್ನು ಮೊದಲಿದ್ದಂತೆಯೇ ಮಾಡುವ ರಾಷ್ಟ್ರೀಯ ಪುನಃ ಸಂಘಟನೆಯ ಅರ್ಥವನ್ನು ನೀಡುತ್ತದೆ. ದೇವರು ಅಭಿಷೇಕಗೊಳಿಸಿದ ಜನರಿಗೆ ಈ ಅಧಿಕಾರವಿದೆ. ನೂತನ ಯೆರೂಸಲೇಮ್ ಜನರಿಗೆ ಅಗೋಚರವಾದ ಆತ್ಮೀಕ ಮಹಿಮೆ ಮತ್ತು ರಾಜ್ಯದ ಅಧಿಕಾರವುಳ್ಳದ್ದು. ಆದಾಗ್ಯೂ ಅಧಿಕ ಪ್ರಬಲವಾದ ಸುವಾರ್ತಾ ಯುಗದ ಸಭೆಯನ್ನು ಪ್ರತಿನಿಧಿಸುತ್ತದೆ. "ಪರಿಶುದ್ಧ ಪಟ್ಟಣವಾದ ಯೆರೂಸಲೇಮು ಪರಲೋಕದೊಳಗಿಂದ ದೇವರ ಬಳಿಯಿಂದ ಭೂಮಿಗೆ ಇಳಿದು ಬರುವುದು" (ಪ್ರಕಟನೆ 21:2). ನಮ್ಮ ಕರ್ತನ ಪ್ರಾರ್ಥನೆಯಲ್ಲಿನ ಬಿನ್ನಹವಾದ "ನಿನ್ನ ರಾಜ್ಯವು ಬರಲಿ" ಎಂಬ ಬೇಡಿಕೆಯನ್ನು ಈಡೇರಿಸುವುದು. ಅದರ ಬರೋಣವು ಹಂತ ಹಂತವಾಗಿರುತ್ತದೆಯೇ ಹೊರತು ತಕ್ಷಣವಾದುದ್ದಲ್ಲ. ಅದು ಈಗಾಗಲೇ ಕೆಳಗಿಳಿದು ಬರುತ್ತಿದೆ, ನಿಯಂತ್ರಣಕ್ಕೆ ಬರುತ್ತಿದೆ, ಇದರ ಫಲವಾಗಿ ನಾವು ಹಳೆಯ ಯೆರೂಸಲೇಮಿನ ಪುನಃಸ್ಥಾಪನೆಯ ಕಡೆಗೆ ನಡೆಸುವ ಕೆಲವೊಂದು ಪೂರ್ವಭಾವಿ ಹಂತಗಳನ್ನು ನೋಡುತ್ತೇವೆ. ಅಂತಿಮವಾಗಿ ನಮ್ಮ ಕರ್ತನ ಪ್ರಾರ್ಥನೆಯಲ್ಲಿ ಹೇಳಿರುವ ಫಲವು ನಿಜವಾಗುತ್ತದೆ. ದೇವರ ಚಿತ್ತವು ಪರಲೋಕದಲ್ಲಿ ನೆರವೇರುವ ಪ್ರಕಾರ ಭೂಲೋಕದಲ್ಲಿಯೂ ನೆರವೇರುವುದು. ನೂತನ ಯೆರೂಸಲೇಮ್ ಮತ್ತು ನೂತನ ಪರಲೋಕವು ಪರ್ಯಾಯವಾದವುಗಳು ಮತ್ತು ನೂತನ ಆತ್ಮೀಕ ಆಡಳಿತ ಶಕ್ತಿಯನ್ನು ಸಂಕೇತಿಸುವಂತಾದ್ದೂ ಆಗಿದೆ.

ಈಗಾಗಲೇ ಪರೀಕ್ಷಿಸಿದ ಪ್ರವಾದನೆಗಳು 1878ನೇ ವರ್ಷವು ಅರಸನಿಗಾಗಿ ಕಾಯುವ ಇಸ್ರಾಯೇಲ್ಯರ "ಇಮ್ಮಡಿ ಕಾಲ"ವು ಸಂಪೂರ್ಣಗೊಂಡಿದೆ ಮತ್ತು ಅದರಿಂದ ಕೃಪೆಗೆ ಹಿಂತಿರುಗುವ ಮತ್ತು ಅವರ ಕುರುಡುತನವು ದೂರಸರಿಯುವ ದಿನಾಂಕಕ್ಕೆ ಯುಕ್ತವಾಗಿದೆ ಎಂಬುದನ್ನು ಸೂಚಿಸುತ್ತದೆ. ಇದರ ನಂತರದ ಸಮಯವು ಸಂತೈಸಿರಿ, ಸಂತೈಸಿರಿ. ಯೆರೂಸಲೇಮಿನ ಸಂಗಡ ಹೃದಯಂಗಮವಾಗಿ ಮಾತಾಡಿರಿ; ಅದಕ್ಕೆ ಗಡುವು ತೀರಿತು – ವಿಧಿಸಿದ ದೋಷಫಲವೆಲ್ಲಾ ನೆರವೇರಿತು. ಅವರ ಎಲ್ಲಾ ಪಾಪಗಳಿಗೂ ಯೆಹೋವನ ಕೈಯಿಂದ ಎರಡರಷ್ಟು ಶಿಕ್ಷೆಯಾಯಿತು ಎಂದು ಆ ನಗರಿಗೆ ಕೂಗಿ ಹೇಳಿರಿ (ಯೆಶಾಯ 40:1–2) ಎಂದು ಕೂಗುವುದಕ್ಕೂ ಯುಕ್ತವಾಗಿದೆ.

ಆದುದರಿಂದ, ಆ ದಿನ ಮೊದಲುಗೊಂಡು, ನಾವು ಅಪೇಕ್ಷಿಸುವಂತೆ, ಇಸ್ರಾಯೇಲ್ಯರಿಗೆ ಕೃಪೆಯು ಹಿಂತಿರುಗುವ ಗುರುತುಗಳನ್ನು ನೋಡುತ್ತೇವೆ – ಇದು ಅವರ ಸ್ವಂತ ಸ್ಥಳದಲ್ಲಿ ಅವರು ಪುನಃ ನಿಜವಾಗಿ

ನೆಡಲ್ಪಡುವ ಮತ್ತು ಒಂದು ದೇಶವಾಗಿ ಅದನ್ನು ಪುನಃ ಕಟ್ಟುವ ದೇವರ ಅಪರಿಮಿತ ವಾಗ್ದಾನದ ಪರಿಣಾಮವಾಗಿದೆ; ಯಾಕೆಂದರೆ "ಇಸ್ರಾಯೇಲ್ಯರ ದೇವರಾದ ಯೆಹೋವನು ಇಂತೆನ್ನುತ್ತಾನೆ – ನಾನು ಈ ಸ್ಥಳದೊಳಗಿಂದ ಕಸ್ದೀಯರ ದೇಶಕ್ಕೆ ಕಳುಹಿಸಿಬಿಟ್ಟ ಸೆರೆಯವರಾದ ಯೆಹೂದ್ಯರನ್ನು ಈ ಉತ್ತಮವಾದ ಅಂಜೂರದ ಫಲಗಳಂತೆ ಲಕ್ಷಿಸಿ ಅವರಿಗೆ ಮೇಲನ್ನುಂಟುಮಾಡುವೆನು. [ಬಾಬಿಲೋನ್ – ಗೂಢವಾದ ಬಾಬಿಲೋನ್, ವ. 9ರಲ್ಲಿ ತೋರಿಸುವಂತೆ ಕ್ರೈಸ್ತ ಪ್ರಪಂಚ, ಅವರ ಪದಚ್ಯುತಿಯಿಂದ ಅವರು ಎಲ್ಲಾ ಕ್ರೈಸ್ತನಾಡುಗಳಲ್ಲೂ, ದೇಶಗಳಲ್ಲೂ ಚದುರಿಹೋಗಿದ್ದಾರೆ] ಅವರನ್ನು ಕಟಾಕ್ಷಿಸಿ ಈ ದೇಶಕ್ಕೆ ತಿರುಗಿ ಬರಮಾಡುವೆನು; [ಅವರನ್ನು ಶಿಸ್ತುಪಡಿಸಲು ಮತ್ತು ಶಿಕ್ಷಿಸಲು; ಮರೆಯಾಗಿ ಮಾಡುವ ಸತ್ಕಾರ್ಯ] ಅವರನ್ನು ಕಟ್ಟುವೆನು, ಕೆಡವುದಿಲ್ಲ; ನೆಡುವೆನು ಕೀಳುವುದಿಲ್ಲ. [ಇದನ್ನು ಅವರು ಸೆರೆಯಿಂದ ಅಕ್ಷರಶಃವಾದ ಬಾಬೇಲಿಗೆ ಹಿಂತಿರುಗಿ ಬಂದದಕ್ಕೆ ಉಲ್ಲೇಖಿಸಲಾಗದು, ಯಾಕೆಂದರೆ ಆ ಹಿಂದಿರುಗುವಿಕೆಯ ನಂತರ ಅವರನ್ನು ಪುನಃ ಕೆಳಕ್ಕೆ ಬೀಳಿಸಿ ಕಿತ್ತುಬಿಡಲಾಯಿತು] ಅವರು ನನ್ನನ್ನು ಯೆಹೋವನೆಂದು ಗ್ರಹಿಸತಕ್ಕ ಹೃದಯವನ್ನು ಅವರಿಗೆ ಅನುಗ್ರಹಿಸುವೆನು; ಅವರು ನನ್ನ ಜನರಾಗಿರುವರು, ನಾನು ಅವರ ದೇವರಾಗಿರುವೆನು; ಅವರು ನನ್ನ ಕಡೆಗೆ ಮನಃಪೂರ್ವಕವಾಗಿ ಹಿಂದಿರುಗಿ ಬರುವರು" (ಯೆರೆಮೀಯ 24: 5–7).

"ಯೆಹೋವನು ಹೀಗೆನ್ನುತ್ತಾನೆ – ಆಹಾ ನಾನು ಯಾಕೋಬಿನ ಮನೆಗಳ ದುರವಸ್ಥೆಯನ್ನು ತಪ್ಪಿಸಿ ಅವರ ನಿವಾಸಗಳನ್ನು ಕರುಣಿಸುವೆನು; ಪಟ್ಟಣವು (ಯೆರೂಸಲೇಮ್) ತನ್ನ ಹಾಳುದಿಬ್ಬದ ಮೇಲೆ ಪುನಃ ಕಟ್ಟಲ್ಪಡುವುದು. ಅರಮನೆಯು (ದೇವಾಲಯ) ತಾನಿದ್ದ ಸ್ಥಳದಲ್ಲೇ ನೆಲೆಯಾಗಿರುವುದು. ಅವರ ಸಂತಾನವು ಪೂರ್ವಸ್ಥಿತಿಯನ್ನು ಹೊಂದುವುದು. ಅವರ ಸಮಾಜವು ನನ್ನ ಮುಂದೆ ನೆಲೆಯಾಗಿರುವುದು. ಅವರನ್ನು ಬಾಧಿಸುವವರೆಲ್ಲರನ್ನೂ ದಂಡಿಸುವೆನು. ಅವರಲ್ಲೇ ಒಬ್ಬನು ಅವರ ಪ್ರಭುವಾಗಿರುವನು, ಅವರ ವಂಶದವರೇ ಅವರನ್ನಾಳುವನು; ನಾನು ಅವನನ್ನು ನನ್ನ ಹತ್ತಿರಕ್ಕೆ ಬರಗೊಡಿಸಲಾಗಿ ಅವನು ನನ್ನ ಸನ್ನಿಧಾನಕ್ಕೆ ಸೇರುವನು; ನನ್ನನ್ನು ಸಮೀಪಿಸುವುದಕ್ಕೆ ಯಾರು ಧೈರ್ಯಗೊಂಡಾರು? ಇದು ಯೆಹೋವನ ನುಡಿ (ಯೆರೆಮೀಯ 30:18, 20,21) "ಇಗೋ, ನಾನು ಅವರನ್ನು ಉತ್ತರದೇಶದಿಂದ (ರಷ್ಯಾದಿಂದ, ಅಲ್ಲಿ ಯೆಹೂದ್ಯರ ಸುಮಾರು ಮೂರನೆಯ ಒಂದು ಪಾಲು ಈಗ ವಾಸಿಸುತ್ತಿದ್ದಾರೆ) ಬರಮಾಡುವೆನು, ದಿಗಂತಗಳಿಂದ ಅವರನ್ನು ಕೂಡಿಸುವೆನು.... ಅವರೊಂದಿಗೆ ಕುರುಡರನ್ನೂ, ಕುಂಟರನ್ನೂ, ಗರ್ಭಿಣಿಯರನ್ನೂ, ದಿನತುಂಬಿದ ಗರ್ಭಿಣಿಯರನ್ನೂ ಒಟ್ಟಿಗೆ ಕರೆತರುವೆನು, ದೊಡ್ಡ ಗುಂಪಾಗಿ ಇಲ್ಲಿಗೆ ಹಿಂತಿರುಗುವರು. ಅವರು ಅಳುತ್ತಾ ನಡೆದುಬರುವರು, ಅವರ ವಿಜ್ಞಾಪನೆಗಳಿಂದಲೇ ಅವರನ್ನು ಮುಂದುವರೆಸುವೆನು; ಎಡವದ ಸಮಮಾರ್ಗದಲ್ಲಿ ನಡೆಸುತ್ತಾ ತುಂಬಿದ ತೊರೆಗಳ ಬಳಿಗೆ ಬರಮಾಡುವೆನು; ನಾನು ಇಸ್ರಾಯೇಲ್ಯರಿಗೆ ತಂದೆ, ಎಫ್ರಾಯೀಮು ನನ್ನ ಹಿರಿಯ ಮಗನಲ್ಲವೇ? ಜನಾಂಗಗಳೇ, ಯೆಹೋವನ ವಾಕ್ಯವನ್ನು ಕೇಳಿರಿ, ದೂರ ದ್ವೀಪಗಳಲ್ಲಿ ಸಾರಿರಿ! ಇಸ್ರಾಯೇಲ್ಯರನ್ನು ಚದುರಿಸಿದಾತನು ಕುರುಬನು ಮಂದೆಯನ್ನು ಕಾಯುವ ಕುರುಬನಂತೆ ಅವರನ್ನು ಕೂಡಿಸಿ ಕಾಪಾಡುವನು ಎಂದು ಪ್ರಕಟಿಸಿರಿ, ಯೆಹೋವನು ಯಾಕೋಬ್ಯರನ್ನು ವಿಮೋಚಿಸಿದ್ದಾನಲ್ಲಾ, ಅವರಿಗಿಂತ ಬಲಿಷ್ಠರ ಕೈಯಿಂದ ಅವರನ್ನು ಬಿಡಿಸಿದ್ದಾನಷ್ಟೆ. ಅವರು ಬಂದು ಚಿಯೋನ್ ಶಿಖರದಲ್ಲಿ ಹಾಡುವರು; ಧಾನ್ಯ, ದ್ರಾಕ್ಷಾರಸ, ಎಣ್ಣೆ, ಕರು, ಕುರಿಮರಿ, ಅಂತು ಯೆಹೋವನು ಅನುಗ್ರಹಿಸುವ ಎಲ್ಲಾ ಮೇಲುಗಳನ್ನು ಅನುಭವಿಸಲು ಪ್ರವಾಹವಾಗಿ ಬರುವರು; ಅವರ ಆತ್ಮವು ಹದವಾಗಿ ನೀರು ಹಾಯಿಸಿದ ತೋಟದಂತಿರುವುದು. ಅವರು ಇನ್ನು ಕಳೆಗುಂದರು (ಯೆರೆಮೀಯ 31: 8–12).

ಒಮ್ಮೆ ಅವರಿಂದ ತಿರಸ್ಕೃತನಾದ ವಿಮೋಚಕನು ಜೀವಿಸುತ್ತಿರುವ ಆ ಜನಾಂಗವನ್ನು ಪುನಃಸ್ಥಾಪಿಸಿ ಅವರನ್ನು ಮೇಲೆಕೆತ್ತುವನಲ್ಲದೆ, ಸತ್ತವರನ್ನೂ ಪುನಃಸ್ಥಾಪಿಸುವನು – "ಕರ್ತನಾದ ಯೆಹೋವನು ಇಂತೆನ್ನುತ್ತಾನೆ – ನನ್ನ ಜನರೇ ನೋಡಿರಿ. ನಾನು ನಿಮ್ಮ ಗೋರಿಗಳನ್ನು ತೆರೆದು ಅವುಗಳೊಳಗಿಂದ ನಿಮ್ಮನ್ನು ಎಬ್ಬಿಸಿ, ಇಸ್ರಾಯೇಲ್ ದೇಶಕ್ಕೆ ಸೇರಮಾಡುವೆನು. ನನ್ನ ಜನರೇ, ನಾನು ನಿಮ್ಮ ಗೋರಿಗಳನ್ನು ತೆರೆದು ಅವುಗಳೊಳಗಿಂದ ನಿಮ್ಮನ್ನು ಎಬ್ಬಿಸಿದಾಗ ನಾನೇ ಯೆಹೋವನು ಎಂದು ನಿಮಗೆ ದೃಢವಾಗುವುದು. ನಾನು ನನ್ನ ಶ್ವಾಸವನ್ನು ನಿಮ್ಮಲ್ಲಿ ಹೊಗಿಸಿ ನಿಮ್ಮನ್ನು ಬದುಕಿಸಿ ನಿಮ್ಮ ದೇಶದಲ್ಲಿ ನೆಲೆಗೊಳಿಸಿವೆನು; ಆಗ ಯೆಹೋವನಾದ ನಾನೇ ಇದನ್ನು ನುಡಿದು ನಡೆಸಿದ್ದೇನೆ ಎಂದು ತಿಳಿದುಕೊಳ್ಳುವಿರಿ. ಇದು ಯೆಹೋವನ ಸಂಕಲ್ಪ" (ಯೆಹೆಜ್ಕೇಲ 37: 12–14).

ಈ ಅದ್ಭುತವಾದ ವಾಗ್ದಾನಗಳು ಇಪ್ಪತ್ನಾಲ್ಕು ಘಂಟೆಗಳ ದಿನದಲ್ಲಿ ನೆರವೇರುವುದಿಲ್ಲ, ಆದರೆ

ಸಹಸ್ರಮಾನದ ದಿನದಲ್ಲಿ. ಅವರಿಗೆ 1878ನೇ ವರ್ಷದಲ್ಲಿ ಬರ್ಲಿನ್ನನಲ್ಲಿ ನಡೆದ ರಾಷ್ಟ್ರಗಳ ಕಾಂಗ್ರೆಸ್ಸಿನ ಫಲವಾಗಿ ಗುರುತಿಸಲ್ಪಟ್ಟ ಆರಂಭವಿತ್ತು. ಯೆಹೂದ್ಯರು ಶತಮಾನಗಳಿಂದ ಅನುಭವಿಸಿದಕ್ಕಿಂತ ಹೆಚ್ಚಾಗಿ ಇಂದು ಅವರ ಪಿತೃಗಳ ಭೂಮಿಯಲ್ಲಿ ಹೆಚ್ಚಿನ ಅನುಕೂಲತೆಗಳನ್ನು ಅನುಭವಿಸುತ್ತಿದ್ದಾರೆ. ಇನ್ನು ಮುಂದೆ ಉದ್ಧಟ ತುರ್ಕಿಗಳಿಗೆ, ಅವರು ಕೇವಲ ನಾಯಿಗಳಾಗಿರುವುದಿಲ್ಲ.

ಇಂಗ್ಲೆಂಡ್ ಈಗಾಗಲೇ ಪಾಲೆಸ್ಟೈನಿನ, ನಿಜವಾಗಿ ಅದು ಒಂದಾಗಿರುವ ಎಲ್ಲಾ ತುರ್ಕಿ ಏಷ್ಯಾ ಪ್ರಾಂತ್ಯಗಳ ಆಶ್ರಿತ ರಾಜ್ಯದ ಕಾರ್ಯಗಳನ್ನು ವಹಿಸಿಕೊಂಡಿದೆ ಎಂಬುದು ಸಾಮಾನ್ಯವಾಗಿ ತಿಳಿದಿಲ್ಲವೆಂದು ನಾವು ಆಲೋಚಿಸುತ್ತೇವೆ. ವಾಸ್ತವವಾಗಿ ಟರ್ಕಿಯು ಏಷಿಯಾಟಿಕ್ ಪ್ರಾಂತ್ಯಗಳ ಮೇಲೆ. ಅದರಲ್ಲಿ ಇದು ಒಂದು. ಇಂಗ್ಲೆಂಡ್ ಬಹಳ ಕಾಲಗಳಿಂದ ತುರ್ಕಿಯನ್ನು ಮೂರು ಕಾರಣಗಳಿಗಾಗಿ ರಕ್ಷಿಸುವ ಉದ್ದೇಶಹೊಂದಿತ್ತು. ಮೊದಲನೆಯದಾಗಿ ಅಲ್ಲಿನ ಶ್ರೀಮಂತ ವರ್ಗದವರು 'ಟರ್ಕಿಷ್ ಬಾಂಡ್'ಗಳನ್ನು ಹೊಂದಿದ್ದಾರೆ; ಎರಡನೆಯದಾಗಿ, ಒಂದು ವೇಳೆ ತುರ್ಕಿಯು ಅದರ ಯಾವುದೇ ಒಂದು ನೆರೆಯ ದೇಶಕ್ಕೆ ಅಥವಾ ಅವುಗಳಲ್ಲಿ ವಿಭಜಿತವಾದವುಗಳಿಗೆ ಹೋಗಬೇಕಾದಲ್ಲಿ ಇಂಗ್ಲೆಂಡಿಗೆ ಕೊಳ್ಳೆಮಾಡಿದ್ದರಲ್ಲಿ ಸ್ವಲ್ಪ ಸಿಕ್ಕುತ್ತದೆ ಅಥವಾ ಏನೂ ಸಿಕ್ಕುವುದೇ ಇಲ್ಲ. ಹೀಗಾಗಿ ಇತರೆ ಶತ್ರು ರಾಷ್ಟ್ರಗಳು ಯೂರೋಪನ್ನು ನಿಯಂತ್ರಿಸುವಂತೆ ಇಂಗ್ಲೆಂಡಿಗಿಂತ ಹೆಚ್ಚಾದ ಪ್ರಾಮುಖ್ಯತೆ ಮತ್ತು ಅಧಿಕಾರವನ್ನು ಹೊಂದುವಂತೆ ಮೇಲೆ ಎತ್ತಲ್ಪಡುವುವು, ಮೂರನೆಯದಾಗಿ, ಮತ್ತು ಮುಖ್ಯವಾಗಿ, ತುರ್ಕಿ ಸರ್ಕಾರವು ಅಡ್ಡದಾರಿ ಹಿಡಿದರೆ, ದಕ್ಷಿಣ ಏಷ್ಯಾದಲ್ಲಿ ರಷ್ಯಾದ ಪ್ರಭಾವವು ಹೆಚ್ಚುತ್ತದೆ ಮತ್ತು ಇನ್ನು ಮುಂದೆ ಇಂಗ್ಲೆಂಡಿನ ರಾಣಿ ಚಕ್ರವರ್ತಿನಿಯಾಗಿರುವ ಭಾರತದ ಚಕ್ರಾಧಿಪತ್ಯವನ್ನು ವಶಪಡಿಸಿಕೊಳ್ಳುವುದು ಎಂಬುದನ್ನು ಇಂಗ್ಲೆಂಡ್ ಗ್ರಹಿಸಿಕೊಂಡಿದೆ. ಭಾರತದಿಂದ ಇಂಗ್ಲೆಂಡ್ ವಾಣಿಜ್ಯದಲ್ಲಿ ಭಾರಿ ಆದಾಯವನ್ನು ಪಡಕೊಳ್ಳುತ್ತಿದೆ. ಹೀಗಾಗಿ ಇಂಗ್ಲೇಂಡಿನ ರಾಯಲ್ ಅಥವಾ ಟೋರಿ ಪಕ್ಷವು ತುರ್ಕಿಯನ್ನು ಪ್ರಬಲವಾಗಿ ಬೆಂಬಲಿಸುತ್ತಿದೆ ಮತ್ತು 1878ರಲ್ಲಿ ರಷ್ಯಾವು ಇನ್ನೇನು ಕಾನ್ಸ್ಟಾಂಟಿನೋಪಲನ್ನು ಪ್ರವೇಶಿಸಬೇಕೆಂದಿರುವಾಗ, ಇಂಗ್ಲೆಂಡ್ ಅಡ್ಡ ಬಂದು ತನ್ನ ನೌಕಾಪಡೆಗಳನ್ನು ಬಂದರಿಗೆ ಕಳುಹಿಸಿಕೊಟ್ಟಿತು. ಇದರ ಫಲವಾಗಿ 13ನೇ ಜೂನ್ 1878ರಲ್ಲಿ ಬರ್ಲಿನ್ ಸಮ್ಮೇಳನವು ಜರುಗಿತು, ಅದರಲ್ಲಿ ಮುಖ್ಯವಾಗಿ ಒಬ್ಬ ಇಬ್ರಿಯನಾದ ಇಂಗ್ಲೆಂಡಿನ ಪ್ರಧಾನಮಂತ್ರಿಗಳಾಗಿದ್ದ Lord Beconsfield ಎಂಬುವವನಿದ್ದನು: ತುರ್ಕಿ ಸಂಬಂಧಿತವಾದ ವಿಷಯಗಳು ಪ್ರಸ್ತುತದಲ್ಲಿ ಆಕೆಯ ರಾಷ್ಟ್ರೀಯ ಅಸ್ತಿತ್ವವನ್ನು ಕಾಪಾಡಿಕೊಳ್ಳುವಂತೆ. ಆದರೂ ತನ್ನ ಪ್ರಾಂತ್ಯಗಳನ್ನು ಅಂತಿಮ ವಿಭಜನೆಯ ಸಂದರ್ಭದಲ್ಲಿ ಪ್ರತಿಯೊಬ್ಬರೂ ಯಾವ ಭಾಗವನ್ನು ವಶಪಡಿಸಿಕೊಳ್ಳುವ ನಿರೀಕ್ಷೆ ಇದೆ ಎಂದು ಮಹಾಶಕ್ತಿಗಳು ತಿಳುಕೊಳ್ಳುವಂತೆ ವ್ಯವಸ್ಥೆ ಮಾಡಬೇಕಾಯಿತು. ಈ ಸಮಯದಲ್ಲಿ ತುರ್ಕಿಯ ಎಲ್ಲಾ ಪ್ರಾಂತ್ಯಗಳಿಗೆ ಒಂದು ದೊಡ್ಡ ಧಾರ್ಮಿಕ ಸ್ವಾತಂತ್ರ್ಯವನ್ನು ನೀಡಲಾಯಿತು ಮತ್ತು ಇಂಗ್ಲೆಂಡ್ ತುರ್ಕಿಯೊಡನೆ ಒಂದು ರಹಸ್ಯ ಒಪ್ಪಂದವನ್ನು ಮಾಡಿಕೊಂಡು ಏಷ್ಯಾ ಸಂಬಂಧಿತ ಪ್ರಾಂತ್ಯಗಳನ್ನು ಕಾಪಾಡುವುದಾಯಿತು. ಇತಿಹಾಸ ಕಾರನಾದ Justin McCarthy ಎಂಬುವವನ ಮಾತಿನಲ್ಲಿ "ಆಂಗ್ಲ ಸರ್ಕಾರವು ತುರ್ಕಿಗೆ ಆಕೆಯ ಏಷ್ಯಾದ ಎಲ್ಲಾ ಸ್ವಾಧೀನವನ್ನು ದಾಳಿಯಿಂದ ಕಾಪಾಡುವ ಖಾತರಿ ಒಪ್ಪಂದವೊಂದನ್ನು ಮಾಡಿಕೊಂಡಿತು... ವಿಧಿಯುಕ್ತವಾಗಿ ತುರ್ಕಿಯನ್ನು ಕಾಪಾಡಲು ರಕ್ಷಿಸಲು ಪ್ರತಿಜ್ಞೆಮಾಡಿಕೊಂಡಿತು ಮತ್ತು ಇದಕ್ಕೆ ಹೆಚ್ಚಿನ ಪರಿಣಾಮಕಾರಿ ಅನುಕೂಲಕರ-ಭೂಭಾಗವಾಗುವಂತೆ ಮತ್ತು ಅಲ್ಲಿಂದ ತನ್ನ ಯೋಜನೆಯನ್ನು ಕಾರ್ಯಗತಗೊಳಿಸಲು ಸಾಧ್ಯವಾಗುವಂತೆ ಸೈಪ್ರಸ್ಸನ್ನು ವಶಪಡಿಸಿಕೊಂಡಿತು".

ಆಗ, ಪಾಲೆಸ್ಟೈನ್ ಏಷ್ಯಾದ ಪ್ರಾಂತ್ಯಗಳಲ್ಲಿ ಒಂದಾಗಿದ್ದು ಈಗಾಗಲೇ ಅದು ಇಂಗ್ಲೆಂಡಿನ ಪಾಲನೆಯಲ್ಲಿದೆ ಎಂದು ಕಾಣಬಹುದು; ಇದನ್ನು ತುರ್ಕಿ ಸರ್ಕಾರವು ಯೆಹೂದ್ಯರ ಹಿತಾಸಕ್ತಿಗೆ ಅನುಕೂಲಕರವಲ್ಲದ ತನ್ನ ನಿಯಮಗಳನ್ನು ಹೇರುವ ಬಗ್ಗೆ ಹೆಚ್ಚಿನ ಸಡಿಲತೆಯನ್ನು ನೀಡುತ್ತದೆ ಎಂದು ಎಣಿಕೆಹಾಕಲಾಗುವುದು. ಯೆಹೂದ್ಯರಿಗೆ ಪಾಲಿಸ್ಟೈನನ್ನು ತೆರೆಯುವ ಈ ದೈವಾಯುಕ್ತವು, ಉತ್ತರ ದೇಶದಲ್ಲಿ – ರಷ್ಯಾ ಮತ್ತು ರೊಮಾನಿಯಾದಲ್ಲಿ ನವೀಕೃತ ಉಪದ್ರವಗಳು (ಹೊಸ ತರದ) ಬೆನ್ನು ಹತ್ತಿತು ಮತ್ತು ಅವರು ಆ ದೇಶದಿಂದ ತಮ್ಮ ಸ್ವದೇಶಕ್ಕೆ ವಲಸೆಹೋಗುವುದಕ್ಕೆ ಪ್ರೇರೇಪಿಸುವುದಾಯಿತು. ಪರಿಸ್ಥಿತಿಗಳ ಈ ಸಂಯೋಜನೆಯ ಫಲವಾಗಿ. ಪಾಲೆಸ್ಟೈನ್, ವಿಶೇಷವಾಗಿ ಯೆರೂಸಲೇಮು ಸಾಂಪ್ರದಾಯಿಕ ನಮೂನೆಯ ಯೆಹೂದ್ಯರ ಜನಸಂಖ್ಯೆಯು ತ್ವರಿತವಾಗಿ ಹೆಚ್ಚಾಗತೊಡಗಿತು. ಈಗಾಗಲೇ ಯೆರೂಸಲೇಮಿನಲ್ಲಿ ಸಾಂಪ್ರದಾಯಿಕ ವರ್ಗದ ಯೆಹೂದ್ಯರ ಸಂಖ್ಯೆಯು ಎಲ್ಲಾ ಇತರೆ

ರಾಷ್ಟ್ರೀಯರಿಗಿಂತ ಹೆಚ್ಚಾಗಿದೆ. ಶತಮಾನಗಳ ಹಿಂದೆ ಅವರು ಅಲ್ಪ ಸಂಖ್ಯಾತರಾಗಿದ್ದರು.

'The New York Herald' ಪತ್ರಿಕೆಯು ಕೆಲವು ಸಮಯಗಳ ಹಿಂದೆ Crete ದ್ವೀಪವನ್ನು ಇಂಗ್ಲೆಂಡಿನಿಂದ ಸ್ವಾಧೀನಪಡಿಸಿಕೊಂಡಿದ್ದು ಅದರ ಐಗುಪ್ತದ ವಶಪಡಿಸಿಕೊಳ್ಳುವಿಕೆ ಮತ್ತು ತುರ್ಕಿ ಮತ್ತು ಅದರ ಪ್ರಾಂತ್ಯಗಳ ಪರಿಸ್ಥಿತಿ ಇವುಗಳ ಬಗ್ಗೆ ವಿಮರ್ಶಿಸುತ್ತಾ ಸಾಮಾನ್ಯವಾಗಿ ಹೇಳುವುದೇನೆಂದರೆ –

"ನಾವು ವೇಗವಾದ ಯುಗದಲ್ಲಿ ಜೀವಿಸುತ್ತಿದ್ದೇವೆ, ಚರಿತ್ರೆಯು ಸಹ ಹೆಚ್ಚಿನ ವೇಗದಲ್ಲಿ ಉತ್ಪತ್ತಿಯಾಗುತ್ತಿದೆ. ಯುದ್ಧಗಳು ದಶಕ ವರ್ಷಗಳವರೆಗೆ ನಡೆಯುತ್ತಿತ್ತು; ನಾಗರೀಕತೆಯು ನಿಧಾನವಾಗಿ ಮುಂದುವರೆಯುತ್ತಿತ್ತು, ರಾಷ್ಟ್ರಗಳ ನಡುವಣ ಸಂಪರ್ಕವು ಮತ್ತು ಅದರ ಪರಿಣಾಮವಾದ ಪರಸ್ಪರ ಲಾಭಗಳು ಅದಕ್ಕೆ ಅನುಗಣವಾಗಿ ಮಂದಗತವಾಗಿ ಸಾಗುತ್ತಿತ್ತು. ಈಗ ಒಂದು ದೇಶದಲ್ಲಿ ಶೋಧಿಸಲ್ಪಟ್ಟ ಅವಿಷ್ಕರಣ (Invention) ಸಹಸ್ರಾರು ಮೈಲುಗಳ ದೂರದವರಿಗೂ ಕೂಡಲೇ ತಿಳಿದುಬಿಡುತ್ತದೆ ಮತ್ತು ಸಮಸ್ತ ಪ್ರಪಂಚದವರು ಈ ಶೋಧನೆಯ ಮೂಲಕ ಏಕಕಾಲದಲ್ಲಿ ಲಾಭಪಡಕೊಳ್ಳಬಹುದು. ಗಮನಾರ್ಹವಾಗಿ, ರಾಜಕೀಯದಲ್ಲಿ ತರಾತುರಿಯು ಸ್ಪಷ್ಟವಾಗಿದೆ. ರಾಜಕೀಯ ಮುತ್ಸದ್ಧಿಗಳ ಸಂಚುಗಳು ಪೂರ್ಣಗೊಳ್ಳಲು ಅನೇಕ ತಲೆವಾರುಗಳೇ ಬೇಕಾಗುತ್ತಿತ್ತು. ಈಗ ಅತ್ಯಂತ ಎದೆಗಾರಿಕೆಯುಳ್ಳ ಯೋಜನೆಗಳು ಯೋಜನೆಯ ರಚನಕಾರರಿಂದ ನೆರವೇರಿಸಲ್ಪಡುತ್ತವೆ ಮತ್ತು ಖಂಡಗಳ ನಕ್ಷೆಯು ವಾರದಲ್ಲಿಯೇ ಬದಲಾಗುತ್ತವೆ. ಎಷ್ಟು ತ್ವರಿತವಾಗಿ ಘಟನೆಗಳು ನಡೆದು ಇತಿಹಾಸವು ಸೃಷ್ಟಿಯಾಗುತ್ತದೆ ಎಂಬುದು ಆಕರ್ಷಣಾತ್ಮಕವಾದ ಪೂರ್ವ ಪ್ರದೇಶದ ಪ್ರಶ್ನೆಯಲ್ಲಿ ವಿಶೇಷ ಸ್ಪಷ್ಟತೆಯೊಂದಿಗೆ ವಿಶದವಾಗುತ್ತದೆ.... ಸಂಘರ್ಷವುಳ್ಳ ಹಿತಾಸಕ್ತಿಗಳ ದೃಶ್ಯದ ಮಧ್ಯದಲ್ಲಿಯೂ ಪಾಲೆಸ್ತೈನ್ ಯೆಹೂದ್ಯರಿಗೆ, ಕ್ರೈಸ್ತರಿಗೆ, ಮಹಮದ್ದೀಯರಿಗೆ ಪ್ರಿಯವಾಗಿಯೇ ಇದೆ. ರಾಜಕೀಯ ಮುತ್ಸದ್ದಿ ಸ್ಥಾನಕ್ಕೆ ಅದು ಕೀಲಿಯಾಗಿದೆ ಎಂದು ಹೇಳುತ್ತಾನೆ; ತನ್ನ ದೇಶದ ಜನರ ಅನುಕೂಲತೆಯನ್ನು ದೃಷ್ಟಿಯಲ್ಲಿಟ್ಟುಕೊಂಡು ಅದರ ಅದ್ಭುತವಾದ ಫಲಪ್ರದತೆಯ ಕಾರಣ, ಹಿಂದೆ ಮಿಲಿಯಾಂತರ ಜನರನ್ನು ಬೆಂಬಲಿಸಿತ್ತು; ಅದರ ಭವ್ಯವಾದ ವಾಣಿಜ್ಯ ಸಾಧ್ಯತೆಯ ದೃಷ್ಟಿಯಲ್ಲಿ, ಅವುಗಳು ಹಿಂದಿನ ದಿನಗಳಲ್ಲಿನ ಅದರ ಬಂದರುಗಳನ್ನು ಚುರುಕುಳ್ಳದ್ದಾಗಿಯೂ, ಸಂಪದ್ಭರಿತವಾಗಿಯೂ ಮಾಡಿತ್ತು ಮತ್ತು ಅದು ತೂರ್ ಮತ್ತು ಸೀದೋನನ್ನು ಇಂದಿನ ದಿನಕ್ಕೂ ಲೋಕಪ್ರಸಿದ್ಧವಾಗಿಸಿದೆ; ಅದು ಯೂರೋಪ್ ಮತ್ತು ಏಷ್ಯಾದ ಕೂಡುಸ್ಥಳದಲ್ಲಿರುವ ದೃಷ್ಟಿಯಿಂದ, ಮತ್ತು ಈ ಸ್ಥಳದಲ್ಲಿ ಹೆಚ್ಚು ಪ್ರಶಂಸನೀಯವಾಗಿದೆ. ಆತನ ದೇಶಭಕ್ತಿ ಹೃದಯಕ್ಕೆ ಪಾಲೆಸ್ತೈನನ್ನು ಹೊಂದುವುದು ಅತ್ಯಂತ ಬಯಕೆಯುಳ್ಳದ್ದಾಗಿದೆ. ಇತಿಹಾಸಕಾರನು ಹೇಳುವುದೇನೆಂದರೆ, ದಾಖಲಾಗಿರುವ ಮೊಟ್ಟಮೊದಲನೆಯ ಅಂತರ ರಾಷ್ಟ್ರೀಯ ಪ್ರಾಸಂಗಿಕ ಕಥೆಯು ಪಾಲೆಸ್ತೈನಿನ ಮೇಲಿನ ದಾಳಿಯಾಗಿದೆ; ಆ ದಿನದಿಂದ ಈ ದಿನದವರೆಗೆ ಅದು ಕುತೂಹಲದ ಕೇಂದ್ರವಾಗಿದೆ; ಆದುದರಿಂದ, ಆತನು ತನ್ನ ಕಡೆಯಿಂದ ಪಾಲೆಸ್ತೈನಿನ ಭವಿಷ್ಯದ ಬಗ್ಗೆ ಕಾಳಜಿವಹಿಸುವವನಾಗಿದ್ದಾನೆ. ಧರ್ಮವಾದಿಯು ತನ್ನ ದೃಷ್ಟಿಕೋನದಿಂದ ಪವಿತ್ರ ಭೂಮಿ ಎಂದು ಕರೆಯುವದರ ಬಗ್ಗೆ ತೆಗೆದುಕೊಳ್ಳುವ ಆಸಕ್ತಿಯ ಅಂಶವನ್ನು ಹೇಳಿಕೊಳ್ಳಲು ಶಬ್ದವೇ ಇಲ್ಲವೆಂದಿದ್ದಾನೆ. ಆತನಿಗೆ ಪ್ರತಿಯೊಂದು ಕಲ್ಲೂ ಮಹಾಕವಿತೆಯಾಗಿದೆ, ಪ್ರತಿಯೊಂದು ಮರವೂ ಕಾವ್ಯವಾಗಿದೆ, ಚುರುಕು ಬುದ್ಧಿಯುಳ್ಳ ವ್ಯಾಪಾರಿಯು ಗಮನಿಸುವುದೇನೆಂದರೆ, ಏಷ್ಯಾದ ರೈಲು ವ್ಯವಸ್ಥೆಯು ಸ್ಥಾಪಿತವಾದರೆ, ಅದು ಕಟ್ಟಲ್ಪಡುತ್ತಿರುವಂತೆಯೇ ಸ್ಥಿರವಾದ ಸರ್ಕಾರವೂ ಕಟ್ಟಲ್ಪಡುತ್ತದೆ. ಪಾಲೆಸ್ತೈನಿನ ಭೌಗೋಳಿಕ ಸ್ಥಿತಿಯು ಅದನ್ನು ಮಹಾರೈಲ್ವೆಹಳಿಗಳು ಹಾಕಲ್ಪಡುವ ರಾಜ್ಯವನ್ನಾಗಿ ಮಾಡಿ ಆ ಮೂಲಕ ಏಷ್ಯಾದ ಉತ್ಪನ್ನಗಳು ಯೂರೋಪ್ ಮತ್ತು ಅಮೆರಿಕಾದ ಮಾರುಕಟ್ಟೆಗೂ. ಅಲ್ಲಿಯ ಉತ್ಪನ್ನಗಳನ್ನು ಹಿಮ್ಮುಖವಾಗಿ ಪಾಲೆಸ್ತೈನಿಗೂ ಸಾಗಾಟವಾಗುವುದು ಎಂಬುದಾಗಿ ಹೇಳಿದ್ದಾನೆ. ಈ ರೀತಿಯಲ್ಲಿ ಮೂರು ಖಂಡಗಳ ವಾಣಿಜ್ಯ ವ್ಯವಹಾರಗಳು ಸೊಲೊಮೋನನದ ಕಾಲದಲ್ಲಿ ಅದರ ಸರಹದ್ದಿನಲ್ಲಿ ಸಂಧಿಸುತ್ತಿದ್ದವು. ಅದೇ ರೀತಿಯಲ್ಲಿ, ಅದೇ ಖಂಡಗಳ ಮುಂದಿನ ವಾಣಿಜ್ಯವು ಅನುಕೂಲತೆಯ ಸ್ಥಳಗಳಿಗೆ ಪುನಃ ಹರಿದುಬರುತ್ತವೆ. ಅದು ಕೈಗೂಡುವುದು ಬಹಳ ದೂರವಿದೆ ಎಂದು ಆತನು ತನ್ನ ನಿರೀಕ್ಷೆಯನ್ನು ಸ್ವಲ್ಪಮಟ್ಟಿಗಾದರೂ ಕುಗ್ಗಿಸಿಕೊಳ್ಳಲಾರನು. ಚಿಕಾಗೋದ ಅಥವಾ ಸಾನ್‌ಫ್ರಾನ್ಸಿಸ್ಕೋದ ತೀವ್ರವಾದ ಬೆಳವಣಿಗೆಯನ್ನು ಬಂಜರು ಭೂಮಿಯನ್ನು ಜನಭರಿತ ರಾಜ್ಯವಾಗಿ ಬದಲಾದುದ್ದನ್ನು ನೆನಪುಮಾಡಿಕೊಂಡು, ಆತನು 'ಘಟನೆಗಳು ಈ ದಿನಗಳಲ್ಲಿ ತ್ವರಿತವಾಗಿ ಅನುಸರಿಸಲ್ಪಡುತ್ತವೆ' ಎಂದು ಸುಮ್ಮನೆ ಟೀಕಿಸುತ್ತಾನೆ ಮತ್ತು ಕಾದುಕೊಂಡಿರುತ್ತಾನೆ.

"ಆದಾಗ್ಯೂ, ಅದೇ ಸಮಯದಲ್ಲಿ, ಮಹಾಕ್ರೈಸ್ತ ಶಕ್ತಿಗಳು ಯುದ್ಧ ಕವಚ ಹೊದಿಸಿದ ಕೈಗಳಿಂದ ಹಂಬಲಿಸಬಹುದಾದ ಮೋಹ ಹುಟ್ಟಿಸುವ ಚೂರು ಜಾಗವನ್ನು ತನ್ನ ಹಿಡಿತಕ್ಕೆ ತೆಗೆದುಕೊಳ್ಳುವಂತೆ ಎದ್ದು ನಿಂತುಕೊಳ್ಳುತ್ತವೆ ಮತ್ತು ಮರಣಾವಸ್ಥೆಯಲ್ಲಿರುವ ತುರ್ಕಿಯು ತನ್ನ ಹಿಡಿತವನ್ನು ಸಡಿಲಿಸುವಂತೆ ಸ್ವಲ್ಪ ಮಟ್ಟಿಗೆ ಪ್ರಲೋಭಿಸುತ್ತದೆ, ಚಾರಿತ್ರಿಕ ಚಿತ್ರಣವು ಮುಂದೆ ಹೆಜ್ಜೆಯಿಟ್ಟು "ದೇಶವು ನನ್ನದೇ!" ಎಂದು ಪ್ರಕಟಿಸುತ್ತದೆ. ಶಕ್ತಿಗಳು ಮಾತನಾಡುವವನನ್ನು ನೋಡಲು ಹಿಂತಿರುಗಿದಾಗ, ಅವರು ಯೆಹೂದ್ಯನನ್ನು ಗುರುತಿಸುತ್ತಾರೆ, ಪಾಲೆಸ್ಟೈನನ್ನು ಮೊದಲು ಆಕ್ರಮಣ ಮಾಡಿದಾಗ ಅಲ್ಲಿ ಜೀವಿಸಿದ ಪಿತೃಗಳ ಮಕ್ಕಳನ್ನು ಗುರುತಿಸುತ್ತಾರೆ ಮತ್ತು ಅದರ ಸ್ವಾಧೀನವು ಮೂವತ್ತಾರು (ಮೂವತ್ತಾರು) ಶತಮಾನಗಳ ಹಿಂದೆಯೇ ವಿವಾದಕ್ಕೊಳಗಾಗಿದ್ದರೂ ಅದನ್ನು ಆತನು ತಾನೇ ಅನಿವಾರ್ಯವಾಗಿ ತನ್ನ ಸ್ವಂತದನ್ನಾಗಿ ಸ್ವೀಕರಿಸಲು ಹಾಜರಾಗಿರುತ್ತಾನೆ.

"ಎಂಥಾಃ ಅದ್ಭುತವಾದ ಸಹ ಘಟನೆ!" "ಹಾಗಲ್ಲ, ಇದು ಸಹ ಘಟನೆಯಲ್ಲ, ಇದು ನನ್ನ ವಿಧಿ!" ಎಂದು ಯೆಹೂದ್ಯನು ಹೇಳುತ್ತಾನೆ. ನಾವೀಗ ಪಾಲೆಸ್ಟೈನಿನ ಭವಿಷ್ಯದ ಪ್ರಶ್ನೆಯಲ್ಲಿ ಯೆಹೂದ್ಯನ ಸ್ಥಿತಿಯನ್ನು ಸಂಕ್ಷಿಪ್ತವಾಗಿ ಕ್ಷಣಕಾಲ ದೃಷ್ಟಿಸೋಣ. ದೇಶಗಳು ಉದ್ದೇಶಗಳಿಂದ ಹುಟ್ಟಿಕೊಳ್ಳುತ್ತವೆ. ಜರ್ಮನಿ ಐಕ್ಯತೆಯ ಮನೋಭಾವನೆಯಿಂದ ಜರ್ಮನ್ ಚಕ್ರಾಧಿಪತ್ಯವು ಬೆಳೆಯಿತು ಎಂಬುದು ನಿಜವಾದ ಸಂಗತಿ. ಅದು ಪ್ರಪಂಚದವರಿಗೆ Versailles ಪ್ರಕಟಿಸಿಕೊಂಡಿತು, ಫ್ರೆಂಚ್ ಫಿರಂಗಿಯು ಜರ್ಮನಿಯ ಪ್ರಾರ್ಥನೆಗೆ ಅದರ ಕ್ಷೇಮಕ್ಕೆ ಆಮೆನ್ ಎಂದು ಹೇಳುವುದಾಯಿತು. `Italia Irridenta' ಎಂಬ ಕೂಗಿನಿಂದ ಇಂದಿನ ನೂತನ ಇಟಲಿ ಹುಟ್ಟಿಕೊಂಡಿತು. ಅದರ ಗುಡುಗು ಪುನಃ ಮೆಡಿಟರೇನಿಯನ್ ತೀರಗಳನ್ನು ಎಬ್ಬಿಸುತ್ತದೆ. ಪುರಾತನ ಗ್ರೀಸ್ ಪರಂಪರೆಯಿಂದ ಆಧುನಿಕ ಗ್ರೀಸ್ ರಚಿಸಲ್ಪಟ್ಟಿತು. ಹೀಗೆ ಎಷ್ಟೋ ಕಾಲದಿಂದ ಯೆಹೂದ್ಯರು ಅದುಮಿಟ್ಟಿಕೊಂಡಿರುವ ಆಕಾಂಕ್ಷೆಗಳು ಇನ್ನೂ ಈಡೇರಬೇಕಾಗಿದೆ ಎಂಬುದನ್ನು ಕ್ರೈಸ್ತರು ಅರ್ಥಮಾಡಿಕೊಳ್ಳುತ್ತಾರೆ. ಅವರು ಅದನ್ನು ಯೆಹೂದ್ಯರಿಗೆ ಪೂರ್ಣವಾಗಿ ಬಿಟ್ಟುಕೊಡುವಾಗ, ಎಲ್ಲಾದಕ್ಕಿಂತ ಮೇಲಾಗಿ, ಪಾಲೆಸ್ಟೈನ್ ಯೆಹೂದ್ಯರಿಗೆ ಸೇರಬೇಕಾದದ್ದು ಎಂದು, ಅದೇ ಸಮಯದಲ್ಲಿ ಆತನು ಎಲ್ಲಾದಕ್ಕಿಂತ ಮೇಲಾಗಿ ಸಮೃದ್ಧಿಯಾಗಿರುವ ಆ ದೇಶದ ಭವಿಷ್ಯವನ್ನು ವೃದ್ಧಿಪಡಿಸಲು ಗುಣಯೋಗ್ಯನಾಗಿರುತ್ತಾನೆ. ಅದನ್ನು ಹೊಂದಿಕೊಂಡಿರುವುದು ಮತ್ಸರದ ದೇಶದ ಭಯಗಳನ್ನು ಪರಿಹರಿಸುತ್ತದೆ. ಅದರಲ್ಲಿ ಯೆಹೂದ್ಯರ ಸ್ಥಾಪನೆಯು ನ್ಯಾಯಯುತವಾದ ಕಾರ್ಯವಾಗಿದೆ, ಮತ್ತು ಇತಿಹಾಸದ ಹುತಾತ್ಮನಾದ ಆತನ ಮೇಲೆ ಹೇರಿದ ತಪ್ಪುಗಳಿಗೆ ಪ್ರಾಯಶ್ಚಿತ್ತವಾಗಿದೆ.

"ಯೆಹೂದ್ಯರು ತಾವೇ ಪುನಃ ಸ್ಥಾಪನೆಗಾಗಿ ಎಷ್ಟು ಹಂಬಲಿಸುತ್ತಿದ್ದಾರೆಂದು ಹೇಳುವುದು ಅನಗತ್ಯ. ಅವರ ಅಬ್ (Ab-July August) ತಿಂಗಳ 9ರಂದು ಅವರು ತಮ್ಮ ದೇವಾಲಯದ ನಾಶನದ ಮತ್ತು ಆ ವಿಷಯದ ಕುರಿತಾಗಿ ಸಂಭವಿಸಿದ ರಾಷ್ಟ್ರೀಯ ವಿಕೋಪಗಳ ಕುರಿತಾಗಿ ಉಪವಾಸಮಾಡುತ್ತಾರೆ . "ನಮ್ಮನ್ನು ಲೋಕದ ನಾಲ್ಕೂ ದಿಕ್ಕುಗಳಿಂದ ಒಂದುಗೂಡಿಸು, ನಮ್ಮನ್ನು ಹಿಂದಿನವರಂತೆ ಪುನಃಸ್ಥಾಪಿಸು; ನಮ್ಮನ್ನು ಯೆರೂಸಲೇಮಿನ ಮಧ್ಯದಲ್ಲಿ ನೆಲೆಗೊಳಿಸು" ಎಂದು ಅವರು ಪ್ರಾರ್ಥಿಸದೇ ಇರುವ ಒಂದು ಬೆಳಗಿನ ಜಾವವಾಗಲೀ, ರಾತ್ರಿ ಜಾವವಾಗಲೀ ಇಲ್ಲ. ಈ ಮಾತುಗಳನ್ನು ಯೆಹೂದ್ಯರು ಕಂಡುಬರುವ ಪ್ರತಿಯೊಂದು ನಗರದಲ್ಲಿಯೂ – ಅಂದರೆ ಪ್ರಪಂಚದೆಲ್ಲೆಡೆಯಲ್ಲಿಯೂ ಹೇಳಲಾಗುವುದು. ಅಂಥಾಃ ನಿಷ್ಠೆಯು ಯಾವಾಗಲೂ ಎಲ್ಲಾ ಎಲ್ಲೆಗಳಿಗೂ ಮೀರಿದ್ದು. ಇಂದಿನವರೆಗೆ ಸ್ಪೈನಿನ ಯೆಹೂದ್ಯರು ಎಲ್ಲಾ ದೇಶಗಳಲ್ಲಿಯೂ (ದೂರದ ದೇಶದಲ್ಲಿಯೂ) ಅವರು 'tierra santa' ಎಂದು ಕರೆಯುವ ಪಾಲೆಸ್ಟೈನಿನ ಸ್ವಲ್ಪ ಧೂಳನ್ನು ಅವರಲ್ಲಿ ಸತ್ತವರ ಕಣ್ಣಿನಲ್ಲಿ ಹಾಕುತ್ತಾರೆ. ಇದು ಅವರ ಕಾವ್ಯಮಯ ಮತ್ತು ಕರುಣಾಜನಕವಾದ ಅವರ ಪವಿತ್ರ ಮಣ್ಣಿನ ಮೇಲಿರುವ ಪ್ರೇಮದ ನಿದರ್ಶನವಾಗಿದೆ.

"ರೈಲ್ವೆಯು ಯೆರೂಸಲೇಮನ್ನು ಮುಟ್ಟುವಾಗ, ಮೆಸ್ಸೀಯನು ಬರುತ್ತಾನೆ" ಎಂಬುದಾಗಿ ಯೆಶಾಯ 66:20 ಪ್ರಸ್ತಾಪಿಸುತ್ತದೆ. ಆಗ ಪ್ರವಾದಿಯು ಆತನ ದರ್ಶನದಲ್ಲಿ ಸೆರೆ ಹೋದವರು ಎಲ್ಲಾ ರೀತಿಯ ವಾಹನಗಳ ಮೂಲಕ ಹಿಂತಿರುಗುತ್ತಾರೆ. ಆತನು Kirkaroth ಎಂಬುದಾಗಿ ಕರೆಯುತ್ತಾನೆ. ಇಂಗ್ಲೀಷಿನಲ್ಲಿ ಇದನ್ನು 'swift beasts' (ಕ್ಷಿಪ್ರವಾದ ಮೃಗಗಳು) ಎಂದು ಭಾಷಾಂತರಿಸಲಾಗಿದೆ. ಇದು ನಿಜವಾಗಿಯೂ ತೀರಾ ಅನಿಶ್ಚಿತ ಅಥವಾ ಸವಾರಿ ಒಂಟೆಗಳು ಎಂದರೆ ಅದು ನಿಶ್ಚಯವಾಗಿಯೂ ತಪ್ಪಾಗುತ್ತದೆ. ಭಾಷಾಶಾಸ್ತ್ರಜ್ಞರು ಈ ಪದವನ್ನು Kar ಎಂಬ ಪದದಿಂದ ತೆಗೆದುಕೊಳ್ಳ ಬಯಸದೆ A "furnace" and karkar "to sway" ಎಂಬುವುದರಿಂದ ತೆಗೆದುಕೊಳ್ಳುವವರಾಗಿದ್ದು ಈ ರೀತಿಯಲ್ಲಿ ಪ್ರವಾದಿಯು ತನ್ನ ದರ್ಶನದಲ್ಲಿ ಕಂಡ ತ್ವರಿತ

ವೇಗದಲ್ಲಿ ಚಲಿಸುವ ಟ್ರೈನ್‌ಗೆ ಹೆಸರಿಟ್ಟನು. 'ನಿಕೋಲಾಸನು ಆಡಳಿತ ನಡೆಸುವಾಗ ವಿಮೋಚನೆಯು ಬರುತ್ತದೆ' ಎಂಬುದು ಯೆಶಾಯ 63:4ಕ್ಕೆ ಸೂಚ್ಯವಾಗಿ ಉಲ್ಲೇಖನವಾಗಿದೆ. ಇದರಿಂದ Heraists (ಯೆಹೂದ್ಯ ಭಾಷಾ ಪ್ರವೀಣ) ಎಂಬ ಪದವು ವಿಕಸಿತವಾಗುತ್ತದೆ. ಇದರಿಂದ ಅವರು Rashe Teboth ಎಂದು ಕರೆಯುವದರಿಂದ ಎಲ್ಲಾ ಯೂದಾಯದವರು Muscovyಯ ಚಕ್ರವರ್ತಿಯಾದ ನಿಕೋಲಾಸನ ಪತನವನ್ನು ಕೇಳಿಸಿಕೊಳ್ಳುತ್ತಾರೆ, ಕಾಣುತ್ತಾರೆ. ಯೂದಾಯದ ಮಕ್ಕಳ ಮೇಲಣ ದಬ್ಬಾಳಿಕೆಯ ಕಾರಣ ಮತ್ತು ನಮ್ಮ ಪತನವಾದ ಮೇಲೆ, ನಮ್ಮ ನಿಜವಾದ ವಿಮೋಚನೆಯು ಉಂಟಾಗುತ್ತದೆ ಮತ್ತು ಅದು ಯೆಹೂದ್ಯರ ಮಕ್ಕಳಿಗಾಗಿ ಹತ್ತಿರವಾಗಿಯೇ ಇದ್ದು ಸಮೀಪಿಸುವುದಾಗಿದೆ. ಇದು ತಿಷ್ಬೀಯ ಪ್ರವಾದಿಯಾದ ಎಲೀಷನ ಶುಭ ಸಮಾಚಾರವಾಗಿದೆ. ಇವುಗಳು, ಇಂಥವುಗಳು ಯೆಹೂದ್ಯ ಆಲೋಚನೆಯನ್ನು ಸೂಚಿಸುವುದರಿಂದ ಮುಖ್ಯವಾದವುಗಳಾಗಿವೆ".

ಲೌಕಿಕ ಮನುಷ್ಯನು ಕೆಲವೊಮ್ಮೆ ತನಗೇ ತಿಳಿಯದ ರೀತಿಯಲ್ಲಿ ಸತ್ಯಕ್ಕೆ ಹತ್ತಿರ ಬರುತ್ತಾನೆ ಎಂಬುದನ್ನು ನಮಗೆ "ಪಿತೃವಾದ ಅಬ್ರಹಾಮನಿಗೆ ಮಾಡಿದ ವಾಗ್ದಾನ ಭೂಮಿಯು ಆತನ ಮತ್ತು ಆತನ ಸಂತಾನದ ಸ್ವಂತದ್ದೆಂದು ತನ್ನ ಮರಣದ ಮೂವತ್ತಾರು ಶತಮಾನಗಳ ನಂತರದಲ್ಲಿ ತಾನೇ ಸಂತೋಷದಿಂದ ಸ್ವೀಕರಿಸಲು ಪ್ರಸನ್ನನಾಗುತ್ತಾನೆ" ಎಂಬ ಮೇಲಿನ ಹೇಳಿಕೆಗಳು, ಒತ್ತಾಯಪೂರ್ವಕವಾಗಿ ನೆನಪು ಮಾಡಿಕೊಡುವುದಾಗಿವೆ. ಇದನ್ನು ಕೆಲವರು ಕಾವ್ಯರಚನೆಯ ಸಾಲುಗಳು ಎಂದು ತಿಳಿಯಬಹುದು. ಪರಿಶುದ್ಧ ಗ್ರಂಥವು ಇದನ್ನು ನಿಜವಾದ ಸಂಗತಿ ಎಂಬುದಾಗಿ ಪ್ರಕಟಿಸುತ್ತದೆ. ಯಾಕೆಂದರೆ ನಾವು ಈಗಾಗಲೇ ಕಂಡುಕೊಂಡಂತೆ (ಸಂಪುಟ 1, ಅಧ್ಯಾಯ xiv), ಅಬ್ರಹಾಮ, ಇಸಾಕ ಮತ್ತು ಯಾಕೋಬರು ದಾನಿಯೇಲ ಮುಂತಾದ ಎಲ್ಲಾ ಪವಿತ್ರ ಪ್ರವಾದಿಗಳೊಂದಿಗೆ ಸುವಾರ್ತಾ ಸಭೆಯು ಮಹಿಮೆ ಹೊಂದಿದ ನಂತರದಲ್ಲಿ 'ಪರಿಪೂರ್ಣ ಮನುಷ್ಯ ಸ್ಥಿತಿಗೆ ಮಾಡಲ್ಪಡುವುವರು', ಸತ್ತವರೊಳಗಿಂದ ಸಮರ್ಪಕರಾದ ಮಾನವ ಸ್ಥಿತಿಗೆ ಎಬ್ಬಿಸಲ್ಪಡುವರು (ಇಬ್ರಿಯ 11:40) ಮತ್ತು ಅವರುಗಳು ಲೋಕದ ಮೇಲೆಲ್ಲಾ ಅರಸರಾಗಿ ಮಾಡಲ್ಪಡುವರು (ಕೀರ್ತನೆ 45:16) ಆತ್ಮೀಕ ಹಾಗೂ ಅದೃಶ್ಯ ಅರಸನಾದ ಕ್ರಿಸ್ತನ ಈ ಲೋಕದ ಗೋಚರವಾದ ಪ್ರತಿನಿಧಿಗಳನ್ನಾಗಿ ಮಾಡಲ್ಪಡುವರು. ಅಬ್ರಹಾಮನಿಗೆ, ಮಾತ್ರವಲ್ಲದೆ ಆತನ ಸಂತಾನದವರಿಗೆ ವಾಗ್ದತ್ತ ದೇಶವು ನಿರಂತರವಾದ ಸ್ವಾಧೀನಕ್ಕೆ ಕೊಡಲ್ಪಟ್ಟಿತು; ಅದನ್ನು ಆತನು ಮುಂದಿನ ದಿನದಲ್ಲಿ ಪಡಕೊಳ್ಳಲೇಬೇಕು, ಇದುವರೆಗೆ ಅವರು ಅದರಲ್ಲಿ ಒಂದು ಹೆಜ್ಜೆಯನ್ನೂ ಹೊಂದಿಕೊಂಡಿರಲಿಲ್ಲ (ಅ.ಕೃ 7:5).

ಚಿಕಾಗೋ ಸಂಚಿಕೆಯೊಂದರಲ್ಲಿ ಪ್ರಕಟವಾದ ಕೆಳಗಣ ಲೇಖನವು ಪಾಲೆಸ್ಟೈನಿನಲ್ಲಿನ ಪುನಃ ಸ್ಥಾಪನೆಯ ಕ್ರಮೇಣ ಪ್ರಗತಿಯ ಮತ್ತು ಭವಿಷ್ಯದಲ್ಲಿನ ದೇವರ ವಾಗ್ದಾನಗಳ, ಅದರ ಮತ್ತು ಆತನ ಜನರ ಮೇಲಣ ಆಶೀರ್ವಾದದ ಸಾಕ್ಷ್ಯವಾಗಿದೆ –

**ಯೆರೂಸಲೇಮ್, ನವೆಂಬರ್ 23, 1887**

"ಇಲ್ಲಿ ಜೀವಿಸಿದ ಆರು ವರ್ಷಗಳಲ್ಲಿ ನಾವು ಸಾಕ್ಷಿಯಾದ ಭವ್ಯವಾದ ಸಂಗತಿಗಳನ್ನು ನಿಮಗೆ ಹೇಳುವುದರಲ್ಲಿ ನನಗೆ ಬಹಳ ಸಂತೋಷವೆನಿಸುತ್ತಿದೆ. ನಾವು ಇಲ್ಲಿಗೆ ಆರು ವರ್ಷಗಳ ಹಿಂದೆ ಬಂದಾಗ ನಾವು ಒಟ್ಟು ಹದಿನಾಲ್ಕು ಮಂದಿ ಹಿರಿಯರು ಮತ್ತು ಐದು ಮಕ್ಕಳು ಇದ್ದೆವು. ನಾವು ಜಪ್ಪಾದಿಂದ ವಾಹನದಲ್ಲಿ ಇಲ್ಲಿಗೆ ಬಂದಾಗ ಈ ದೇಶದ ನಿರ್ಜನತೆಯ ಬಗ್ಗೆ ಆಳವಾದ ಪ್ರಭಾವವನ್ನು ಹೊಂದಿದ್ದೆವು. ಕಿಂಚಿತ್ತೂ ಹಸಿರು ಎಲ್ಲೂ ಕಾಣುತ್ತಿದ್ದಿಲ್ಲ. ಓಲೀವ್ ಮರಗಳೂ, ದ್ರಾಕ್ಷೆ ಬಳ್ಳಿಗಳು ಒಣಗಿದ ಬೇಸಿಗೆಯ ಬಿಸಿಲಿನ ಬೂದಿ ಬಣ್ಣದ ಧೂಳಿನಿಂದ ಮುಚ್ಚಿಹೋಗಿತ್ತು, ಆ ಕಾರಣದಿಂದಾಗಿ ಕೆಳಗೆ ಎಲ್ಲೂ ಹಸಿರು ಇದ್ದೀತೆಂದು ನೀವು ಎಂದೂ ಊಹಿಸಲಾರಿರಿ. ಇಡೀ ಭೂಮಿಯು ಅದರ ತಳದವರೆಗೆ ಒಣಗಿಹೋದಂತೆ ಕಾಣುತ್ತಿತ್ತು. ಆದರೆ ನಾವು ಆ ಕಾಲದ ಈ ರೀತಿಯನ್ನು ಎಂದೂ ನೋಡಲಿಲ್ಲ. ಈಗ ಪ್ರತಿವರ್ಷವೂ ಅದು ಹೆಚ್ಚು ಹಸಿರಾಗಿ ಕಾಣುತ್ತಿದೆ ಮತ್ತು ಈಗ ಆ ಅನೇಕ ಬಂಜರು ಪರ್ವತ ತಪ್ಪಲುಗಳು ದ್ರಾಕ್ಷೇ ತೋಟ, ಓಲೀವ್ ತೋಟಗಳಿಂದ ಮುಚ್ಚಿಹೋಗಿದೆ, ಅದರ ನೋಟದಲ್ಲಿ ಬಹಳಷ್ಟು ಬದಲಾವಣೆಗಳು ಕಂಡುಬರುತ್ತಿವೆ"

ಈ ಮಹಾ ಬದಲಾವಣೆಗೆ ಕಾರಣವೇನು? ಎಂದು ನೀವು ಕೇಳುತ್ತೀರಿ. ದೇವರ ವಾಗ್ದಾನವೇನೆಂದರೆ, ಆತನು ಈ ಎಲ್ಲಾ ಕೇಡನ್ನು ಆ ದೇಶದ ಮೇಲೆ ಬರಮಾಡಿದಂತೆಯೇ ಆತನು ಅದರ ಮೇಲೆ ಮಹಾ ಆಶೀರ್ವಾದಗಳನ್ನೂ ಬರಮಾಡುವನು. ಇವುಗಳು ಹಿಂದಿನ ಬಹಳ ಶತಮಾನಗಳಿಂದಲೂ ಇರದಿದ್ದ ಮಳೆಯನ್ನು ಕಳುಹಿಸುವುದರ ಮೂಲಕವಾಗಿ ಈಗ ಸ್ಪಷ್ಟವಾಗಿ ಪ್ರಾರಂಭಗೊಂಡಿವೆ. ಆತನು ಸುಂದರವಾದ ತುಂತುರು ಮಳೆಯನ್ನೂ, ದಟ್ಟವಾದ ಇಬ್ಬನಿಯನ್ನೂ ಅವು ಇಲ್ಲದಿದ್ದ ಸ್ಥಳಗಳಲ್ಲಿ ಸುರಿಸುತ್ತಾನೆ. ಆತನು

ಬೇಸಿಗೆಯಲ್ಲಿ ಮೋಡಗಳನ್ನು ಕಳುಹಿಸುತ್ತಾನೆ. ಇದು ಇಪ್ಪತ್ತು ವರ್ಷಗಳ ಹಿಂದೆಯೂ ಯಾರಿಗೂ ಗೊತ್ತಿದ್ದಿಲ್ಲ. ಇದು ಬೇಸಿಗೆಯ ತೀವ್ರತೆಯನ್ನು ಕುಗ್ಗಿಸುತ್ತದೆ. ಹೀಗಾಗಿ ಅದು ಭೂಮಿಯನ್ನು ಅಷ್ಟಾಗಿ ಒಣಗಿಸುವುದಿಲ್ಲ. ಐದು ವರ್ಷಗಳ ಹಿಂದೆ ಆತನು ಜುಲೈ ಮತ್ತು ಆಗಸ್ಟ್ ತಿಂಗಳುಗಳಲ್ಲಿ (ಎಂದೂ ಮಳೆಯಾಗದ ತಿಂಗಳುಗಳು) ಜಪ್ಫಾದಲ್ಲಿ ಮೂರು ಘಂಟೆಗಳ ಮಳೆಯನ್ನು, ಡಮಾಸ್ಕಸ್ಸಿನಲ್ಲಿ ಹದಿನಾರು ಘಂಟೆಗಳ ಮಳೆಯನ್ನು ಸುತ್ತಣ ಪ್ರದೇಶಗಳಲ್ಲೆಲ್ಲಾ ಹೆಚ್ಚಾದ ಮಳೆಯನ್ನು ಬರಮಾಡಿದನು. ಇದರಿಂದ ಪಾಲೆಸ್ಟೈನಿನ ಹವಾಗುಣ ಬದಲಾಗುತ್ತಿದೆ ಎಂಬ ಸಾಕ್ಷ್ಯವನ್ನು ಅಮೆರಿಕಾ ಪತ್ರಿಕೆಗಳು ವಿಮರ್ಶಿಸಿದವು. ಅದಲ್ಲದೆ, ನಾವು ಇಲ್ಲಿ ಬಂದಾಗ ಕೆಲವು ಯೆಹೂದ್ಯರು ಮಾತ್ರವೇ ಇಲ್ಲಿಗೆ ಹಿಂತಿರುಗಿ ಬರುತ್ತಿದ್ದರು. ಆದರೆ ರಷ್ಯಾ ಮತ್ತು ಜರ್ಮನಿ ಮುಂತಾದ ಇತರೆ ಕಡೆಗಳಲ್ಲಿ ಉಂಟಾದ ಉಪದ್ರವಗಳು ಅವರನ್ನು ಹೊರಹಾಕಲು ಪ್ರಾರಂಭಿಸಿದವು. ಸುಲ್ತಾನನ ರಾಜಾಜ್ಞೆಯ ಹೊರತಾಗಿಯೂ ಅವರು ಈ ದೇಶಕ್ಕೆ ಹಿಂದಿರುಗಲು, ಭೂಮಿಯನ್ನು ಕೊಂಡುಕೊಳ್ಳಲು, ಬಿತ್ತುವುದಕ್ಕೂ, ಮನೆ ಕಟ್ಟಿಕೊಳ್ಳುವುದಕ್ಕೂ, ನಗರದ ವಾಣಿಜ್ಯ ವ್ಯವಹಾರಗಳಲ್ಲಿ ತಮ್ಮನ್ನು ತೊಡಗಿಸಿ ಕೊಳ್ಳುವುದಕ್ಕೂ ಪ್ರಾರಂಭಿಸಿದರು. ಈಗ ಅಲ್ಲಿ ನಾವು ಬಂದ ಕಾಲಕ್ಕಿಂತ ಸಹಸ್ರಾರು ಮಂದಿ ಹೆಚ್ಚಾಗಿ ಅಂಥವರು ಇದ್ದಾರೆ.

"ವ್ಯಾಪಾರೋದ್ಯಮಗಳ ಕುರಿತಾಗಿ ನೋಡುವಾಗ, ವಾಸ್ತವವಾಗಿ ಯೆರೂಸಲೇಮ್ ಈಗ ಯೆಹೂದ್ಯರ ಕೈಯಲ್ಲಿದೆ. ಯೆಹೂದ್ಯರು ಈ ಹಿಂದೆ ಒಮ್ಮೆ ಇದ್ದಂತೆ ಈಗ ಮಹಮದ್ದೀಯರ ಕಾಲ ಕೆಳಗೆ ಇಲ್ಲ. ಅವರು ಯೆರೆಮೀಯ 31:38–40; 32:43–44 ರಲ್ಲಿ ಹೇಳಿರುವಂತೆಯೇ ತ್ವರಿತವಾಗಿ ನೂತನ ನಗರವನ್ನು ಕಟ್ಟುತ್ತಿದ್ದಾರೆ. ಇದರಿಂದ ಅಧಿಕಾರದಲ್ಲಿರುವ ತುರ್ಕಿಯರು ಸಹಾ ಇದನ್ನು ಗಮನಿಸುತ್ತಿದ್ದಾರೆ ಮತ್ತು ಒಬ್ಬರು ಮತ್ತೊಬ್ಬರಿಗೆ "ಇದು ದೇವರ ಕೆಲಸ, ನಾವು ಏನು ಮಾಡಲಾದೀತು? ನಾವು ಇದಕ್ಕೆಲ್ಲಾ ಏನು ಹೇಳಬಹುದು? ಆದರೆ ದೇವರು ನಮ್ಮ ದಿನಗಳಲ್ಲಿ ತನ್ನ ಮಾತುಗಳನ್ನು ಮತ್ತು ಆತನು ಅಬ್ರಹಾಮನೊಂದಿಗೆ ಮಾಡಿದ ಒಡಂಬಡಿಕೆಯನ್ನು ತ್ವರಿತವಾಗಿ ನೆರವೇರಿಸುತ್ತಿದ್ದಾನಲ್ಲವೋ? ನಾವು ಇದಕ್ಕೆ ಸಾಕ್ಷಿಗಳಾಗಿದ್ದೇವೆ" ಎಂದು ಹೇಳಿಕೊಳ್ಳುತ್ತಿದ್ದಾರೆ.

ಉಪದ್ರವ ಮತ್ತು ಪೀಡನೆಗಳನ್ನು ಸಹಿಸಿ ಕೊಳ್ಳಲಾಗದಂತೆ ಮಣ್ಣಿನ ಧೂಳಾಗುವಂತೆ ಪುಡಿ ಪುಡಿ ಮಾಡಿದ ಅವರನ್ನು, ಇತ್ತೀಚಿನ ವರ್ಷಗಳಲ್ಲಿ ಅವರಲ್ಲಿ ಅನೇಕರು ತಮ್ಮ ನೆರೆಹೊರೆಯ ಅನ್ಯಜನರುಗಳಿಗಿಂತ ಮಿಗಿಲಾಗಿ ತಮ್ಮ ಸಂಪತ್ತು ಮತ್ತು ವಿಶಿಷ್ಟತೆಯೊಡನೆ ಹೆಚ್ಚಿಸಿ ಕೊಳ್ಳುತ್ತಿರುವುದನ್ನು ನಾವು ಕಾಣುತ್ತಿದ್ದೇವೆ. ಅಂಥಾಃ ಐಶ್ವರ್ಯ ಮತ್ತು ವಿಶಿಷ್ಟತೆಯೊಡನೆ, ಅನೇಕ ಸಂದರ್ಭಗಳಲ್ಲಿ ಅದನ್ನು ಯೆಹೂದ್ಯರ ಸಂತತಿಯ ಮೇಲ್ಮೆಗಾಗಿ ಉಪಯೋಗಿಸುವ ಪರೋಪಕಾರಿ ಅಭಿಲಾಷೆಯ ಹೆಚ್ಚಳವುಂಟಾಗುತ್ತದೆ; ಮತ್ತು ಬುದ್ಧಿವಂತ ಮತ್ತು ಉತ್ತಮವಾಗಿ ನಿರ್ದೇಶಿಸಲ್ಪಟ್ಟ ಪ್ರಯತ್ನಗಳು ಈ ದೆಸೆಯಲ್ಲಿ ಹೆಚ್ಚಾಗಿ ನೆರವೇರುತ್ತವೆ. ಯೆಹೂದ್ಯರ ಮತ್ತು ಅನ್ಯಜನಗಳೊಳಗೆ ಬಗ್ಗೆ ಆಲೋಚಿಸುವವರ ಗಮನವು ಯೆಹೂದ್ಯರ ವಿಷಯಗಳಲ್ಲಿ ಈ ತಿರುವಿಗೆ ಸೆಳೆಯುವುದಾಗಿದೆ.

ಪ್ರಮುಖವಾದ ಯೆಹೂದ್ಯ ಪತ್ರಿಕೆಗಳ ಹೇಳಿಕೆಗಳ ಆಧಾರದಿಂದ, ಪಾಲೆಸ್ಟೈನನ್ನು ಒಕ್ಕಲಾಗಿಸುವಂತೆ ಪ್ರಗತಿಯಲ್ಲಿರುವ ವಿವಿಧ ಚಳುವಳಿಗಳು ಮತ್ತು ಅಲ್ಲಿ ಈಗಾಗಲೇ ನೆಲೆಸಿರುವವರಿಗೆ ನೀಡುವ ಸಹಾಯ ಮತ್ತು ಏಳಿಗೆ ಇವುಗಳಿಂದ, ಸಹಸ್ರಾರು ಜನರು ಈಗ ಕಾತುರತೆಯ ಕಣ್ಣುಗಳಿಂದ ವಾಗ್ದಾನದ ಭೂಮಿಯತ್ತ ತಿರುಗಿಕೊಳ್ಳುತ್ತಿದ್ದಾರೆ. ಯೆಹೂದ್ಯರ ವಿಷಯದಲ್ಲಿನ ತಿರುವು 1878ರಿಂದೀಚೆಗೆ ಉಂಟಾಗುತ್ತಿದೆ ಮತ್ತು ಆ ದಿನದಿಂದ ಘಟನೆಗಳಿಗೆ ರೂಪಕೊಡುವುದು ಪ್ರಸ್ತಾಪದ ಬಗ್ಗೆ ಗಮನೀಯ ಎಚ್ಚರಿಕೆಯನ್ನುಂಟು ಮಾಡಿದೆ ಮತ್ತು ಈಗಲೂ ಮಾಡುತ್ತಿದೆ. ಇದು ತಾನಾಗಿಯೇ ಕಾಲದ ಮಹತ್ವವಾದ ಸೂಚನೆಯಾಗಿದೆ. 'The Jewish World' (20 ಆಗಸ್ಟ್ 1886) ಎಂಬ ಸಂಚಿಕೆಯಿಂದ ನಾವು ಕೆಳಗಿನವುಗಳನ್ನು ಉದಾಹರಣೆಯಾಗಿ ಉಲ್ಲೇಖಿಸುತ್ತೇವೆ:

"ಮೋಡಗಳಲ್ಲಿ ಬಿರುಕುಗಳಿದ್ದು ಅವುಗಳು ಇದುವರೆಗೆ ಎಷ್ಟೋ ನಿರುತ್ಸಾಹಗೊಳಿಸುವ ನೆರಳನ್ನು ಪವಿತ್ರ ಭೂಮಿಯ ಮೇಲೆ ಚೆಲ್ಲುತ್ತಿತ್ತು. ಆ ಅಸಂತೋಷ ದೇಶದ ಭವಿಷ್ಯವು, ಇದುವರೆಗೆ ಅಭೇಧ್ಯವಾದ ಕತ್ತಲಿಂದ ಸುತ್ತಲ್ಪಟ್ಟಿದ್ದು, ಈಗ ಮಂಕಾಗಿ ಪ್ರಕಾಶಿಸಲು ಪ್ರಾರಂಭಿಸಿದೆ; ಮತ್ತು ಸಂತೋಷಕರ ಸಂಗತಿಗಳ ಪರಿಸ್ಥಿತಿಯ ಪ್ರಕಾಶಿಸುವಿಕೆಯು ಸುಮಾರಾಗಿ ನಮ್ಮ ಭವಿಷ್ಯ ನುಡಿಗಳ ಅಂದಾಜು ಮಾಡಬಹುದಾದಷ್ಟು ದೂರದಲ್ಲಿದೆ.... ಎರಡು ಸಂಸ್ಥೆಗಳು ಪಾಲೆಸ್ಟೈನಿನಲ್ಲಿರುವ ಯೆಹೂದ್ಯರ ಪರಿಸ್ಥಿತಿಗಳ ಸುಧಾರಣೆಯು ಎದ್ದು ಕಾಣುವ ಪಾತ್ರವನ್ನು ವಹಿಸುವಂತೆ ನಿಯಮಿಸಲ್ಪಟ್ಟಿವೆ. ಅವುಗಳೆಂದರೆ, ಜಪ್ಫಾದ ಕೃಷಿ ಶಾಲೆ ಮತ್ತು ಯೆರೂಸಲೇಮಿನ ನೆರೆಯಲ್ಲಿರುವ Lionel De Rothschild ಎಂಬ ಸಂಸ್ಥೆ. ನಾವು ಮೂರನೆಯದನ್ನು

Montefiore Testimonial Fund ಎಂಬ ರೂಪದಲ್ಲಿ ಸೇರಿಸಬಹುದು. ಅದು ಸಂಘಗಳನ್ನು ಮತ್ತು ಅಗ್ಗದ ದರದ ನಿವೇಶನಗಳನ್ನು ಕಟ್ಟುವ ಒತ್ತಾಸೆಯ ಮೂಲಕ ಮಿತವ್ಯಯವನ್ನು ಪೋಷಿಸುವ ಮತ್ತು ಪವಿತ್ರನಗರದಲ್ಲಿ ಕಡುಬಡತನ ಮತ್ತು ಸಂಕಟಮಯ ಜೀವಿತವನ್ನು ಕಡಿಮೆಗೊಳಿಸುವ ಕಾರ್ಯವನ್ನು ಬಹಳಷ್ಟು ಮಾಡಿದೆ. ನಾವು ಗಮನಿಸುವ ಈ ಸಮಯದಲ್ಲಿ ಪಾಲೆಸ್ಟೈನಿನಲ್ಲಿರುವ ಯೆಹೂದ್ಯರ ಪ್ರತೀಕ್ಷೆಯು ಇನ್ನು ಮುಂದೆ ಮಂಕಾಗಿರಬಾರದು ಎಂದು ಚಿಂತಿಸುವವರಾಗಿದ್ದೇವೆ. ಒಂದು ಕಡೆಯಲ್ಲಿ ನಮ್ಮ ಸಹೋದರರ ಸ್ಥಿತಿಯನ್ನು ಸುಧಾರಿಸುವಂತೆ ಕಾರ್ಯನಿರತವಾದ ಪಡೆಗಳಿವೆ. ಅವು ಬುದ್ಧಿವಂತಿಕೆಯಿಂದ ಸಜ್ಜುಗೊಂಡಿದೆ ಮತ್ತು ದಕ್ಷತೆಯಿಂದ ಸಂಘಟಿಸಲ್ಪಟ್ಟಿದೆ ಮತ್ತು ಅವುಗಳನ್ನು ಈಗ ತತ್ಪರತೆಯಿಂದ ಅನ್ವಯಿಸಲಾಗಿದೆ. ಮತ್ತೊಂದೆಡೆಯಲ್ಲಿ, ಜನರು ತಮ್ಮ ಸಂಕಟಗಳಿಂದ, ನಿಷ್ಕ್ರಿಯೆಗಳಿಂದ ಬಳಲಿಹೋಗುತ್ತಿದ್ದಾರೆ ಮತ್ತು ಅವರ ಪುನರ್ವಸತಿಗಾಗಿ ಮಾಡಿರುವ ಪ್ರಯತ್ನಗಳ ಲಾಭಪಡಕೊಳ್ಳುವಲ್ಲಿ ಹೆಚ್ಚುತ್ತಿರುವ ಧೋರಣೆ ಹೊಂದಿದ್ದಾರೆ. ಇವುಗಳು ಸಂತೋಷಕರ ಪರಿಣಾಮಗಳನ್ನು ಉಂಟು ಮಾಡುವುದರಲ್ಲಿ ಪರಿಪೂರ್ಣವುಳ್ಳದ್ದಾಗಿದೆ ಮತ್ತು ಯಾವುದೇ ಯೆಹೂದ್ಯನು ಇದನ್ನು ಸಂತೋಷದಿಂದ ನಿರೀಕ್ಷಿಸುವುದರಲ್ಲಿ ಸೋತು ಹೋಗುವುದಿಲ್ಲ".

ನಂತರ ದಿನಗಳಲ್ಲಿ ಅದೇ ಪತ್ರಿಕೆಯಲ್ಲಿ ಪ್ರಕಟವಾದ 'The Future of Palestine' ಎಂಬ ಮುಖ್ಯವಾದ ಲೇಖನವು ಈ ಮಾತುಗಳಿಂದ ಮುಕ್ತಾಯಗೊಳ್ಳುತ್ತದೆ –

Montefiore, Hirsch ಮತ್ತು Rothschildನ ಬಂಡವಾಳದಿಂದ ಬಿತ್ತಿದ ವಸಾಹತುಗಳಲ್ಲಿ ಕೃಷಿ ಮೂಲವಸ್ತುಗಳು ತಡವಾಗಿ ಹರಿದು ಬಂದಿರುವುದರಿಂದ ಬದಲಾವಣೆಗೊಂಡ ಸ್ಥಳದಲ್ಲಿ ಶ್ರಮದಿಂದ ಸಮ್ಮತಿಯೊಡನೆ ದುಡಿಯುವ ಕೈಗಳನ್ನು ಹುಡುಕಬೇಕು. ಆಗ 'ಒಣ ನೆಲವು ಹರ್ಷಿಸಿ ತಾವರೆಯಂತೆ ಕಳಕಳಿಸುವುದು'. ಇಚ್ಛೆಯುಳ್ಳ ಕೈಗಳು, ಇಚ್ಛೆಯುಳ್ಳ ಹೃದಯಗಳು ಪವಿತ್ರ ಭೂಮಿಯನ್ನು ಅದರ ಮರಣದ ದೀರ್ಘ ರಾತ್ರಿಯಿಂದ ಮರಳಿ ಪಡೆದು, ಯೆಹೂದ್ಯರ ರಾಷ್ಟ್ರೀಯ ಮನೆಯನ್ನು ಬೆಳಗಬೇಕು ಮತ್ತು ಪುನರುಜ್ಜೀವಪಡಿಸಬೇಕು.

ಮತ್ತೊಂದು ವರ್ತಮಾನ ಪತ್ರಿಕೆ 'The Jewish Messenger' ಹೀಗೆ ಹೇಳುತ್ತದೆ :–

"ಜನರು ತಮ್ಮ ಸ್ವಲ್ಪ ಚಿಂತೆಯಲ್ಲಿ ಮಗ್ನರಾಗಿರುವಾಗ, ನಿರೀಕ್ಷೆ ಮತ್ತು ಭಯಗಳಿಂದ ಬದಲಾವಣೆ ಹೊಂದಿರುವಾಗ, ಮಾನವ ಘಟನೆಗಳ ಭವ್ಯವಾದ ರಾಜನಡಿಗೆಯು ಮುಂದಕ್ಕೆ ಪ್ರಗತಿ ಹೊಂದುತ್ತದೆ ಮತ್ತು ಮಾನವ ಕ್ರಿಯೆಗಳನ್ನು ನಿಯಂತ್ರಿಸುವ ಅನಿವಾರ್ಯ ನಿಯಮವನ್ನು ನೆರವೇರಿಸುವಂತೆ ಮುಕ್ತಾಯದೊಂದಿಗೆ ನೆರವೇರಿಸುತ್ತದೆ. ಜನರು ಅಲ್ಲಿ, ಇಲ್ಲಿ ಈ ಮುಂದುವರಿಕೆಯ ಅಲೆಯನ್ನು ನಿಲ್ಲಿಸುವಂತೆ ಮತ್ತು ನಿತ್ಯತ್ವದ ಆಜ್ಞೆಯನ್ನು ಪ್ರತಿಬಂಧಿಸಲು ತಮ್ಮ ದುರ್ಬಲ ಧ್ವನಿಗಳನ್ನು ಎತ್ತುತ್ತಾರೆ. ಅದೇ ರೀತಿಯಲ್ಲಿ ಅವರು ವಿಶ್ವವನ್ನು ಆಳುವ ನಿಯಮವನ್ನು ತಡೆಯಲು ಪ್ರಯತ್ನಿಸಲೂಬಹುದು. ಸಂತತಿಗಳಿಗೆ ನಿಗದಿತ ಓಟದ ಕ್ರಮವಿರುವಂತೆ, ನೀಲಾಕಾಶದ ಗುಮ್ಮಟದಲ್ಲಿ ಥಳಥಳಿಸುತ್ತಾ ಇರುವ ನಕ್ಷತ್ರವು ಸ್ಥಿರವಾಗಿರುತ್ತದೆ. ಅವುಗಳಲ್ಲಿ ಇಸ್ರಾಯೇಲ್ಯರ ಸಂತತಿಯು ಪ್ರಕಾಶಿಸುವ ಸ್ಥಿರವಾದ ನಕ್ಷತ್ರವಾಗಿದೆ. ಅವರ ಎಲ್ಲಾ ಅಲೆದಾಟಗಳಲ್ಲಿ ಅದು ತನ್ನ ಕ್ರಮಕ್ಕೆ ಸತ್ಯವಾದುದಾಗಿದೆ. ಅದರ ನಿಯೋಗವನ್ನು ಮುನ್ನೋಡಲಾಗಿದೆ ಮತ್ತು ಮುಂತಿಳಿಸಲಾಗಿದೆ ಮತ್ತು ಪವಿತ್ರ ಭೂಮಿಗೆ ಅದರ ಅಂತಿಮ ಪುನರ್‌ವಶವನ್ನು ಪ್ರವಾದಿಸಲಾಗಿದೆ. ಈ ಪ್ರವಾದನೆಯು ಈಗ ನೆರವೇರುತ್ತಿದೆ ಎಂಬುದಾಗಿ ಸಮಯ ಸಂಕೇತಗಳು ಸೂಚಿಸುತ್ತಿವೆ. ಅದು ಎಷ್ಟೋ ಮೌನವಾಗಿ ಮತ್ತು ಕ್ರಮ ಕ್ರಮವಾಗಿ ನೆರವೇರುತ್ತಿದೆ. ಈ ಪ್ರಸ್ತಾಪದ ಬಗ್ಗೆ ಗಮನಕೊಟ್ಟವರು ಮಾತ್ರವೇ ಆದರ ಕಾರ್ಯದ ಪ್ರಾಮುಖ್ಯತೆಯನ್ನು ಗ್ರಹಿಸಿಕೊಳ್ಳುತ್ತಾರೆ.

"ಯೆಹೂದ್ಯ ಕುಲಕ್ಕೆ ಪಾಲೆಸ್ಟೈನ್ ರಾಜಕೀಯ ಅಗತ್ಯತೆಯಾಗಿದೆ. ಪವಿತ್ರದೇಶದಲ್ಲಿ ಒಂದು ರಾಷ್ಟ್ರವನ್ನು ಮತ್ತೊಮ್ಮೆ ಕಂಡುಕೊಳ್ಳುವುದು ಇಸ್ರಾಯೇಲ್ಯರೆಲ್ಲರನ್ನು ಉನ್ನತಗೊಳಿಸುವುದಾಗಿದೆ. ಅದು ಈ ಲೋಕದಲ್ಲಿ ಇತರ ರಾಷ್ಟ್ರಗಳ ನಡುವೆ ಒಂದು ರಾಷ್ಟ್ರವನ್ನಾಗಿ ಇಡುತ್ತದೆ. ಅದು ಯೆಹೂದ್ಯರಿಗೆ ಆ ರಾಜಕೀಯ ಅಧಿಕಾರ ಮತ್ತು ಸಾರ್ವಭೌಮತೆಯ ಹಕ್ಕನ್ನು ನೀಡುತ್ತದೆ. ಇದೆಂದರೆ ಆಶ್ರಯ ಅಥವಾ ರಕ್ಷಣೆ. ಅದು ಅವರನ್ನು ತಮ್ಮ ದೇಶದ ಪ್ರಜೆಯನ್ನಾಗಿ ಮಾಡುತ್ತದೆ, ಮತ್ತು ಲೋಕದ ಇತರೆ ದೇಶಗಳಿಗೆ ರಹದಾರಿ (ಪಾಸ್ಪೋರ್ಟ್) ಒದಗಿಸಿ ಕೊಡುತ್ತದೆ..... ಇದು ಹಣದ ಲೆಕ್ಕ ಮಾಡುವ ಕೋಣೆಯಲ್ಲಿ ಪುಸ್ತಕಗಳ ಮಧ್ಯೆ ತಲ್ಲೀನರಾಗಿರುವ ಮನುಷ್ಯರಿಗೆ, ತನ್ನ ಭಂಡಾರ ಕೊಠಡಿಯಲ್ಲಿ ಕುಳಿತು ತನ್ನ ಲಾಭ ನಷ್ಟಗಳನ್ನು ಲೆಕ್ಕ ಹಾಕುವವರಿಗೆ, ಸಾಮಾಜಿಕ ಸಂತೋಷದ ಪರಮಸುಖದಲ್ಲಿ ತೋಯಿಸಿಕೊಂಡವರಿಗೆ ಪ್ರಾಯೋಗಿಕವಲ್ಲವೆಂದು ಕಂಡುಬರಬಹುದು. ಆದರೆ

ರಾಜಕೀಯ ಜಾತಕವನ್ನು ಅಧ್ಯಯನ ಮಾಡುವವರಿಗೆ ಅದು ಮಧ್ಯಾಹ್ನದ ಸೂರ್ಯನಂತೆ ಸ್ಪಷ್ಟತೆ ಯುಳ್ಳದ್ದಾಗಿದೆ".

ರಾಜಕೀಯ ಸ್ವಾಯತ್ತೆಯು ಸ್ವನಿಯಂತ್ರತೆಯು ಮನಗಂಡಿರುವುದೇನೆಂದರೆ. ಲೋಕದಲ್ಲೆಡೆ ಚದುರಿ ಹೋಗಿರುವ ಯೆಹೂದ್ಯರು ಒಂದು ಗುಂಪಾಗಿ ಪೂರ್ಣ ಸಂಸ್ಥೆಯಾಗಿ ಪಾಲೆಸ್ಟೈನಿನಲ್ಲಿ ಒಟ್ಟುಗೂಡಲಾರರು. ಏಷ್ಯಾದಲ್ಲಿ 300,000 ಮಂದಿ, ಆಫ್ರಿಕಾದಲ್ಲಿ 400,000 ಮಂದಿ ಮತ್ತು ಯೂರೋಪಿನಲ್ಲಿ 5,000,000 ಮಂದಿ ಯೆಹೂದ್ಯರಿದ್ದಾರೆ. ಇವರುಗಳಿಂದಲೇ ಪಾಲೆಸ್ಟೈನ್ ತನ್ನ ಜೀವದ ಪುನಃಸ್ಥಾಪನೆಯನ್ನು ಪಡಕೊಳ್ಳಬೇಕಾಗಿದೆ. ಅಮೆರಿಕಾದಲ್ಲಿ ಹುಟ್ಟಿದ ಯೆಹೂದ್ಯನು ನಿಸ್ಸಂದೇಹವಾಗಿ ಅಮೆರಿಕದವನಾಗಿಯೇ ಇರಬಯಸುತ್ತಾನೆ. ಆತನು ಎಂದಾದರೂ ಪವಿತ್ರ ಭೂಮಿಯನ್ನು ಸಂದರ್ಶಿಸಿದರೆ ಅದು ಕೇವಲ ಸಂತೋಷ ಮತ್ತು ಪ್ರಯಾಣಕ್ಕಾಗಿ ಮತ್ತು ಆತನ ಕುಲದ ಮುಖ್ಯ ಜನನ ಸ್ಥಳವಾದ ಆ ಸ್ಥಳವನ್ನು ನೋಡುವುದಕ್ಕಾಗಿ ಭೇಟಿ ಕೊಡುತ್ತಾನೆ.

"ಭೌಗೋಳಿಕವಾಗಿ ಮಾತನಾಡುವುದಾದರೆ ಪಾಲೆಸ್ಟೈನ್ ಹೆಚ್ಚಿನ ರಾಜಕೀಯ, ಬೌದ್ಧಿಕ ಮತ್ತು ನೈತಿಕ ಶಕ್ತಿಯ ಪ್ರಭಾವವನ್ನು ಬೀರಲು ಲೋಕದ ಇತರೆ ರಾಜ್ಯಗಳ ಮಧ್ಯೆ ಬಹಳ ಸಣ್ಣ ದೇಶವಾಗಿದೆ. ಪುರಾತನ ಕಾಲದಲ್ಲಿ ಗ್ರೀಸ್ ದೇಶವು ಶಕ್ತಿಶಾಲಿಯಾಗಿದ್ದಂತೆ ಆಧುನಿಕ ಸಮಯದಲ್ಲಿ ಬ್ರಿಟನ್ ಎಂಬ ಚಿಕ್ಕ ದ್ವೀಪವು ಸಹ ಶಕ್ತಿಯುತವಾಗಿದೆ ಎಂದು ನಾವು ಉತ್ತರಿಸುತ್ತೇವೆ. ಭೌಗೋಳಿಕವಾಗಿ ಮಾತನಾಡುವುದಾದರೆ, ಅವುಗಳು ಏನು? ಬುದ್ಧಿವಂತಿಕೆ, ನೈತಿಕ ಬಲ ಮತ್ತು ರಾಷ್ಟ್ರದ ಬಗ್ಗೆ ಹೆಮ್ಮೆ ಇವುಗಳು ದೇಶವನ್ನು ಶ್ರೇಷ್ಠವನ್ನಾಗಿಸುವುದೇ ಹೊರತು, ಅದರ ಭೂಭಾಗದ ವಿಸ್ತೀರ್ಣವಲ್ಲ ಮತ್ತು ಬುದ್ಧಿವಂತಿಕೆ, ನೈತಿಕ ಶಕ್ತಿಯು ಇಸ್ರಾಯೇಲ್ಯನ್ನು ಅನೇಕ ದೇಶಗಳಲ್ಲಿ ಹೆಸರುವಾಸಿಯಾಗುವಂತೆ ಮಾಡುತ್ತದೆ".

"The Jewish Chronicle" ಹೀಗೆ ಹೇಳುತ್ತದೆ :–

"ಚಳುವಳಿಯನ್ನು ತಡೆಯಲಾಗದು. ನೂತನ ಸಾಮೂಹಿಕ ವಲಸೆಯು ನಡೆಯುತ್ತಿರುವಾಗ ನಾವು ಕೈಜೋಡಿಸಿ ನಿಂತು ನಮ್ಮನ್ನು ನಾವು ನಿಯಂತ್ರಿಸಿ ಕೊಳ್ಳಲಾಗದು. ಯೆಹೂದ್ಯರಾದ ನಾವು, ಸುಮಾರು ಎರಡು ಸಾವಿರ ವರ್ಷಗಳವರೆಗೆ ನಾವು ದಾಟಿಹೋದ ಪರಿಶ್ರಮದ ಪೂರ್ಣಗೊಳಿಸುವಿಕೆಯನ್ನು ನಾವು ನಮ್ಮ ಪಿತೃಗಳ ಭೂಮಿಯನ್ನು ಹೊಂದಿಕೊಂಡಾಗಲೇ ತಲುಪುತ್ತೇವೆ ಎಂಬುದನ್ನು ಗಟ್ಟಿಯಾಗಿ ಹಿಡಿ ಕೊಂಡಿದ್ದೇವೆ. ಆ ನಂಬಿಕೆಯು ಅದು ನೆರವೇರುತ್ತದೆಂದು ಕಂಡುಬರುವ ಕ್ಷಣದಲ್ಲಿ ಸತ್ತುಹೋಗುತ್ತದೆಯೋ? ಅಥವಾ ಹಿಂತಿರುಗುವಿಕೆಯು ಮಾನವ ಕುಲದ ಸಹಕಾರಕ್ಕೆ ಮೀರಿದ ಗಹನವಾದ ಸಂಗತಿಗಳಿಂದ ಬರುತ್ತದೆಂದು ನಿರೀಕ್ಷಿಸಬಹುದೋ?. ದೇವರು ತನ್ನ ಚಿತ್ತವನ್ನು ಮಾನವ ಚಿತ್ತದ ಮೂಲಕವಾಗಿ ಕಾರ್ಯಗತಗೊಳಿಸುತ್ತಾನೆ ಮತ್ತು ಪ್ರವಾದನೆಗಳು ನೆರವೇರಬೇಕಾದರೆ ಅದು ಮಾನವ ಚಿತ್ತ ಮತ್ತು ಸಾಮರ್ಥ್ಯಗಳ ಮೂಲಕ. ಯೆಹೂದ್ಯ ವಸಾಹತುಗಳನ್ನು ಪಾಲೆಸ್ಟೈನಿನಲ್ಲಿಡುವ ಪ್ರಾಯೋಗಿಕ ಯೋಜನೆಯ ಸಂಬಂಧದಲ್ಲಿ ಇದೊಂದು ದೊಡ್ಡ ವಿಷಯವಾಗಿ ಕಂಡುಬರಬಹುದು. ಆದರೆ, ಇಂತಹ ಸಣ್ಣ ಪ್ರಾರಂಭಗಳಿಂದ ಅಂತಹ ಮಹಾಘಟನೆಗಳು ಕೆಲವೊಮ್ಮೆ ಏಳುತ್ತವೆ. ಮತ್ತು ಯೆಹೂದ್ಯರ ಒಂದು ಸಣ್ಣ ಗುಂಪು ಪವಿತ್ರ ನಗರಕ್ಕೆ ಹಿಂತಿರುಗುವ ಸಾಧ್ಯತೆಯು, ಹೆಚ್ಚಿನ ಸಂಖ್ಯೆಯಲ್ಲಿ ಹಿಂತಿರುಗುವ ಸಾಧ್ಯತೆಯನ್ನು ಮತ್ತು ಕಾರ್ಯರೂಪಕ್ಕೆ ತರುವುದನ್ನು, ಮನಸ್ಸಿಗೆ ಬರುವುದರಲ್ಲಿ ಸೋತುಹೋಗುವುದಿಲ್ಲ ಮತ್ತು ಯೆಹೂದ್ಯ ಚರಿತ್ರೆ ಮತ್ತು ಯೆಹೂದ್ಯರ ಹಬ್ಬಯಕೆಗಳು ಸೂಚಿತವಾಗುತ್ತವೆ.

ಯೆಹೂದ್ಯರನ್ನು ಹೊರತುಪಡಿಸಿ, ಪ್ರಪಂಚದಲ್ಲಿನ ಇತರೆ ಪ್ರಖ್ಯಾತರು, ಇಸ್ರಾಯೇಲಿನ ಉನ್ನತಿಯ ಮಹತ್ವವನ್ನು ನೋಡುತ್ತಾರೆ ಮತ್ತು ಅದನ್ನು ವಿಮರ್ಶಿಸುತ್ತಾರೆ. ಉದಾಹರಣೆಗೆ "Central Presbyterian" ಪತ್ರಿಕೆಯಲ್ಲಿ ಪ್ರಕಟವಾದ ಇದನ್ನು ಗಮನಿಸಿರಿ"–

"ಸಾಯುವುದರ ಬದಲಾಗಿ ಯೆಹೂದ್ಯ ಸಂಸ್ಥೆಯು ಹೆಚ್ಚುತ್ತಿರುವ ಜೀವನ ಶಕ್ತಿಯನ್ನು ತೋರಿಸುತ್ತದೆ. ಅವರನ್ನು ತುಳಿಯಲಾಗದು ಅಥವಾ ನುಂಗಲಾಗದು. ಅವರು ದೇಶದಿಂದ ದೇಶಕ್ಕೆ ಸಾಗುತ್ತಾ ಹೋದೆಡೆಯಲ್ಲೆಲ್ಲಾ ಕಾರ್ಯತಃ ಪ್ರವೀಣರಾಗುತ್ತಾರೆ. ಅವರಿಗೆ ಜರ್ಮನಿಯಲ್ಲಿ ಮತ್ತು ಹಂಗೇರಿಯಲ್ಲಿ ಭೂಮಿಯು ದೊರೆತಿದೆ ಮತ್ತು ಅವರು ರಷ್ಯಾದಲ್ಲಿ ಶ್ರೀಮಂತರಾಗಿದ್ದಾರೆ. ಅವರು ಲಂಡನ್ ಮತ್ತು ಪ್ಯಾರಿಸ್‌ಗಳಲ್ಲಿ, ಮತ್ತು ಯೂರೋಪಿನ ವಾಣಿಜ್ಯ ಕೇಂದ್ರಗಳಲ್ಲಿ ದೊಡ್ಡ ಲೇವಾದೇವಿಗಾರರಾಗಿದ್ದಾರೆ. ಇತ್ತೀಚಿನ ಹತ್ತು ವರ್ಷಗಳಲ್ಲಿ Rothchildsಗಳು ಇಂಗ್ಲೆಂಡ್, ಆಸ್ಟ್ರೇಲಿಯಾ. ಪ್ರುಸ್ಸಿಯಾ, ಫ್ರಾನ್ಸ್, ರಷ್ಯಾ ಮತ್ತು ಬ್ರೆಜಿಲ್ ದೇಶಗಳಿಗೆ £100,000,000ಗಳಷ್ಟು ಹಣವನ್ನು ಸಾಲದ ರೂಪದಲ್ಲಿ ನೀಡಿದ್ದಾರೆ".

ಇಂಗ್ಲೆಂಡಿನ Lord Shaftesbury ಎಂಬುವವರು ಇತ್ತೀಚೆಗೆ ಹೀಗೆ ಹೇಳಿದ್ದಾರೆ :–

"ಈಗ ಮುಂಬರುತ್ತಿರುವ ಆ ಅದ್ಭುತ ಜನರ ಬಗ್ಗೆ ಎಲ್ಲರಿಗೂ ಬಹಳಷ್ಟು ಅಸೂಯೆ ಇದೆ ಮತ್ತು ಎಂಥಾಃ ಸಂಕೇತ ಸಮಯಗಳು ಇದಾಗಿವೆ. ಅಂದರೆ ಎಲ್ಲಿ ಯೆಹೂದ್ಯರು ಇದ್ದಾರೋ ಅವರಲ್ಲಿರುವ ಪ್ರಮುಖ ವ್ಯಕ್ತಿಗಳು ಹಿಂಸೆಗೊಳಗಾಗುತ್ತಾರೆ ಅಥವಾ ಪ್ರಮುಖ ವ್ಯಕ್ತಿಗಳು ಎಲ್ಲಾ ವಿಧದ ಉದ್ಯೋಗಗಳ ನಾಯಕತ್ವ ವಹಿಸುವವರಾಗಿದ್ದಾರೆ!. ಬರ್ಲಿನ್ನಿನ ಒಬ್ಬ ಪ್ರಮುಖ ನಾಗರೀಕನನ್ನು "ಬರ್ಲಿನ್ ಮತ್ತು ಜರ್ಮನಿಯೆಲ್ಲಾ ಪ್ರಬಲವಾದ ಯೆಹೂದಿ ವಿರೋಧಿ ಭಾವನೆಗಳಿರುವುದರ ಇತಿಹಾಸವೇನು?" ಎಂದು ಪ್ರಶ್ನಿಸಲಾಗಿ ಆತನು "ನಾನು ಹೇಳುತ್ತೇನೆ, ಈ ಯೆಹೂದಿಗಳು ವಾಣಿಜ್ಯ ಕ್ಷೇತ್ರಕ್ಕೆ ಹೋದರೆ ಮೊದಲ ವ್ಯಾಪಾರಿಗಳಾಗುತ್ತಾರೆ, ಅವರು ಬ್ಯಾಂಕಿಂಗ್ ಹಾದಿಯಲ್ಲಿ ಹೋದರೆ ಅವರು ಮೊದಲ ಲೇವಾದೇವಿ ಮಾಡುವವರಾಗುತ್ತಾರೆ, ಅವರು ಕಾನೂನಿನ ಕಡೆಯಲ್ಲಿ ಹೋದರೆ ಮೊದಲ ವಕೀಲರುಗಳಾಗುತ್ತಾರೆ, ಅವರು ಸಾಹಿತ್ಯ ಕ್ಷೇತ್ರಕ್ಕೆ ಕಾಲಿಟ್ಟರೆ, ನಮ್ಮನ್ನೆಲ್ಲಾ ಹಿಂದಕ್ಕೆ ಹಾಕುತ್ತಾರೆ. ಅವರು ಯಾವುದೇ ಉದ್ಯೋಗಕ್ಕೆ ಕೈ ಹಚ್ಚಿದರೂ ಅವರು ಅನ್ಯಜನರನ್ನು ಹೊರಗೋಡಿಸುತ್ತಾರೆ. ನಾವು ಅವರ ಮುಂದೆ ನಿಲ್ಲಲಾರೆವು ಎಂದು ನಾನು ಹೇಳುತ್ತೇನೆ" ಎಂದು ಉತ್ತರಿಸಿದರು.

ರಷ್ಯಾ ಮತ್ತು ಪೋಲೆಂಡ್‌ಗಳಲ್ಲಿ ಯೆಹೂದ್ಯರಿಗೆ ನೀಡಿದ ಕಿರುಕುಳ ಧರ್ಮ ಅಥವಾ ರಾಷ್ಟ್ರೀಯತೆಯ ಮೇಲೆ ಆಧಾರಗೊಂಡದ್ದಲ್ಲ. ಅವುಗಳಿಗೆ ಈ ಬಗ್ಗೆ ಯಾವ ರೀತಿಯ ಸಂಬಂಧವೂ ಇರಲಿಲ್ಲ. ರಷ್ಯನ್ನರು ಯೆಹೂದ್ಯರ ಸ್ಥಾನದಲ್ಲಿರುವ ಯಾರಿಗಾದರೂ ಕಿರುಕುಳ ನೀಡುತ್ತಾರೆ. ಇದನ್ನು ನಿಮ್ಮ ಮನಸ್ಸಿನಲ್ಲಿಟ್ಟುಕೊಳ್ಳಿರಿ, ಯೆಹೂದ್ಯರು ಅಡವು/ಒತ್ತೆಯಿಡುವುದು ಭೋಗ್ಯದ ಮೂಲಕವಾಗಿ ರಷ್ಯಾದ ಗಣನೀಯವಾದ ಭೂ ಆಸ್ತಿಯನ್ನು ಹೊಂದಿದ್ದಾರೆ. ಅವರು ತಮ್ಮ ಸಾಲದ (debt) ಋಣದಲ್ಲಿ ಬಹಳ ಹೆಚ್ಚಿನ ಪ್ರಮಾಣದಲ್ಲಿ ರೈತಾಪಿ ಜನರನ್ನು ಹೊಂದಿದ್ದಾರೆ, ಮತ್ತು ಚಕ್ರಾಧಿಪತ್ಯದ ವಿವಿಧ ಭಾಗಗಳಲ್ಲಿ ಅನೇಕ ಅಂಗಡಿ ಮಾಲೀಕರುಗಳನ್ನೂ ಹೊಂದಿದ್ದಾರೆ. ರಷ್ಯಾ ಜನರಿಗೆ ಯೆಹೂದ್ಯರನ್ನು ಸುಲಿಗೆ ಮತ್ತು ದರೋಡೆ ಮಾಡಲು ತಾನಾಗಿಯೇ ಪ್ರಸ್ತುತಿಗೊಳ್ಳುವ ಪ್ರತಿಯೊಂದು ಅವಕಾಶವು ನಿಂತುಹೋಗುವುದು ಬಹುತೇಕ ಖಚಿತ. ಯೆಹೂದ್ಯರನ್ನು ಮತ್ತು ಅವರ ಕಾಗದಗಳನ್ನು ನಾಶಪಡಿಸುವುದರಲ್ಲಿ ರಷ್ಯನ್ನರು ಅವರು ಪರಿಮಿತಿಗೊಳಿಸಿರುವ ಮತ್ತು ಅವರ ವಿರುದ್ಧ ಸಾಕ್ಷಿಯನ್ನಾಗಿ ತರಬಹುದಾದ ದಾಖಲೆಗಳನ್ನು ತೊಡೆದುಹಾಕುತ್ತಾರೆ ಮತ್ತು ಹಿಡಿದುಕೊಳ್ಳಬಹುದಾದ ಆಸ್ತಿ ಇರುವವರೆಗೆ ನೀವು ರಷ್ಯಾ ಜನರು ಯೆಹೂದ್ಯರ ವಿರುದ್ಧ ಏಳುವುದನ್ನು ನೋಡಬಹುದು."

ಕಾದಂಬರಿಕಾರ ಹಾಗೂ ಸಾಹಿತ್ಯ ಕ್ಷೇತ್ರದಲ್ಲಿ ಪ್ರಖ್ಯಾತನಾದ ಮಾನ್ಯ ಚಾರ್ಲ್ಸ್ ರೀಡೇ ಎಂಬುವರು ಕ್ರಿಸ್ತನಿಗೆ ಮತ್ತು ಸತ್ಯವೇದಕ್ಕೆ ಪರಿಪರ್ತನೆಯಾದ ಬಗ್ಗೆ ಕೆಲವು ವರ್ಷಗಳ ಹಿಂದೆ ಆಂಗ್ಲ ಪತ್ರಿಕೆಯೊಂದರಲ್ಲಿ ಹೀಗೆ ಪ್ರಕಟವಾಗಿತ್ತು –

ಯೆಹೂದ್ಯ ರಾಷ್ಟ್ರವು, ಕಷ್ಟ ತುಂಬಿದ ವಾತಾವರಣದಲ್ಲಿದ್ದರೂ, ಸಂಭವನೀಯವಾಗಿ ಅವರಿಗಾಗಿ ಸ್ಪಷ್ಟವಾಗಿ ಕಾಯುತ್ತಿದ್ದ ಪುರಾತನ ದೇಶವನ್ನು ಮತ್ತೆ ಪಡಕೊಳ್ಳುವರು. ಪ್ರವಾದನೆಗಳು ಹಗಲಿನಂತೆ ಎರಡು ಅಂಶಗಳಲ್ಲಿ ಸ್ಪಷ್ಟವಾಗಿವೆ: ಯೆಹೂದ್ಯರು ಪಾಲೆಸ್ಟೈನನ್ನು ಪುನಃ ಹೊಂದಿಕೊಳ್ಳಬೇಕು ಮತ್ತು ನಿಜವಾಗಿಯೂ ಲೆಬನಾನಿನಿಂದ ಯೂಫ್ರಟಿಸ್ವರೆಗೆ ಆಳಬೇಕು; ಈ ಘಟನೆಯು ಬಡವರ, ಕಷ್ಟ ಅನುಭವಿಸುತ್ತಿರುವ ಮಾನವ ಜಾತಿಯ, ಮತ್ತು ಸರ್ವಸಾಮಾನ್ಯವಾಗಿ ಸೃಷ್ಟಿಯ ಪರಿಸ್ಥಿತಿಯಲ್ಲಿ ವಿಶಾಲವಾದ ಸುಧಾರಣೆಗಳನ್ನುಂಟು ಮಾಡುವ ಬದಲಾವಣೆಗಳಲ್ಲಿ ಮೊದಲನೆಯದಾಗಿದೆ. ಈಗ ಇಲ್ಲಿ ಒಂದು ಭವ್ಯವಾದ ಘಟನೆಯ ಪ್ರತೀಕ್ಷೆಯು ನಾಳೆ ಸೂರ್ಯನುದಯಿಸುವಷ್ಟೇ ನಮಗೆ ಖಚಿತವಾಗಿದೆ. ಒಂದೇ ವ್ಯತ್ಯಾಸವೆಂದರೆ, ಸೂರ್ಯನು ನಿರ್ದಿಷ್ಟವಾದ ಸಮಯದಲ್ಲಿ ಮೂಡುತ್ತಾನೆ, ಮತ್ತು ಯೆಹೂದ್ಯರು ಸಿರಿಯಾವನ್ನು ವಶಪಡಿಸಿಕೊಂಡು ತಮ್ಮ ರಾಷ್ಟ್ರೀಯ ಭವ್ಯತೆಯನ್ನು ಅನಿಶ್ಚಿತವಾದ ದಿನವೊಂದರಲ್ಲಿ ಮತ್ತೆ ಪ್ರಾರಂಭಿಸುತ್ತಾರೆ. ಆ ಅನಿಶ್ಚಿತ ದಿನವು ದೂರವಿದೆ ಎಂದು ಊಹಿಸುವದು. ಮಾನವರ ದೌರ್ಬಲ್ಯ ಎಂಬುದರಲ್ಲಿ ಸಂಶಯವಿಲ್ಲ. ಆದರೆ ಅದು ಅಸಮಂಜಸವಾಗಿದೆ. ನಿಶ್ಚಯವಾಗಿ ಪೀಠಕಾತ್ಮಕ ಸಂಗತಿಗಳನ್ನು ಗಮನಿಸುವುದು ಮತ್ತು ತಮ್ಮ ನಮ್ರ ಸಹಕಾರವನ್ನು ನೀಡುವುದು ಬುದ್ಧಿವಂತ ಮತ್ತು ಶಾಂತಚಿತ್ತ ಮನಸ್ಕರ ಕರ್ತವ್ಯವಾಗಿದೆ. ಇದು ನಮಗೆ ಅನುಗ್ರಹಿಸಲ್ಪಡುವ ಮಹಾಸೌಕರ್ಯವಾಗಿದೆ.

ಅವರು ಅಧಿಕ ಸಂಖ್ಯೆಯಲ್ಲಿ ವಾಸಿಸುತ್ತಿದ್ದ ದೇಶದಲ್ಲಿಯೇ ಯೆಹೂದ್ಯರಿಗೆ ಅದೇ ದೇಶದಲ್ಲಿ ಬಂದೊದಗಿರುವ ಹಠಾತ್ ಮಹಾ ಕಿರುಕುಳವು –

ಮುನ್ಸೂಚಕ ಸಂಕೇತವೂ, ಮತ್ತು ಅವರು ನೆಲಸಬೇಕಾದ ನಗರವು ಯೂರೋಪಿನ ಸುಂದರ ಪ್ರದೇಶ ಅಲ್ಲ ಎಂದು ನೆನಪು ಮಾಡುವ ದೈವೇಚ್ಛೆ ಆಗಿರಬಹುದೋ? ಪಾಲೆಸ್ಟೈನ್ ರಷ್ಯಾದಿಂದಲೇ ಪರಿಣಾಮಕಾರಿಯಾಗಿ ವಸಾಹತು ಮಾಡಿಕೊಳ್ಳಬಹುದು. ಅಲ್ಲಿ ತಮ್ಮ ಜೀವ ಮತ್ತು ಆಸ್ತಿಗಾಗಿ ನಡುಗುತ್ತಿರುವ ಮೂರು ಮಿಲಿಯನ್ ಯೆಹೂದ್ಯರಿದ್ದಾರೆ; ಉಳಿದವರು ಅವರನ್ನು ಅನುಸರಿಸುತ್ತಾರೆ. ಇತಿಹಾಸವು ನಮ್ಮ ಹಿಂದಿನದನ್ನು ನೋಡುವ ಕನ್ನಡಿಯಂತಿದೆ. ಯೆಹೂದ್ಯರು ಏನೇ ಮಾಡಿರಲಿ, ಅವರು ಅದನ್ನು ಮಾಡಬಹುದು. ಅವರು ಪ್ರತಿಭಾಶಾಲಿಗಳು, ಪ್ರತಿಭಾಶಾಲಿಗಳು ತಮ್ಮ ಸ್ವಭಾವಕ್ಕೆ ಮಿತಿಗೊಳ್ಳುವುದಿಲ್ಲ, ಆದರೆ ಚಿತ್ತಕ್ಕೆ, ವಾಡಿಕೆಗೆ ಅಥವಾ ಆಕಸ್ಮಿಕವಾಗಿ ಮಿತಿಗೊಳ್ಳುತ್ತಾರೆ. ಈಗ ಅವರು ಯಾವುದರಲ್ಲಿ ತಾನೇ ಪ್ರಯತ್ನಿಸಿ ಸೋತುಹೋಗಿದ್ದಾರೆ? ಯೋಧರು, ಬರಹಗಾರರು, ವಾಸ್ತುಶಿಲ್ಪಿಗಳು, ವ್ಯಾಪಾರಸ್ಥರು, ಕಾನೂನು ನೀಡುವವರು, ರೈತರು ಮತ್ತು ಎಲ್ಲದರಲ್ಲೂ ಪ್ರವೀಣರು! ಈ ವಿಷಯದಲ್ಲಿ ಇತಿಹಾಸವು ತಾನಾಗಿಯೇ ಮರುಕಳಿಸುತ್ತದೆ.

"ಅವರುಗಳು ಶಾಂತಿ ಮತ್ತು ಸಮರ ಕಲೆಗಳಲ್ಲಿ ಶ್ರೇಷ್ಠರು, ಮತ್ತು ಅವರ ಶತ್ರುಗಳು ಅವರ ಮುಂದೆ ಒಡ್ಡುಕಟ್ಟಿದ ಏರಿಯ ಹಿಮದೋಪಾದಿಯಲ್ಲಿ ಕರಗಿಹೋಗುವರು. ಅವರಿಗೆ ಬೇರೆ ಯಾವುದೇ ದೇಶದಿಂದ ಪ್ರಾರಂಭದಲ್ಲಿ ಸಹಾಯವು ಬೇಕೆಂದು ಕಂಡುಬಂದಲ್ಲಿ, ಅದನ್ನು ನೀಡುವವರು ಧನ್ಯರು! ಅವರನ್ನು ಹಿಂಸಿಸುವ ದೇಶವು ಒಂದಲ್ಲಾ ಒಂದು ವಿಧದಲ್ಲಿ ಅದರ ಉದಾಹರಣೆಯಾಗುವರು. ಆದುದರಿಂದ, ಇತ್ತೀಚಿನ ಹಿಂಸಾಚಾರಗಳು ಯೆಹೂದಿ ನಾಯಕರನ್ನು ಪಾಲೆಸ್ಟೈನನ್ನು ರಷ್ಯದಿಂದ ವಸಾಹತು ಮಾಡಲು ನಿರ್ಧರಿಸುವ ಯಾವುದಾದರೂ ಅವಕಾಶವಿದ್ದರೆ ನಾವುಗಳು ಉಚಿತವಾಗಿ ಹಡಗುಗಳನ್ನು, ನಾವಿಕರನ್ನು, ಹಣ ಯಾವುದನ್ನೂ ನಮ್ಮನ್ನು ಕೇಳುವಾಗ ಮುಕ್ತವಾಗಿ ನೀಡೋಣ. ಅದೊಂದು ಐಗುಪ್ತದ, ಬ್ರೆಜೀಲಿಯನ್ನಿನ ಅಥವಾ ಪೆರುವಿಯನ್ನಿನ ಕರಾರು ಪತ್ರಗಳಿಗಿಂತ (ಬಾಂಡುಗಳು) ಉತ್ತಮವಾದ ರಾಷ್ಟ್ರೀಯ ಧನವಿನಿಯೋಗವಾಗುತ್ತದೆ."

ಇತ್ತೀಚಿನ ವರ್ಷಗಳ ಯೆಹೂದಿ ಗಾದೆಯೊಂದು ಹೀಗೆ ಹೇಳುತ್ತದೆ – "ರೈಲು ಮಾರ್ಗವು ಯೆರೂಸಲೇಮನ್ನು ಮುಟ್ಟುವಾಗ, ಮೆಸ್ಸೀಯನು ಬರುತ್ತಾನೆ". ಇದು ಪ್ರವಾದಿಯಾದ ನಹೂಮನು ರೈಲು ಮಾರ್ಗದ ಬಗ್ಗೆ ಹೇಳಿದ ಸಾಂಕೇತಿಕ ಪ್ರವಾದನೆಗೆ ಸಾಮರಸ್ಯವಾಗಿದೆ (ನಹೂಮ 2:3–5) ಮತ್ತು (ಯೆಶಾಯ 66:20) ಖಚಿತವಾಗಿಯೂ, ಪ್ರವಾದನೆಯು ತನ್ನ ಗುರಿ ಮುಟ್ಟಲು ತಪ್ಪಿಲ್ಲ. ಹೀಗಾಗಿ "ಆತನ ಪ್ರತ್ಯಕ್ಷತೆಯ ಸಮಯದಲ್ಲಿ – ಯೆಹೋವನ ಪ್ರಸನ್ನತೆಯ ಕಾಲದಲ್ಲಿ" ರೈಲು ಮಾರ್ಗವು ಯೆರೂಸಲೇಮನ್ನು ತಲುಪುತ್ತದೆ. ಕೆಳಗಿನದನ್ನ ನಾವು ದೈನಂದಿನ ಪತ್ರಿಕೆಯಿಂದ ಆಯ್ದ ಭಾಗವು ಈ ವಿಷಯದ ಬಗ್ಗೆ ಕುತೂಹಲಕಾರಿ ಸಂಬಂಧ ಹೊಂದಿದೆ :–

"ಗೆಲಿಲಿಯೋನು ಹೇಳಿದ್ದು ಸರಿ, ಪ್ರಪಂಚವು ಚಲಿಸುತ್ತಿದೆ. ಒಂದು ರೈಲುಮಾರ್ಗವನ್ನು ಯೆರೂಸಲೇಮಿನಿಂದ ಜಪ್ಪಾಕ್ಕೆ ಮೆಡಿಟರೇನಿಯನ್ನಿನ ಮೇಲೆ 32 ಮೈಲುಗಳ ದೂರದವರೆಗೆ ಯೆಹೂದ್ಯರ ಪುರಾತನ ರಾಜಧಾನಿಯ ಬಂದರಿನಲ್ಲಿ ಹಾಕಲಾಗುವುದು ಮತ್ತು ಆ ಜಾಗವು ಆಗ ದೇವದಾರು ಮರ ಇಳಿಸುವ ಪ್ರದೇಶವಾಗಿದ್ದು ಆ ಮರದಿಂದ ದೇವಾಲಯವನ್ನು ಕಟ್ಟಲಾಯಿತು. ಯೆರೂಸಲೇಮಿನ ಯೆಹೂದ್ಯನಾದ ಜೋಸೆಫ್ ನಬಾನ್ ಎಂಬಾತನು ಒಟ್ಟಾಮಿನ ಪ್ರಜೆಯಾಗಿದ್ದು ಸುಲ್ತಾನನಿಂದ ಈ ಉದ್ದೇಶಕ್ಕಾಗಿ ಅಧಿಕಾರವನ್ನು ಪಡಕೊಂಡನು. ಈ ಅಧಿಕಾರವು 71 ವರ್ಷಗಳವರೆಗೆ ಜಾರಿಯಲ್ಲಿರುತ್ತದೆ. ಇದರ ನಿರ್ಮಾಣ ವೆಚ್ಚ $250,000 ಆಗಿದೆ. ಹಾಗಾದರೆ, ಆಗ, ಇನ್ನುಮುಂದೆ ನಾಗರೀಕತೆಯನ್ನು ಪಾಲೆಸ್ಟೈನಿನಲ್ಲಿ ಒಗ್ಗಿಸಿಕೊಳ್ಳಬೇಕಾಗುತ್ತದೆ. ಮೊದಲನೆಯ ಉಗಿ ಬಂಡಿಯು ಯೆರೂಸಲೇಮಿನ ಭಾಗಗಳಲ್ಲಿ ಹೊಗೆ ಉಗುಳುತ್ತಾ ಬರುವಾಗ ಹತ್ತೊಂಬತ್ತನೆಯ ಶತಮಾನವು ಆ ಭಾಗದಲ್ಲಿ ಬರುತ್ತದೆ"

'Pittsburg' ಪತ್ರಿಕೆಯಲ್ಲಿ ಇತ್ತೀಚೆಗೆ ಪ್ರಕಟವಾದ ಅದರ ಬಾತ್ಮೀದಾರನ ಪತ್ರವು ಪಾಲೆಸ್ಟೈನ್ ಮತ್ತು ಯೆರೂಸಲೇಮಿನಲ್ಲಿ ಪ್ರಸ್ತುತ ಪ್ರಗತಿಯನ್ನು ದೃಢೀಕರಿಸುವುದಾಗಿದೆ:

ಯೆರೂಸಲೇಮ್, ಜುಲೈ 12, 1889

"ಯೆರೂಸಲೇಮಿನಲ್ಲಿರುವ ನಾಲ್ವತ್ತು ಸಾವಿರ ಜನರಲ್ಲಿ ಮೂವತ್ತು ಸಾವಿರ ಜನರು ಯೆಹೂದ್ಯರಾಗಿದ್ದಾರೆ. ತುರ್ಕಿ ಸರ್ಕಾರವು ಯುಗಾಂತರಗಳಿಂದ ಅವರುಗಳು ಪವಿತ್ರ ನಾಡಿನಲ್ಲಿ ಒಂದು ಸಮಯಕ್ಕೆ ಮೂರು ವಾರಗಳಿಗಿಂತ ಹೆಚ್ಚಾಗಿ ಜೀವಿಸುವುದನ್ನು ಪ್ರತಿಬಂಧಿಸಿತ್ತು. ಆದರೆ, ಈಗ ಪರಕೀಯ ಸರ್ಕಾರಗಳ ಪ್ರಭಾವದಿಂದ, ಅದರ ನಿರ್ಬಂಧಗಳನ್ನು ಸಡಿಲಗೊಳಿಸಲಾಗಿದೆ. ಈಗ ಯೆಹೂದ್ಯರು ಇಲ್ಲಿಗೆ ನೂರಾರು ಸಂಖ್ಯೆಯಲ್ಲಿ ಬರುತ್ತಿದ್ದಾರೆ. ಅವರುಗಳು ತಮ್ಮನ್ನು ವ್ಯಾಪಾರಗಳಲ್ಲಿ ತೊಡಗಿಸಿಕೊಂಡಿರುತ್ತಾರೆ ಮತ್ತು

ಅವರೀಗ ಯೆರೂಸಲೇಮಿನ ವಾಣಿಜ್ಯ ವ್ಯವಹಾರಗಳ ಹೆಚ್ಚಿನ ಭಾಗವನ್ನು ನಿಯಂತ್ರಿಸುವವರಾಗಿದ್ದಾರೆ. ಅವರಲ್ಲಿ ಕೆಲವರು ಅವರು ಪುನಃ ತಮ್ಮ ಸ್ವದೇಶದಲ್ಲಿ ನೆಲೆಸುತ್ತಾರೆಂಬ ಸತ್ಯವೇದದಲ್ಲಿನ ಪ್ರವಾದನೆಯ ದಿನವು ಸಮೀಪಿಸುವ ಕಾಲವು ಬಂದಿದೆ ಎಂದು ಭಾವಿಸುತ್ತಾರೆ; ಮತ್ತು ದಕ್ಷಿಣ ಅರಬಿಯಾದ ಒಂದು ಕುತೂಹಲಕಾರಿ ಕುಲವು ತಾವು ತಮ್ಮ ಮರುಭೂಮಿ ದೇಶವನ್ನು ಬಿಟ್ಟು ಪಾಲೆಸ್ಟೈನಿಗೆ ಹಿಂದಿರುಗಬೇಕೆಂಬ ಪ್ರಕಟನೆಯುಂಟಾಗಿದೆ ಎಂದು ಹೇಳಿಕೊಳ್ಳುತ್ತಿದ್ದಾರೆ. ಈ ಯೆಹೂದ್ಯರು ಯೆಮನ್ ಅರಬಿಯಾದಲ್ಲಿ ಕಳೆದ 2,500 ವರ್ಷಗಳಿಂದ ಜೀವಿಸುತ್ತಿದ್ದರು. ಅವರು ಗಾದನ ಕುಲದವರು ಮತ್ತು ಕ್ರಿಸ್ತನು ಹುಟ್ಟುವುದಕ್ಕೆ 700 ವರ್ಷಗಳ ಹಿಂದೆಯೇ ಅವರು ಪಾಲೆಸ್ಟೈನನ್ನು ಬಿಟ್ಟುಹೋಗಿದ್ದರು. ಅವರು ಅವರೊಡನೆ ತಮ್ಮ ಮೂಲದ ಬಗ್ಗೆ ಹಲವು ಅಮೂಲ್ಯ ದಾಖಲೆಗಳನ್ನು ಸಹಾ ತರುತ್ತಿದ್ದಾರೆ ಮತ್ತು ಈಗ ಯೆರೂಸಲೇಮಿನಲ್ಲಿ ಕೃಷಿ ಕಾರ್ಯಗಳಲ್ಲಿ ತೊಡಗಿದ್ದಾರೆ. ರಷ್ಯಾ ಮತ್ತು ಆಸ್ಟ್ರಿಯಾದಲ್ಲಿ ಯೆಹೂದ್ಯರ ವಿರುದ್ಧವಾದ ಕಿರುಕುಳವು ಅವರನ್ನು ಇಲ್ಲಿಗೆ ಓಡಿಸುವುದಾಯಿತು ಮತ್ತು ಯೆರೂಸಲೇಮಿನಲ್ಲಿ ಬಹಳಷ್ಟು ಮಂದಿ ಪೋಲಿಷ್ ಮತ್ತು ಸ್ಪಾನಿಷ್ ಯೆಹೂದ್ಯರುಗಳಿದ್ದಾರೆ. ಪಾಲೆಸ್ಟೈನಲ್ಲಿ ಯೆಹೂದ್ಯರು ಉಳುಕೊಳ್ಳುವ ಕಾಲದ ಮಿತಿಯನ್ನು ವಿಸ್ತರಿಸಲಾಗಿದೆ ಮತ್ತು ಯೆರೂಸಲೇಮಿನಲ್ಲಿ ಅವರ ವಸತಿಗಳ ಬಗ್ಗೆ ಇದ್ದ ಪ್ರತಿಬಂಧಗಳನ್ನು ಸಹ ಬಹುಮಟ್ಟಿಗೆ ಪ್ರಾಯೋಗಿಕವಾಗಿ ತೆಗೆದುಹಾಕಲಾಗಿದೆ. 32 ವರ್ಷಗಳ ಹಿಂದೆ ಯೆರೂಸಲೇಮಿನಲ್ಲಿ ಕೇವಲ 32 ಯೆಹೂದ್ಯ ಕುಟುಂಬಗಳಿದ್ದವು ಮತ್ತು ಪಾಲೆಸ್ಟೈನಿನಲ್ಲಿ ಒಟ್ಟಾರೆ ಕೇವಲ 3000 ಕುಟುಂಬಗಳಿದ್ದವು. ಈಗ ಪವಿತ್ರನಾಡಿನಲ್ಲಿ 50,000ದವರೆಗೆ ಇದ್ದಾರೆ. ಅದು ಯೆರೂಸಲೇಮಿನ ಜನಸಖ್ಯೆಯ ಮುಕ್ಕಾಲು ಭಾಗವಾಗಿದೆ.

'ಅವರು ಲೋಕದಲ್ಲಿ ಬೇರೆ ಯಾರೊಬ್ಬರೂ ಇಲ್ಲದಂತೆ ಬಹಳ ಕುತೂಹಲಕಾರಿ ಜನರು'! ಅವರುಈ ಹಿಂದೆ ಇಲ್ಲಿ ಇದ್ದವರಿಗೆ ಸಮೀಪಸ್ತರಾಗಿದ್ದಾರೆ. ಇಲ್ಲಿ ಕಿರುಕುಳದ ಮೂಲಕ ಹಿಂಸೆ/ಕಿರುಕುಳಕ್ಕೊಳಗಾದವರ ಸಂಖ್ಯೆಯನ್ನು ಪ್ರಪಂಚದಾದ್ಯಂತ ಇರುವ ವಿವಿಧ ಯೆಹೂದ್ಯ ಸಭೆಗಳು ಬೆಂಬಲಿಸುತ್ತವೆ.

ಯೆರೂಸಲೇಮಿನಲ್ಲಿ ವೀಕ್ಷಿಸುವ ಒಂದು ಮಹಾಸ್ಥಳವೆಂದರೆ ಅದು ಯೆಹೂದ್ಯರು ಪ್ರಲಾಪಿಸುವ ಸ್ಥಳ (wailing place). ಪ್ರತಿ ಶುಕ್ರವಾರ ಕೆಲವು ಪಂಥದವರು ಸೊಲೋಮೊನದ ದೇವಾಲಯವನ್ನು ಈಗ ಆಕ್ರಮಿಸಿರುವ ಓಮರನ ಮಸೀದಿಯ ಹೊರಗೋಡೆಗಳ ಬದಿಯನ್ನು ಸಂಧಿಸುತ್ತಾರೆ. ಮತ್ತು ಅವರ ಶಿರಗಳನ್ನು ಆ ಕಲ್ಲಿನ ಗೋಡೆಯ ಕಡೆಗೆ ಬೊಗ್ಗಿಸಿ ತಾವು ಯೆರೂಸಲೇಮನ್ನು ಕಳಕೊಂಡದಕ್ಕಾಗಿ ದುಃಖವನ್ನು ವ್ಯಕ್ತಪಡಿಸುತ್ತಾರೆ ಮತ್ತು ಅದನ್ನು ಪುನಃ ತಾನಾಂಯುದ್ದುಕೊಂಡ ಜನಾಂಗಕ್ಕೆ ಹಿಂತಿರುಗಿ ಕೊಡಬೇಕೆಂದು ದೇವರಲ್ಲಿ ಪ್ರಾರ್ಥಿಸುತ್ತಾರೆ. ಈ ಅಭ್ಯಾಸವನ್ನು ಮಧ್ಯಕಾಲೀನ ಸಮಯದಿಂದಲೂ ಆಚರಿಸಲಾಗುತ್ತಿದೆ ಮತ್ತು ಇದು ಅತ್ಯಂತ ದುಃಖಕರ ದೃಶ್ಯಗಳಲ್ಲಿ ಒಂದಾಗಿದೆ. ನಾನು ಅಲ್ಲಿಗೆ ಕಳೆದ ವಾರ ಹೋಗಿದ್ದೆ. ನಿರ್ಗತಿಕರ ಮನೆಗಳಿರುವ ಇಕ್ಕಟ್ಟಾದ ಓಣಿಯಲ್ಲಿ ಬರಿಗಾಲಿನ ಸಹಸ್ರಾರು ಮಂದಿ ಯೆಹೂದ್ಯರು ತಮ್ಮಿಂದ ಐವತ್ತು ಅಡಿಗಳಿಗಿಂತಲೂ ಎತ್ತರದಲ್ಲಿರುವ ದೊಡ್ಡ ದೊಡ್ಡ ಅಮೃತ ಶಿಲೆಗಳ ಅಡಿಗಲ್ಲುಗಳಿರುವ ಗೋಡೆಯ ಮುಂದೆ ಉದ್ದವಾದ ಸಾಲುಗಳಲ್ಲಿ ಉದ್ದ ನಿಲುವಂಗಿಗಳನ್ನು ಧರಿಸಿದ ಪುರುಷರು, ಮತ್ತು ತಮ್ಮ ತಲೆಯ ಮೇಲೆ ಶಾಲುಗಳನ್ನು ಧರಿಸಿದ ಸ್ತ್ರೀಯರು ತಮ್ಮ ತಲೆಗಳನ್ನು ಬಾಗಿಸಿ ಅಳುತ್ತಾ ಪ್ರಾರ್ಥಿಸುತ್ತಿದ್ದರು. ಹಲವಾರು ಗಂಡಸರಿಗೆ ಬಿಳಿ ಗಡ್ಡಗಳಿದ್ದವು, ಮತ್ತು ಬಿಳಿಯ ಗುಂಗುರು ಕೇಶಗುಚ್ಛಗಳಿದ್ದವು. ಇತರರು ಹದಿಹರೆಯದವರು. ಈ ಸ್ವರೂಪದವರು ಕೆಲವೊಮ್ಮೆ ಭಾವಪರವಶರಾಗಿ ನಡಗುವವರಾಗಿದ್ದನ್ನು ಕಂಡು ನನಗೆ ಆಶ್ಚರ್ಯವೆನಿಸದಿರಲಿಲ್ಲ ಪ್ರತಿಯೊಬ್ಬರ ಕೈಯಲ್ಲಿಯೂ ಉತ್ತಮವಾದ ಹಿಬ್ರೂ ಸತ್ಯವೇದಗಳಿದ್ದವು. ಸಮಯ ಸಮಯಕ್ಕೆ ಆ ಪಂಗಡದವರು ಒಂದು ವಿಧವಾಗಿ ಅದನ್ನು ಪಠಿಸುತ್ತಿದ್ದರು ಮತ್ತು ನೆರೆಗೂದಲಿನ ವಯಸ್ಸಾದವನು ನಾಯಕರಂತೆ ವರ್ತಿಸುತ್ತಿದ್ದನು ಮತ್ತು ಉಳಿದವರು ಒಳಬಂದು... ಈ ಕೆಳಗಿನಂತೆ ಪಲ್ಲವಿ ಹೇಳುತ್ತಿದ್ದರು :

ನಾಯಕ : ಪಾಳು ಬಿದ್ದ ಅರಮನೆಗಾಗಿ –

ಪ್ರತ್ಯುತ್ತರ : ನಾವು ಏಕಾಂತವಾಗಿ ಕುಳಿತು ಶೋಕಿಸುತ್ತೇವೆ

ನಾಯಕ : ನಾಶಗೊಂಡ ಗೋಡೆಗಳಿಗಾಗಿ –

ಪ್ರತ್ಯುತ್ತರ : ನಾವು ಏಕಾಂತವಾಗಿ ಕುಳಿತು ಶೋಕಿಸುತ್ತೇವೆ

ನಾಯಕ : ಬಿಟ್ಟು ಹೋಗಿರುವ ನಮ್ಮ ಘನತೆಗಾಗಿ

ಪ್ರತ್ಯುತ್ತರ : ನಾವು ಏಕಾಂತವಾಗಿ ಕುಳಿತು ಶೋಕಿಸುತ್ತೇವೆ

ನಾಯಕ: ಸತ್ತು ಮಲಗಿರುವ ನಮ್ಮ ಶ್ರೇಷ್ಠ ಜನರಿಗಾಗಿ –

ಪ್ರತ್ಯುತ್ತರ : ನಾವು ಏಕಾಂತವಾಗಿ ಕುಳಿತು ಶೋಕಿಸುತ್ತೇವೆ

ನಾಯಕ : ಮುಗ್ಗರಿಸಿ ಹೋಗಿರುವ ನಮ್ಮ ಯಾಜಕರುಗಳಿಗಾಗಿ –

ಪ್ರತ್ಯುತ್ತರ : ನಾವು ಏಕಾಂತವಾಗಿ ಕುಳಿತು ಶೋಕಿಸುತ್ತೇವೆ

ನಾಯಕ : ಆತನನ್ನು ಹೀನೈಸಿದ ನಮ್ಮ ಅರಸನಿಗಾಗಿ –
ಪ್ರತ್ಯುತ್ತರ : ನಾವು ಏಕಾಂತವಾಗಿ ಕುಳಿತು ಶೋಕಿಸುತ್ತೇವೆ

"ಈ ಪತಣದ ಪರಿಣಾಮವನ್ನು ಅದನ್ನು ಕೇಳಿಸಿಕೊಳ್ಳದೆ ಮೆಚ್ಚಲಾಗದು. ವೃದ್ಧರೂ ಮತ್ತು ಆ ಅಳುವ ಸ್ತ್ರೀಯರು ಒಮ್ಮೆ ಸೊಲೊಮೋನನ ದೇವಾಲಯದ ಜಾಗವಾಗಿದ್ದದರಿಂದ ಮತ್ತು ನಂಬಿಕೆಯು ಈಗಲೂ ಯೆಹೂದ್ಯರಿಗೆ ಅತ್ಯಂತ ಪರಿಶುದ್ಧ ಸ್ಥಳವಾಗಿರುವುದರಿಂದ ಪ್ರತ್ಯೇಕಿಸುತ್ತಿರುವ ಗೋಡೆಯ ಕಲ್ಲುಗಳನ್ನು ಮುತ್ತಿಡುವವರಾಗಿದ್ದಾರೆ. ನಿಷ್ಕಪಟತವಾದ ಮನೋಭಾವವು ಎಲ್ಲರಿಂದಲೂ ವ್ಯಕ್ತವಾಗುತ್ತದೆ. ಈ ರೀತಿಯಲ್ಲಿ ಅವರು ಅಲ್ಲಿಗೆ ವಾರ ವಾರ, ವರ್ಷ ವರ್ಷ ಬರುವುದಕ್ಕೆ ತೋರಿದ ನಂಬಿಕೆಯು ಅದ್ಭುತವಾದ ರೀತಿಯಲ್ಲಿ ಪ್ರಭಾವೋತ್ಪಾಧಕವಾಗಿದೆ. ಅದು ನಿಜವಾಗಿಯೂ ಅಪರೂಪದ ದೃಶ್ಯಗಳಲ್ಲಿ ಒಂದಾಗಿದೆ."

ಪಾಲೆಸ್ಟೈನಿನ ವಿವಿಧ ಭಾಗಗಳಲ್ಲಿ ಒಟ್ಟು ಎಂಟು ವ್ಯವಸಾಯ ಒಕ್ಕಲು ಸ್ಥಳಗಳಿವೆ. ಜಪ್ಪಾದ ಹತ್ತಿರದಲ್ಲಿರುವ ಇಂಥಾः ಒಂದು ಶಾಲೆಯಲ್ಲಿ ಅದರಲ್ಲಿ ಏಳುನೂರಕ್ಕೂ ಹೆಚ್ಚು ವಿದ್ಯಾರ್ಥಿಗಳು ಕಲಿಯುತ್ತಿದ್ದಾರೆ ಮತ್ತು ಅಲ್ಲಿ ಇಪ್ಪತ್ತೆಂಟು ಸಾವಿರ ಎಕರೆಯ ಕೃಷಿಭೂಮಿ ಇದೆ. ಅದು ಫಿಲಿಷ್ಟಿಯರು ಜೀವಿಸಿದ್ದ ಶಾರೋನಿನ ಸಮತಲ ಪ್ರದೇಶದಲ್ಲಿ ನೆಲೆಗೊಂಡಿದೆ ಮತ್ತು ಅದರಲ್ಲಿ ಹತ್ತಾರು, ಸಾವಿರಾರು ದ್ರಾಕ್ಷೆ ಬಳ್ಳಿಗಳೂ, ಓಲಿವ್ ಮರಗಳೂ ಅವೆ. ತುರ್ಕಿಗಳು ಆ ಭೂಮಿಯನ್ನು ಯೆಹೂದ್ಯರಿಗೆ ಮಾರುವಲ್ಲಿ ಇಷ್ಟವಿಲ್ಲದವರಾಗಿದ್ದರು. ಆದರೆ ವ್ಯಾಪಾರಿಗಳಾಗಿದ್ದ ಯೆಹೂದ್ಯರು ತಮ್ಮನ್ನು ಒಳ್ಳೆಯ ಬೇಸಾಯಗಾರರೆಂದೂ ತೋರಿಸಿಕೊಟ್ಟರು; ಎತ್ತರ ಪ್ರದೇಶದ ಸಾಗುವಳಿಯ ಸ್ಥಿತಿಯು ಎಷ್ಟೋ ಉತ್ತಮವಾಗಿದ್ದು, ಯೆರೂಸಲೇಮಿನಲ್ಲಿರುವ ಗುಡ್ಡಗಳ ಸ್ಥಿತಿಯು ಯೆಹೂದ್ಯರನ್ನು ವಶಪಡಿಸಿ ಕೊಂಡಿದ್ದವರ ಅಧೀನದಲ್ಲಿದ್ದಾಗಿಂತಲೂ ಮಿಗಿಲಾಗಿದೆ. ಯೆರೂಸಲೇಮಿನ ಹೊರಗಿನ ಬಹಳಷ್ಟು ಭೂಮಿಯು ಈಗ ಯೆಹೂದ್ಯರ ಅಥವಾ ಅವರ ದಾನಶೀಲ ಸಂಸ್ಥೆಗಳ ವಶದಲ್ಲಿದೆ. Rothschild ಶಾಲೆಗಳ ಮುಖ್ಯಸ್ಥನಾಗಿದ್ದ ಮಾನ್ಯ ಬೆಹಾರ್ ಎಂಬುವವರು ಅವರು ಒಂದು ಯೆರೂಸಲೇಮ್ ಹೊಟೇಲನ್ನು ಈಗ ಕೊಂಡು ಕೊಂಡಿದ್ದಾರೆಂದೂ, ಅದನ್ನು ಅವರ ಶಾಲೆಗೆ ಸೇರಿಸಿಕೊಳ್ಳುತ್ತಾರೆಂದೂ ನನಗೆ ಹೇಳಿದರು. ಒಬ್ಬ ಶ್ರೀಮಂತ New Orlreans ಇಸ್ರಾಯೇಲ್ಯನು ಬಿಟ್ಟುಹೋಗಿದ್ದ ಧನರಾಶಿಯ ವ್ಯವಸ್ಥಾಪಕರಾಗಿ ಜವಾಬ್ದಾರಿ ವಹಿಸಿಕೊಂಡ Sir Moses De Montefiore ಎಂಬುವವರು ಬೆತ್ಲೆಹೇಮ್ – ಯೆರೂಸಲೇಮಿನ ಹಾದಿಯಲ್ಲಿ ಯೆಹೂದ್ಯರಿಗಾಗಿ ಒಳ್ಳೆಯ ಮನೆಗಳನ್ನು ಕಟ್ಟಿಸಿದರು ಮತ್ತು ಅಲ್ಲಿ ಹಲವಾರು ಯೆಹೂದ್ಯ ಆಸ್ಪತ್ರೆಗಳೂ ಅವೆ.

ಯೆಹೂದ್ಯರು ಆದಷ್ಟು ಬೇಗ ಪಾಲೆಸ್ಟೈನನ್ನು ತಮ್ಮ ಸ್ವಂತದನ್ನಾಗಿ ಮಾಡಿಕೊಳ್ಳುವರು ಎಂಬ ದೃಢವಾದ ವಿಶ್ವಾಸವುಳ್ಳ ಜನರು ಹದಿನೈದು ಜನಗಳಿರುವ ಒಕ್ಕಲು ಸ್ಥಳದಲ್ಲಿ ಯೆರೂಸಲೇಮಿನ ಗೋಡೆಗಳ ಬಳಿಯಲ್ಲಿದ್ದ ಸುಂದರವಾದ ಮನೆಯಲ್ಲಿ ವಾಸಮಾಡುತ್ತಿದ್ದು ಅವರು 'ಅಮೆರಿಕನ್ನರು' ಯೆಹೂದ್ಯರಲ್ಲ ಎಂದು ಎಲ್ಲರೂ ತಿಳಿದಿದ್ದರು. ಅವರು ಅಮೆರಿಕಾ ಸಂಯುಕ್ತ ಸಂಸ್ಥಾನದ ವಿವಿಧ ಭಾಗಗಳಿಂದ ವಿಶೇಷವಾಗಿ ಚಿಕಾಗೋದಿಂದ ಬಂದಿದ್ದ ಕ್ರೈಸ್ತರಾಗಿದ್ದರು ಮತ್ತು ದೇವರ ಪ್ರವಾದನೆಗಳಲ್ಲಿ ಹೇಳಿರುವ ಭೂಲೋಕದ ಪುನರುಜ್ಜೀವ ಕಾರ್ಯವು ಯೆರೂಸಲೇಮಿನಿಂದಲೇ ಪ್ರಾರಂಭವಾಗುವುದೆಂಬ ಭರವಸೆಯಿಂದ ಕಾಯುವವ ರಾಗಿದ್ದರು. [ಸುವಾರ್ತಾ ಸಭೆಯ ಆಯ್ಕೆಯು ಮೊದಲಿಗೆ ನೆರವೇರಬೇಕಾಗಿದೆ ಎಂಬುದನ್ನು ಅವರು ನೋಡುವದಿಲ್ಲ].

ಯೆರೂಸಲೇಮ್ ಅಭಿವೃದ್ಧಿ ಹೊಂದುತ್ತಿದೆ ಎಂಬುದರಲ್ಲಿ ಯಾವುದೇ ತೆರನಾದ ಸಂಶಯವಿಲ್ಲ. ಅದರ ಹೆಚ್ಚಿನ ರಸ್ತೆಗಳು ಈಗ ಉತ್ತಮವಾಗಿ ಸರಿಪಡಿಸಲಾಗಿದೆ ಮತ್ತು ನಗರದ ಸ್ವಚ್ಛತಾ ಸ್ಥಿತಿಯು ಈಗ ಬಹಳಷ್ಟು ಉತ್ತಮಗೊಂಡಿದೆ. ಗೋಡೆಗಳ ಹೊರಗಿನ ಯೆರೂಸಲೇಮ್ ಈಗ ಒಳಗಿರುವ ನಗರದಷ್ಟೇ ದೊಡ್ಡದಾಗಿದೆ. ಭೂಮಿಯ ಬೆಲೆಯು ಎಷ್ಟೊಂದು ಹೆಚ್ಚಿದೆಯೆಂದರೆ ಪವಿತ್ರ ನಗರವು ಸ್ಥಿರ ಸ್ವತ್ತು ಮಾರಾಟದ ಬೆಲೆ ಏರಿಕೆಯನ್ನು ಎಬ್ಬಿಸಬಹುದು ಎಂಬುದಾಗಿ ನನಗೆ ತಿಳಿಸಿದ್ದಾರೆ. ದ್ವಾರಗಳ ಹೊರಗಡೆಯಲ್ಲಿರುವ ಜಪ್ಪಾ ರಸ್ತೆಯಲ್ಲಿನ ಆಸ್ತಿಯ ಬೆಲೆಯು ಒಂದು ವರ್ಷದಲ್ಲಿ ಅನೇಕ ಶತಕ ಶೇಕಡಾ ಏರಿದೆ ಎಂದು ನನಗೆ ತಿಳಿದುಬಂದಿದೆ. ಒಂದು ಪರೋಪಕಾರಿ ಸಂಸ್ಥೆಯನ್ನು ಕೆಲವು ಕಾಲದ ಹಿಂದೆ \$500ಕ್ಕೆ ಕೊಂಡುಕೊಳ್ಳಲಾಗಿತ್ತು. ಈಗ ಅದು \$8,000 ಬೆಲೆಬಾಳುವುದಾಗಿದೆ. ಈಗ ಆ ಬೆಲೆಗೂ ಕೊಂಡುಕೊಳ್ಳಲಾಗದು. ಒಂದು ದೂರವಾಣಿ

ತಂತಿಮಾರ್ಗವು ಅಲ್ಲಿಂದ ಈಗ ಸಮುದ್ರ ತೀರದವರೆಗೆ ಹಾದುಹೋಗುವುದಾಗಿದ್ದು, ಒಂದು ರೈಲ್ವೆ ಕಂಪನಿಯು ಜಪ್ಪಾದಿಂದ ಯೆರೂಸಲೇಮಿಗೆ ರೈಲು ಸಂಪರ್ಕ ಕಲ್ಪಿಸುವಂತೆ ಸ್ಥಾಪನೆಯಾಗಿದೆ. ಚರಿತ್ರೆಯಲ್ಲಿ ಮೊದಲ ಬಾರಿಗೆ ಈಗ ಯೆರೂಸಲೇಮಿನಲ್ಲಿ ಅರಕ್ಷಕ ಸೇನೆ (Police force) ಇದೆ. ಅದರ ಕ್ರಮಬದ್ಧತೆಯು New Yorkನವರಷ್ಟೇ ಉತ್ತಮವಾಗಿದೆ.

ಜುಲೈ'89ರ 'Hebrew Christain' ನಿಂದ ಆಯ್ದುಕೊಂಡ ಸುದ್ದಿಯು ಯೆರೂಸಲೇಮಿನ ಗೋಡೆಯ ಬಳಿ ಪ್ರಲಾಪಿಸಲು ಬಂದ ಒಬ್ಬ ಅಮೆರಿಕನ್ ಯೆಹೂದ್ಯನ ಭೇಟಿಯ ಬಗ್ಗೆ ಒಂದು ಕುತೂಹಲಕಾರಿ ವಿವರಣೆಯನ್ನು ನಮಗೆ ನೀಡುತ್ತದೆ :

"ಯೆಹೂದ್ಯರನ್ನು ಭೇಟಿಮಾಡಿದ ಅನೇಕ ಘಂಟೆಗಳನ್ನು ಕಳೆದ ನಂತರ, ರಷ್ಯಾದ Kovnoದಿಂದ ಬಂದಿದ್ದ ನನ್ನ ವಯಸ್ಸಾದ ಸ್ನೇಹಿತ ಮತ್ತು ರಬ್ಬಿಯು ನನ್ನನ್ನು ಯೆರೂಸಲೇಮಿನ ನಾಶನದ ಬಗ್ಗೆ ಪ್ರಾರ್ಥಿಸಲು ಆ ಪ್ರಲಾಪನೆಯ ಸ್ಥಳಕ್ಕೆ (waliling wall) ಅವನೊಂದಿಗೆ ಬರಬಹುದೋ? ಎಂದು ಕೇಳಿದ. "ನಾನು ನಿಮ್ಮೊಂದಿಗೆ ಬರುತ್ತೇನೆ ಮತ್ತು ಯೂದಾಯವು ಕರ್ತನ ಬಳಿಗೆ ಬರುವ ದಿನದ ಬಗ್ಗೆ ದೇವರು ತ್ವರೆಮಾಡಲಿ ಎಂದು ನಿಮ್ಮೊಂದಿಗೆ ಮನಃಪೂರ್ವಕವಾಗಿ ಪ್ರಾರ್ಥಿಸುತ್ತೇನೆ" ಎಂದು ನಾನು ಉತ್ತರಿಸಿದೆ. ಒಂದು ಶುಕ್ರವಾರ ಮಧ್ಯಾಹ್ನದ ಸಮಯದಲ್ಲಿ ಯೆಹೂದ್ಯರು ಆ ಪುರಾತನ ಆಲಯದ ಬಳಿಯಲ್ಲಿ ಪ್ರಾರ್ಥನೆಗಾಗಿ ಸೇರಿ ಬರುವ ವೇಳೆಯಲ್ಲಿ ನಾನೂ ಅವರೊಡನೆ ಕೂಡಿಕೊಂಡೆ. ಅದು ನಿಜವಾಗ್ಯೂ ಒಂದು ಸ್ಮರಣೀಯ ದೃಶ್ಯವಾಗಿತ್ತು. ಅಲ್ಲಿ ಎಲ್ಲಾ ದೇಶಗಳ ಯೆಹೂದ್ಯರಲ್ಲಿ ಅನೇಕರು ತಮ್ಮ ವಿಚಿತ್ರವಾದ ಪೌರ್ವಾತ್ಯ ಪೋಷಾಕುಗಳನ್ನು ಧರಿಸಿದ್ದರು, ಕೆಲವರು Talith (ಪ್ರಾರ್ಥನಾ ಉಡುಪು)ಗಳನ್ನು ಧರಿಸಿದ್ದರು. ಎಷ್ಟು ಗಟ್ಟಿಯಾಗಿ ಸಾಧ್ಯವೋ ಅಷ್ಟೇ ಗಟ್ಟಿಯಾಗಿ ಅವರು 22ನೇ ಕೀರ್ತನೆಯನ್ನು ಓದಿದರು. ಸ್ತ್ರೀಯರು ಅತ್ಯಂತ ನಿಷ್ಠಾವಂತಿಕೆಯಿಂದ "ನನ್ನ ದೇವರೇ, ನನ್ನ ದೇವರೇ, ಯಾಕೆ ನನ್ನನ್ನು ಕೈಬಿಟ್ಟಿದ್ದೀ?, ನೀನು ನನಗೆ ಸಹಾಯಮಾಡುವುದರಿಂದ ಮತ್ತು ನನ್ನ ಮೊರೆಯಿಡುವ ಮಾತುಗಳಿಂದ ಯಾಕೆ ಅಷ್ಟೊಂದು ದೂರವಾಗಿದ್ದೀ? ಓ ನನ್ನ ದೇವರೇ, ನಾನು ಹಗಲು ಹೊತ್ತಿನಲ್ಲಿ ನಿನಗೆ ಮೊರೆ ಇಡುತ್ತೇನೆ, ಆದರೆ ನೀನು ಕೇಳಿಸಿಕೊಳ್ಳುತ್ತಿಲ್ಲ. ರಾತ್ರಿಯಲ್ಲಿಯೂ ನಿನಗೆ ಮೊರೆ ಇಡುತ್ತೇನೆ, ನಾನು ಸುಮ್ಮನಿರುವುದಿಲ್ಲ" ಎಂದು ಕೂಗಿ ಹೇಳುತ್ತಿದ್ದರು. ಪುರುಷರು ಸಹಾ ಕಣ್ಣೀರಿಡುತ್ತಾ, ಕೀರ್ತನೆಯನ್ನು, ಜಪಾದಿಗಳನ್ನು ಮತ್ತು ಪ್ರಾರ್ಥನೆಗಳನ್ನು ಕಂಠಪಾಠವಾಗಿ ಹೇಳುತ್ತಿದ್ದರು. ಹೆಚ್ಚಿನವರು ತಮ್ಮ ತುಟಿಗಳನ್ನು ಕಲ್ಲಿನ ಮೇಲೆ ಒತ್ತಿ ಅವುಗಳಿಗೆ ಮುತ್ತಿಡುತ್ತಿದ್ದರು. ನಾನು ಅವರ ಕರುಣಾಜನಕ ಪ್ರಾರ್ಥನೆಗಳನ್ನು ಕೇಳಿಸಿಕೊಳ್ಳುವಾಗ ರಬ್ಬಿಗಳು ತಮ್ಮ Talmund ಧರ್ಮಶಾಸ್ತ್ರದಲ್ಲಿ ಹೇಳುವ – "ದೇವಾಲಯವು ನಾಶನವಾದಂದಿನಿಂದ ಪ್ರಾರ್ಥನೆಯ ಬಾಗಿಲು ಮುಚ್ಚಿಹೋಗಿದೆ, ಕಣ್ಣೀರಿನ ಬಾಗಿಲುಗಳು ಮಾತ್ರವೇ ತೆರೆದಿವೆ" ನನ್ನ ನೆನಪಿಗೆ ಬಂದವು. ರಬ್ಬಿಗಳು ದುಃಖದ ಸ್ವರದಲ್ಲಿ ಹೀಗೆ ಪುನರುಚ್ಚಿಸಿದರು:

"ಪಾಳು ಬಿದ್ದಿರುವ ಅರಮನೆ ಮುಂತಾದವು ಗಳಿಗಾಗಿ"

ಯೆರೂಸಲೇಮಿನ ಬಗ್ಗೆ ಅತ್ಯಂತ ಮನಮುಟ್ಟುವ ಗೋಳಾಟವು ಭಕ್ತಿವಂತ ಯೆಹೂದ್ಯರ ಮನೆಗಳಲ್ಲಿಯೂ ಕಂಡುಬರುತ್ತದೆ. ಮಧ್ಯರಾತ್ರಿಯಲ್ಲಿ ಅವರು ತಮ್ಮನ್ನು ಪ್ರಾರ್ಥನಾ ಉಡುಪಿನಿಂದ ಸುತ್ತಿಕೊಳ್ಳುತ್ತಾರೆ, ತಮ್ಮ ತಲೆಯ ಮೇಲೆ ಬೂದಿಯನ್ನು ಹಾಕಿಕೊಳ್ಳುತ್ತಾರೆ ಮತ್ತು ನೆಲದ ಮೇಲೆ ಸಾಷ್ಟಾಂಗ ನಮಸ್ಕಾರದ ಭಂಗಿಯಲ್ಲಿ ಅಡ್ಡಬೀಳುತ್ತಾರೆ. ನಂತರ ವ್ಯಾಕುಲತೆಯುಳ್ಳವರಾಗಿ ಅವರು ಕೆಳಕಂಡಂತೆ ಕಂಠಪಾಠವಾಗಿ ಅವರು ಹೇಳುತ್ತಾರೆ :–

"A voice of woe from Ramah's hoary tower,
A voice of wail from Zion's sainted hill ;
Alas! My diadem and queenly dower,
The youthful honours I remember still.
Dark is to me the solitary bower
Who did of old a stone of splendour fill.

I was surnamed Jehovah's fairest bride :
But now am forced, forlorn, disconsolate,
His heavy wrath and vengeance to abide;
My joys are flown, my heart is disolate.
Come weep, ye daughters, at my faltering side,
For none draws near my sorrows to abate.

Degraded from a peerless eminence,
Victim of pride and wanton vanity,
My beating heart in trembling violence
Strikes at her cage of hopeless misery.

Judah laments in tearful penetence,
A widow mourning in captivity.

I was in Solyma a radiant queen,
A golden cloud was I, the mount of God:
But now by infidels despoiled, I wean
No poorer piligrim o'er the desert trod.
Wrenched from the bosom all my babes have been
The elders murdered, steeped the soil in blood.

"Doth no one lay my wretchedness to heart?
And no one check the swiftly rolling tear?
And no one soothe the soul-empiercing smart?
And no one say, ' the heathen shall not dare
Call him my husband? Oh, the poisoned dart.
The cruel mockings I am bound to bear !

" Father of mercies, come return with grace
To zion's dwelling beautified again.
Let Israel's eye behold thy dwelling place
Restored; then list the hallelujahs strain,
The hymning voices of ransomed race,
Greetings the raising wall of that eternal fane,

ರಾಮದ ಬಳಿ ಶಿಖರದಿಂದ ಗೋಳಾಟದ ಘೋರ ರೋಧನವು
ಚಿಯೋನಿನ ಪವಿತ್ರ ಬೆಟ್ಟದಿಂದ ಆಕ್ರಂದನ ಧ್ವನಿ
ಅಯ್ಯೋ ! ನನ್ನ ಮಕುಟ ನನ್ನ ರಾಣಿ ವಿಧವಾಂಶ
ನನ್ನ ಹದಿಹರೆಯದ ಗೌರವವನ್ನು ಇನ್ನೂ ಜ್ಞಾಪಿಸಿಕೊಳ್ಳುತ್ತೇನೆ
ಏಕಾಂತದ ಅಂತಃಪುರವು ಕತ್ತಲಾಗಿದೆ
ಬಹಳ ಹಿಂದೆ ವೈಭವ ತುಂಬಲೆಂದು ಕಲ್ಲಿನಿಂದ ಕಟ್ಟಿದ್ದರು

ನಾನು ಯೆಹೋವನ ರಮ್ಯಳಾದ ವಧುವೆಂದು ಉಪನಾಮವಿದೆ
ಆದರೆ ಈಗ ಒತ್ತಾಯಕ್ಕೊಳಗಾಗಿ, ಹತಾಶಳಾಗಿ, ಖಿನ್ನತೆಗೊಳಗಾಗಿ,
ಆತನ ಕಠಿಣ ಕೋಪ ಮತ್ತು ಪ್ರತಿಕಾರವನ್ನು ತಾಳಬೇಕು

ನನ್ನ ಆನಂದವು ಹಾರಿ ಹೋಗಿದೆ, ನನ್ನ ಹೃದಯ ಶೂನ್ಯವಾಗಿದೆ
ಬನ್ನಿರಿ, ದುಃಖಿಸಿರಿ, ನನ್ನ ಪುತ್ರಿಯರೇ, ನನ್ನ ಕತ್ತರಿಸುವ ಬಗಲಿಗೆ
ನನ್ನ ದುಃಖವನ್ನು ತಗ್ಗಿಸಲು ನನ್ನ ಬಳಿಗೆ ಯಾರು ಬಾರರು

ಅಪ್ರತಿಮ ಉನ್ನತಿಯಿಂದ ಅವನತಿಗೊಳಗಾಗಿ
ಅಹಂಕಾರ ಮತ್ತು ಹುಡುಗಾಟದ ಆಡಂಬರಕ್ಕೆ ಬಲಿಪಶುವಾಗಿ
ನನ್ನ ಅದುರುವ ಹೃದಯ ಹಿಂಸೆಯಿಂದ ನಡುಗುತ್ತಾ
ಅದರ ಗೂಡಿನಲ್ಲಿ ನಿರಾಶೆ ದುಃಖದಿಂದ ಹೊಡಕೊಳ್ಳುತ್ತಿದೆ
ಯೆಹೂದವು ಕಣ್ಣೀರು ತುಂಬಿ ಪಶ್ಚಾತಾಪದಿಂದ ಗೋಳಾಡುತ್ತಿರುವುದು
ಒಬ್ಬ ವಿಧವೆಯು ಸೆರೆಯಲ್ಲಿ ಶೋಕಿಸುತ್ತಿರುವಳು

ನಾನು ಸೊಲ್ಯೆಮದಲ್ಲಿ (Solyma) ಪ್ರಜ್ವಲಿಸುವ ಅರಸಿಯಾಗಿದ್ದೆ
ಬಂಗಾರದ ಮೋಡ ನಾನು, ದೇವರ ಪರ್ವತ
ಆದರೆ ಈಗ ಧರ್ಮಭ್ರಷ್ಟರಿಂದ ಸುಲಿಗೆಯಾಗಿರುವೆ ಎಂದು ಭಾವಿಸು
ಯಾವ ನತದೃಷ್ಟ ಯಾತ್ರಿಕನೂ ಅರಣ್ಯದಲ್ಲಿ ಅಲೆಯನು
ನನ್ನ ಎಲ್ಲಾ ಮಕ್ಕಳ ಮನಸ್ಸು ನುಲಿತಕ್ಕೊಳಗಾಗಿದೆ
ಹಿರಿಯ ಮಕ್ಕಳು ಕೊಲೆಯಾಗಿದ್ದಾರೆ
ರಕ್ತದ ಮಡುವಿನಲ್ಲಿ ಮುಳುಗಿದ್ದಾರೆ

ಯಾರೂ ನನ್ನ ದುರದೃಷ್ಟವನ್ನು ತಮ್ಮ ಹೃದಯಕ್ಕೆ ಎತ್ತಿಕೊಳ್ಳಲಾರರೇ ?
ಯಾರೂ ತೀವ್ರವಾಗಿ ಹರಿವ ಕಣ್ಣೀರನ್ನು ಗಮನಿಸಲಾರರೇ ?
ಯಾರೂ ಹೃದಯ ಚುಚ್ಚುವ ನೋವನ್ನು ಸಂತೈಸಲಾರರೇ ?
ಯಾರಾದರೂ ಅನ್ಯಜನಾಂಗದವರು ನನ್ನ ಪತಿ ಎಂದು
ಹೇಳಲು ಧೈರ್ಯ ಮಾಡದಿರಲಿ,
ಓ ವಿಷಭರಿತ ಭರ್ಜಿಯನ್ನು, ಕ್ರೂರ ಅಪಹಾಸ್ಯವನ್ನು ನಾನು ಹೊರಲೇಬೇಕು.

ಕರುಣೆ ಕನಿಕರಗಳ ತಂದೆಯೇ, ಕೃಪೆಯೊಡನೆ ಹಿಂತಿರುಗು
ಚಿಯೋನಿನ ವಾಸಸ್ಥಳವು ಮತ್ತೆ ಸಿಂಗರಿಸಿದೆ

ಇಸ್ರಾಯೇಲಿನ ಕಣ್ಣು ನಿನ್ನ ವಾಸಸ್ಥಳವನ್ನು ಮತ್ತೆ
ವೀಕ್ಷಿಸಲಿ
ಪುನರ್‌ಸ್ಥಾಪನೆಯ ನಂತರ, ಹಲ್ಲೇಲೂಯದ
ಮೂಲಕ ಹೊರಳಲಿ
ವಿಮೋಚನಗೊಂಡ ಸಂತತಿಯ ಸ್ತುತಿಗೀತೆಗಳಿಂದ
ನಿರಂತರವಿರುವ ದೇವಾಲಯದ ಗೋಡೆಗಳು
ಮೇಲೇರಲು ಅಭಿನಂದಿಸಲಿ.

"ಇದಾದ ಮೇಲೆ, ಅನೇಕ ಕೀರ್ತನೆಗಳನ್ನು ಓದಲಾಗುವುದು, ಮತ್ತು ಪ್ರಾರ್ಥನೆಗಳನ್ನು ಅರ್ಪಿಸಲಾಗುವುದು. ನೆಲದಿಂದ ಮೇಲೇಳುವಾಗ, ಅವರು " ಯೆರೂಸಲೇಮೇ, ಧೂಳನ್ನು ಝಾಡಿಸಿಕೋ! ಎದ್ದು ಆಸನದ ಮೇಲೆ ಕೂಡ್ರು! ಸೆರೆಬಿದ್ದ ಚಿಯೋನ್ ಕನ್ಯೆಯೇ, ನಿನ್ನ ಕತ್ತಿನ ಪಾಶವನ್ನು ಬಿಚ್ಚಿಬಿಡು" (ಯೆಶಾಯ 52:2) ಎಂದು ಹೇಳುವರು.

ಗಮನಾರ್ಹವಾದ ಪ್ರಾರ್ಥನೆಯನ್ನು ಈ ಸಂದರ್ಭಗಳಲ್ಲಿ ಸಮರ್ಪಿಸಲಾಗುವುದು. ಇವುಗಳು ನಿಸ್ಸಂದೇಹವಾಗಿ ಯೆಶಾಯ 7:14ಕ್ಕೆ ಅನ್ವಯವಾಗುತ್ತವೆ :

" In Mercy, Lord, Thy people's prayer attend:
Grant his desire to mourning Israel
O shield of Abraham, our redeemer send,
And call his glorious name Immanuel"

ದಯೆಯಿಂದ ಕರ್ತನೇ, ನಿನ್ನ ಜನರ ಪ್ರಾರ್ಥನೆಯನ್ನು
ಲಾಲಿಸು:
ಗೋಳಾಡುವ ಇಸ್ರಾಯೇಲ್ಯರಿಗೆ ಅವರ ಆಶೆಯನ್ನು
ದಯಪಾಲಿಸು
ಅಬ್ರಹಾಮನ ಗುರಾಣಿಯೆ ನಮ್ಮ ವಿಮೋಚಕನನ್ನು
ಕಳುಹಿಸು
ಇಮ್ಮಾನುವೇಲ್ ಆತನ ಮಹಿಮೆಯುಳ್ಳ ನಾಮವನ್ನು
ಕೂಗಿರಿ.

ಹೆಚ್ಚಿನ ಕಿರುಕುಳಗಳು ಬಡ ಯೆಹೂದ್ಯರಲ್ಲಿ ಪಾಲೆಸ್ಟೈನಿಗೆ ಅಟ್ಟುವವರೆಗೂ, ಮತ್ತು ಆಧುನಿಕ ನಾಗರೀಕತೆ ಮತ್ತಷ್ಟು ಮುಂದುವರೆಯುವವರೆಗೆ, ಶ್ರೀಮಂತ ವರ್ಗದ ಯೆಹೂದ್ಯರು ಇಲ್ಲಿ ಬರಲಿ ಆಕರ್ಷಿಸಲ್ಪಡುವುದಿಲ್ಲ; ಆಗ ಅದು ಹೆಚ್ಚಾದ ಸ್ವಾರ್ಥ ಉದ್ದೇಶಗಳಿಂದ ತುಂಬಿರುತ್ತದೆ – ಸಾಮಾನ್ಯವಾದ ಮತ್ತು ಮಹಾ ಸಂಕಟದ ಸಮಯವು ಇತರೆ ದೇಶಗಳಲ್ಲಿ ಸಂಪತ್ತಿಗೆ ಇಂದಿಗಿಂತ ಕಡಿಮೆ ಸುರಕ್ಷತೆ ನೀಡುವಾಗ. ಅಗ ಪಾಲೆಸ್ಟೈನ್ ಸಮಾಜವಾದ, ನಿರಂಕುಶತ್ವಗಳಿಂದ ದೂರವಿದ್ದು ಶ್ರೀಮಂತ ಯೆಹೂದ್ಯರಿಗೆ ಸುರಕ್ಷತೆ ಸ್ವರ್ಗವಾಗಿ ಕಂಡುಬರುತ್ತದೆ. ಆದರೆ ಈ ವಿವಿಧ ದಿಕ್ಕುಗಳಲ್ಲಿನ ಈಗಿನ ಪ್ರಗತಿಯ ವೇಗದಲ್ಲಿ, ಬರುವ ಹದಿನೈದು ವರ್ಷಗಳಲ್ಲಿ ಪಾಲೆಸ್ಟೈನಿನಲ್ಲಿ ಬಹಳಷ್ಟು ಸಂಗತಿಗಳು ಕಂಡುಬರುವವು.

## ಯೆರೂಸಲೇಮಿನ ಮೊಂಡತನವು ಹೊರಟುಹೋಗುತ್ತಿದೆ

## Israel's Blindness Departing

ಶಾರೀರಿಕ ಇಸ್ರಾಯೇಲ್ಯರಿಗೆ ಸಂಬಂಧಿಸಿದಂತೆ ಮತ್ತೊಂದು ವೈಶಿಷ್ಟ್ಯಪೂರ್ಣವಾದ ಪ್ರವಾದನೆಯಿದೆ, ಅದರ ನೆರವೇರಿಕೆಯನ್ನು ನಾವು ಈಗ ನೋಡಲು ಪ್ರಾರಂಭಿಸಬೇಕು. ಅಪೋಸ್ತಲನಾದ ಪೌಲನು "ಇಸ್ರಾಯೇಲ್ಯರಲ್ಲಿ ಒಂದು ಪಾಲು ಜನರಿಗೆ ಉಂಟಾದ ಮೊಂಡತನವು ಯಾವಾಗಲೂ ಇರದೆ ಅನ್ಯಜನಗಳ ಸಮುದಾಯವು ದೇವರ ರಾಜ್ಯದಲ್ಲಿ ಸೇರುವ ತನಕ ಮಾತ್ರ ಇರುವುದು; ಆಮೇಲೆ ಇಸ್ರಾಯೇಲ್ ಜನವೆಲ್ಲಾ ರಕ್ಷಣೆಹೊಂದುವುದು" (ರೋಮಾ. 11:25–26) ಎಂದು ಪ್ರಕಟಿಸಿದ್ದಾನೆ. ಅಂದರೆ ಅನ್ಯಜನರಲ್ಲಿ ಆಯ್ಕೆಗೊಂಡ ಸದಸ್ಯರು, ಇಸ್ರಾಯೇಲ್ಯರ ಉಳಿಕೆಯವರೊಂದಿಗೆ ದೇವರ ರಾಜ್ಯದ ಆತ್ಮೀಕ ಹಂತವಾಗಿ ರಚನೆಯಾಗುವವರೆಗೆ, ಎಲ್ಲರೂ ಅತ್ಯಂತ ಹೆಚ್ಚಿನ ಕೃಪೆಗೆ ಬರುತ್ತಾರೆ. ಇದರಿಂದ ಇಸ್ರಾಯೇಲ್ಯರು ಒಂದು ಜನಾಂಗವಾಗಿ ಹೊರಹಾಕಲ್ಪಟ್ಟಿದ್ದರು ಮತ್ತು ಅದರ ಅನುಕೂಲತೆಗಳಿಗೆ ಅವರು ಮೊಂಡರಾಗಿದ್ದರು (ಕುರುಡರಾಗಿದ್ದರು). ಆದುದರಿಂದ, ಸಂಪೂರ್ಣವಾದ ಅರ್ಥದಲ್ಲಿ, ಶಾರೀರಿಕ ಇಸ್ರಾಯೇಲ್ಯರು ಅಥವಾ ಯಾಕೋಬ್ಯರೆಂದು ಕರೆಸಿಕೊಳ್ಳವವರ ಮೊಂಡತನವು ಆತ್ಮೀಕ ಇಸ್ರಾಯೇಲ್ಯರ ಆಯ್ಕೆ ಮುಗಿಯುವವರೆಗೆ ತೀರಿಹೋಗುವುದಿಲ್ಲ. ಅವರ ಪುನರುದ್ಧಾರ ಮತ್ತು ಮೊಂಡತನ ಮತ್ತು ಪಕ್ಷಪಾತದಿಂದ ಬಿಡುಗಡೆಯು ಚಿಯೋನ್ (ಪರ್ವತ), ಮಹಿಮಾ ಹೊಂದಿದ ಸಭೆಯಿಂದ ಅಥವಾ ದೇವರ ರಾಜ್ಯದಿಂದ ಬರುತ್ತದೆ ಎಂದು ನಮಗೆ ನಿರ್ದಿಷ್ಟವಾಗಿ ಉಪದೇಶಿಸಲಾಗಿದೆ (ರೋಮಾ. 11:26). ಆದರೆ ಚಿಯೋನಿನ ರಾಜ್ಯವು ಕೆಲಮಟ್ಟಿಗೆ 1878ರಿಂದ ಪ್ರಾರಂಭಗೊಂಡಿತು. ಆಗ ನಮ್ಮ ಅರಸನು, ಆಳ್ವಿಕೆ ಮಾಡುವ ಆತನ ಅಧಿಕಾರವನ್ನು ತಾನೇ ವಹಿಸಿಕೊಂಡನು ಆದರೆ ಪಾದವರ್ಗವು ಇನ್ನೂ ವೃದ್ಧಿಹೊಂದಿರಲಿಲ್ಲ ಮತ್ತು ಮಹಿಮೆಹೊಂದಿರಲಿಲ್ಲ. ಹೀಗಾಗಿ, ಯಾಕೋಬ್ಯರ ಮೇಲೆ ಚಿಯೋನಿನ ಮೂಲಕವಾದ ದೇವರ ಕೃಪೆಯು ಸರಿಯಾದ ರೀತಿಯಲ್ಲಿ ಅಲ್ಲಿ ಆರಂಭಗೊಂಡಿತು. ಆದರೂ, ಅದು ಕ್ರಿಸ್ತನ ದೇಹದ ಪಾದವರ್ಗದವರು ಮಹಿಮೆ

ಹೊಂದಿಕೊಳ್ಳುವವರೆಗೆ ಅವರಿಗೆ ತಲುಪುವದಿಲ್ಲ. 1881ರಲ್ಲಿ ಯಾಕೋಬ್ಯರಿಂದ ಬೆಳಕು ಅನ್ಯಜನರ ಕಡೆಗೆ ತಿರುಗಿಕೊಳ್ಳುವ ಪ್ರಾರಂಭದ ಕಾಲಕ್ಕೆ ಸಮಾನಾಂತರ ವಾಗಿತ್ತು. ಹೀಗಾಗಿ ಅದು ದೀರ್ಘಕಾಲ ಮೊಂಡರಾಗಿದ್ದ ಯೆಹೂದ್ಯರ ಕಡೆಗೆ ಪುನಃ ವಿಶೇಷವಾದ ಬೆಳಕು ಹಿಂತಿರುಗುವ ಸಮಯವನ್ನು ಗುರುತಿಸುತ್ತದೆ. ಅದರ ಯೆಹೂದಿ ವಿನ್ಯಾಸಕ್ಕೆ ಅನುಗುಣವಾಗಿ , ಹೆಸರು ಮಾತ್ರದ ಕ್ರೈಸ್ತ ಸಭೆಯು ಈಗ ಮೊಂಡರಾಗಿ ಮುಗ್ಗರಿಸು ತ್ತಿರುವಾಗ, ಅದರ ಒಂದು ಸಣ್ಣ ಶೇಷಭಾಗವು ಆಶೀರ್ವಾದ ಹೊಂದಿಕೊಳ್ಳುತ್ತದೆ. ಇಲ್ಲಿ "ಗರ್ವಪಡಬೇಡ, ಭಯದಿಂದಿರು, ದೇವರು ಹುಟ್ಟುಕೊಂಬೆಗಳನ್ನು ಉಳಿಸದೆ ಇದ್ದ ಮೇಲೆ ನಿನ್ನನ್ನೂ ಉಳಿಸುವುದಿಲ್ಲ" (ರೋಮಾ. 11:21) ಮುಂತಾದ ಅಪೋಸ್ತಲನ ಮಾತುಗಳು ಎಷ್ಟೋ ಪ್ರಭಾವಯುತವೂ ಮತ್ತು ಸೂಕ್ತವಾಗಿದೆ ಅಲ್ಲವೇ ?

ಆದರೆ, ಇಸ್ರಾಯೇಲ್ಯರು ನಿಜವಾದ ಮೆಸ್ಸೀಯನನ್ನು ಆತನ ರಾಜ್ಯವನ್ನು ಪೂರ್ಣವಾಗಿ ಅಂಗೀಕರಿಸುವುದು ನಿಸ್ಸಂದೇಹವಾಗಿ ಪುನಃಸ್ಥಾಪಿಸಲ್ಪಟ್ಟ ಪಿತೃಗಳ ಮತ್ತು ಪ್ರವಾದಿಗಳ ಅಧೀನದಲ್ಲಿ ಮತ್ತು ಅವರ ಮೂಲಕ ಉಂಟಾಗುತ್ತದೆ. ದೇಹವು ಮಹಿಮೆ ಹೊಂದಿಕೊಂಡ ನಂತರದಲ್ಲಿ ಅವರ ಸಮರ್ಪಕವಾದ ಪುನಃಸ್ಥಾಪನೆಯ ಕ್ರಿಸ್ತನ ಪ್ರಥಮ ಕಾರ್ಯವಾಗಿದೆ. ಆದರೆ, ಅವರ ಮೊಂಡತನವು ಮೊದಲೇ ಹೊರಟುಹೋಗಲು ಪ್ರಾರಂಭಿಸುತ್ತದೆ; ಮತ್ತು ಈಗಾಗಲೇ ವಿಶೇಷವಾಗಿ ರಷ್ಯಾದ ಯೆಹೂದ್ಯರಲ್ಲಿ ಕ್ರಿಸ್ತನೆಡಗೆ ಮಹಾ ಆಂದೋಲನವು ಪ್ರಾರಂಭಗೊಂಡಿದೆ.

ಈ ದಿಸೆಯಲ್ಲಿ ದೃಷ್ಟಿಸುತ್ತಾ, ಕಾಲದ ಸಂಕೇತಗಳು ಚಕಿತಗೊಳ್ಳುವಂತೆ ತಿಳಿಸಲಾಗಿದೆ. ಗಣನೀಯವಾದ ಧಾರ್ಮಿಕ ಚಳುವಳಿಯು ದಕ್ಷಿಣ ರಷ್ಯಾದ ಯೆಹೂದ್ಯರಲ್ಲಿ ಪ್ರಗತಿಯಲ್ಲಿದ್ದು ಅಲ್ಲಿನ ಸಹಸ್ರಾರು ಜನರನ್ನು ಯೇಸುಕ್ರಿಸ್ತನೇ ದೀರ್ಘಕಾಲದಿಂದ ವಾಗ್ದಾನ ಮಾಡಲ್ಪಟ್ಟ ಮೆಸ್ಸೀಯನೆಂದು ಮಾನ್ಯ ಮಾಡುವಂತೆ, ಮತ್ತು ಆತನನ್ನು ನಿರಾಕರಿಸಿ ಶಿಲುಬೆಗೆ ಜಡಿಸಿದ ತಮ್ಮ ರಾಷ್ಟ್ರೀಯ ಪಾಪವನ್ನು ಒಪ್ಪಿಕೊಳ್ಳುವಂತೆ ತರುತ್ತಿದೆ. ಇದು ಯಾವುದೇ ಅರ್ಥದಲ್ಲಿ ಕ್ರೈಸ್ತ ಧರ್ಮಪ್ರಚಾರಕ ಕಾರ್ಯಗಳ ಫಲವಲ್ಲ; ಇದೊಂದು ಸ್ವಾತಂತ್ರ್ಯ ಚಳುವಳಿ, ಸಂಪೂರ್ಣವಾಗಿ ಯೆಹೂದ್ಯರ ಮಣ್ಣಿನಿಂದ ಉತ್ಪನ್ನವಾದುದು. ಈ ಚಳುವಳಿಯ ನಾಯಕನು ಯೆಹೂದ್ಯನು, ಮಾನ್ಯ ಜೋಸೆಫ್ ರಾಬಿನ್ ವಿಚ್ ಎಂಬಾತನು. ಅವರು ಹಿಂದೆ ವ್ಯಾಪಾರಿಯಾಗಿದ್ದು ನಂತರದಲ್ಲಿ ವಕೀಲನಾದವರು ಮತ್ತು ಅವರ ಜನರಲ್ಲಿ ಉನ್ನತ ಗೌರವ ಹೊಂದಿದವರು. ಅವರು ಒಬ್ಬ ಯೆಹೂದಿ ರಬ್ಬಿಯಾಗಿರಲಿಲ್ಲ. ಅವರಾಗಲೀ, ಚಳುವಳಿಯ ಬೇರೆ ಯಾವ ನಾಯಕನಾಗಲೀ ಯಾವುದೇ ಗುಂಪಿಗೆ ಅಥವಾ ಮತಾಭಿಪ್ರಾಯದ ಪಾದ್ರಿವರ್ಗಕ್ಕೆ ಸೇರಿದವರಲ್ಲ. ಈ ಚಳುವಳಿಗೆ ಸೇರಿದಂತೆ ನಾವು Harper's Weekly ಯ ಲೇಖನ ಮತ್ತು ಇತರ ಅನೇಕ ವರದಿಗಳಿಂದ ಉಲ್ಲೇಖಿಸುತ್ತೇವೆ :

"ಅದರ ಅಭಿವೃದ್ಧಿಯು ಹೇಗಿತ್ತೆಂದರೆ, ಅದನ್ನು ಇನ್ನು ಮುಂದೆ ಶಾಶ್ವತವಾದ ಇರುವುದರ ಬಗ್ಗೆ ಯಾವುದೇ ಅನುಮಾನ ತುಂಬಿದ ಪ್ರಯೋಗವಾಗಿರ ಲಿಲ್ಲವೆಂದು ಭರವಸಪೂರ್ವಕವಾಗಿ ಹೇಳಬಹುದು. ಅದು ಗಣನೀಯವಾದ ಜೀವನಶಕ್ತಿಯುಳ್ಳದ್ದಾಗಿ ಪ್ರಕಟಗೊಂಡಿದೆ. ಅದರ ಬೆಳವಣಿಗೆಯು ಸ್ಥಿರವಾದದೂ ಮತ್ತು ಆರೋಗ್ಯಕರವೂ ಆಗಿದೆ. ಗುಣಲಕ್ಷಣದಲ್ಲಿ ಸಕಾರಾತ್ಮಕವಾಗಿದೆಯಾದರೂ, ಎಲ್ಲಾ ಅಸ್ವಭಾವಿಕ ಆತುರವನ್ನು, ಅಪಾಯಕಾರಿ ಅತಿರೇಕಗಳನ್ನು ದೂರವಿರಿಸುವುದಾಗಿದೆ. ರಷ್ಯಾದ ಅಧಿಕಾರಿಗಳು ಅದನ್ನು 'Religio Licita' "ಒಪ್ಪಿಗೆ ಪಡೆದ ಧರ್ಮ" ಎಂಬುದಾಗಿ ಮಾನ್ಯಮಾಡಿದ್ದು ಈಗ ಅದು ಕಾನೂನಾತ್ಮಕವಾಗಿ ಅಸ್ಥಿತ್ವದಲ್ಲಿದೆ ಮತ್ತು ಕಾನೂನಾತ್ಮಕವಾದ ಹಕ್ಕುಗಳನ್ನು ಹೊಂದಿದೆ. ಅದರ ಗುಣವು ಅನನ್ಯವಾದ ವಿದ್ಯಮಾನವುಳ್ಳ ವೈವಿಧ್ಯಮಯ ರಾಷ್ಟ್ರೀಯ, ಸಾಮಾಜಿಕ ಮತ್ತು ಧಾರ್ಮಿಕ ಹಿತಾಸಕ್ತಿಯುಳ್ಳ ಅನುಪಮವಾದ ಚಿತ್ರದರ್ಶಕವೆಂದು ಅದನ್ನು ಪ್ರಕಟಪಡಿಸುತ್ತದೆ. ಅದು ಝಾರನ (ರಷ್ಯಾದ ಚಕ್ರವರ್ತಿ) ಒಂದು ನೂರಾ ಹದಿನಾರು ಮಿಲಿಯನ್ ಪ್ರಜೆಗಳ ಹೃದಯ ಮತ್ತು ಮನಸ್ಸನ್ನು ವಿಭಜಿಸುವುದಾಗಿದೆ.

ಈ ನೂತನ ಅನ್ಯೋನ್ಯತೆಯ ನಂಬಿಕೆಯು ಇದರಲ್ಲಿ ಇನ್ನೂ ವಿಚಿತ್ರವಾಗಿದೆ. ಅವರು ಅಸ್ತಿತ್ವದಲ್ಲಿರುವ ಯಾವುದೇ ಕ್ರೈಸ್ತ ವರ್ಗದವರೊಂದಿಗೆ ಯಾವುದೇ ವ್ಯವಸ್ಥಿತವಾದ ಸಂಬಂಧವನ್ನು ಹೊಂದಿಕೊಳ್ಳ ಬಾರದೆಂದು ಪ್ರಸ್ತಾಪಿಸುತ್ತಾರೆ. ಆದರೆ, ಅಪೋಸ್ತಲರ ಕಾಲದಿಂದ ಬಂದ ಸಿದ್ಧಾಂತಗಳ ಚಾರಿತ್ರಿಕ ಬೆಳವಣಿಗೆಯನ್ನು ಒಪ್ಪಿಕೊಂಡಿರುವದನ್ನು ನಿರ್ಲಕ್ಷಿಸಲು ಗುರಿಮಾಡಿಕೊಂಡರು. ನಮ್ಮ ಕಾಲದ ಸಂಪ್ರದಾಯವಾದಿ ಕ್ರೈಸ್ತರ ಸಿದ್ಧಾಂತಗಳ ಯಾವುದೇ ಸೂತ್ರಗಳಗೆ ಗೌರವ ತೋರಲಿಲ್ಲ. ಅವರ ಬೋಧನೆಗಳನ್ನು ಹೊಸ ಒಡಂಬಡಿಕೆಯ ಮೂಲದಿಂದ ನೇರವಾಗಿ ಸೆಳೆಯುವಂತೆ ವಚನಬದ್ಧವಾಗಿರಬೇಕೆಂದು

ಗುರಿಹೊಂದಿದ್ದಾರೆ. ಅಪೋಸ್ತಲರ ಕಾಲದ ಯೆಹೂದ್ಯ, ಕ್ರೈಸ್ತ ಸಭೆಗೆ ಮಾದರಿಯಾಗಬೇಕು ಎಂದು ಸಾಧಿಸುತ್ತಾನೆ.

ಆತನ ಜನರ ಸ್ವಯಂ ಅಭಿವೃದ್ಧಿಯಲ್ಲಿ, ರಾಜಕೀಯವಾಗಿ, ಸಾಮಾಜಿಕವಾಗಿ ಮತ್ತು ನೈತಿಕವಾಗಿ ಮುಂದುವರೆಯುವ "ಗುಣಲಕ್ಷಣಗಳಲ್ಲಿ, ಮಹತ್ವಾಕಾಂಕ್ಷೆಗಳಲ್ಲಿ ತೇಜಸ್ಸನ್ನು ಹೊಂದಿದವರಾಗಿದ್ದು ಮಾನ್ಯ ರಾಬಿನೋವಿಚ್‍ರವರು ಕೆಲವು ವರ್ಷಗಳ ಹಿಂದೆ ಪೂರ್ವ ಯೆಹೂದಿಗಳ ಸುಧಾರಣೆಯ ಶ್ರದ್ಧಾವಂತ ಸ್ನೇಹಿತರಾಗಿ ಕಂಡುಬಂದರು. ತಮ್ಮ ಸಹೋದರರಿಗಿಂತ ಬಹಳಷ್ಟು ಮಿಗಿಲಾದ ವಿದ್ಯಾಭ್ಯಾಸ ಮತ್ತು ಸಾಹಸೋದ್ಯಮವುಳ್ಳವರಾಗಿದ್ದು, ಅವರು ತಮ್ಮ ಉದಾತ್ತ ಭಾವನೆಗಳನ್ನು ಅನುಸರಿಸುವ ಮಾರ್ಗಗಳನ್ನು ರೂಪಿಸಲು ಹೊರಟರು. ಅವರಿಗಾಗಿ ಉತ್ತಮವಾದ ರಾಜಕೀಯ ಹಕ್ಕನ್ನು ಒದಗಿಸಲು ಏನು ಮಾಡಬೇಕೋ ಅದನ್ನು ಅವರು ಮಾಡಿದರು. ಆದರೆ, ರಷ್ಯಾದಲ್ಲಿ, ರುಮೇನಿಯಾದಲ್ಲಿ ಮತ್ತು ಅದರ ನೆರೆಯ ದೇಶಗಳಲ್ಲಿ ಅದೃಷ್ಟಹೀನ ಇಸ್ರಾಯೇಲ್ಯರಿಗೆ ಸಿದ್ಧಪಡಿಸಿದ ಭೀಷಣವಾದ ಕಿರುಕುಳದಿಂದ ಅವರನ್ನು ರಕ್ಷಿಸಲಾರದೇ ಹೋದರು, ಅವರು ಪಾಶ್ಚಿಮಾತ್ಯದ ಮುಂದುವರೆದ ತತ್ವಜ್ಞಾನದ ಆಲೋಚನೆಗಳನ್ನು ಪರಿಚಯ ಮಾಡಿಕೊಂಡಿದ್ದು ಅದನ್ನು ಅವರ ಜನರು ಅಳವಡಿಸಿಕೊಳ್ಳುವುದಾದರೆ ಅವರು ಉನ್ನತ ಸ್ಥಿತಿಗೆ ಏರುವರು, ಮತ್ತು ಆ ರೀತಿಯಲ್ಲಿ ಅವರ ಶ್ರೇಷ್ಠವಾದ ಉದಾತ್ತ ಭಾವನೆಗಳನ್ನೂ, ಕೀರ್ತಿವಂತಿಕೆಗಳನ್ನೂ ಹೊಂದಿಕೊಳ್ಳಬಹುದೆಂಬ ಎಂಬ ಆಶಾಭಾವವನ್ನು ಹೊಂದಿದ್ದರು. ಆದರೆ ಅವರು ಬಲುಬೇಗ ಸಾಧನಗಳ ಕಾರ್ಯ ಸಮರ್ಥತತೆ ಮತ್ತು ಅದರ ಫಲದಾಯಕತ್ವದ ಬಗ್ಗೆ ಸಂಶಯಿಸತೊಡಗಿದರು. ಏಕೆಂದರೆ ಈ ಜನರು ಶತಮಾನಗಳಿಂದ ಹಿಂಸೆಗಳನ್ನು ಅನುಭವಿಸಿ ಮತ್ತು ಉಗ್ರವಾದ ಸಂಪ್ರದಾಯಗಳಿಂದ ಕಠಿಣವಾಗಿರುವ ಪ್ರಯುಕ್ತ ಅವರ ಸಾಂಪ್ರದಾಯಿಕ ತತ್ವಗಳಿಗೆ ವ್ಯತ್ಯಾಸವಾಗಿರುವದನ್ನು ಒಪ್ಪಿಕೊಳ್ಳಲಾರರು ಎಂದು ಕಲಿತುಕೊಂಡರು. ನಂತರದಲ್ಲಿ ಅವರನ್ನು ಲಾಭದ ಅತ್ಯಾಶೆಯಿಂದ ದೂರಮಾಡಿ ಗೆಲ್ಲಬಹುದೆಂಬ ಪ್ರಯತ್ನವನ್ನು ಮಾಡಿದರು. ಇದು ಪೌರ್ವಾತ್ಯ ಯೆಹೂದ್ಯನ ಮನದಲ್ಲಿ ಎಲ್ಲವನ್ನೂ ನಿಯಂತ್ರಿಸುವ ಮತ್ತು ಎಲ್ಲವನ್ನೂ ಕೆಳದರ್ಜೆಗೆ ಇಳಿಸುವ ನಿಯಮಾನುಸಾರ ಅಭ್ಯಾಸಗಳಾಗಿವೆ. ಆದರೆ, ಅವರ ಸ್ವಂತ ಸ್ಥಳದಲ್ಲಿಯೂ, ಮತ್ತು ಪವಿತ್ರ ಭೂಮಿಯಲ್ಲಿಯೂ ಅವರಿಗಾಗಿ ಕೃಷಿ ವಸಾಹತುಗಳನ್ನು ಸ್ಥಾಪಿಸುವ ಆತನ ಪ್ರಯತ್ನವು ವ್ಯರ್ಥವೆಂದು ಸಾಬೀತಾಯಿತು. ಪಾಲೆಸ್ಟೈನಿನಲ್ಲಿ ಇರುವಾಗ, ಹೊಸ ಒಡಂಬಡಿಕೆಯ ಸಂಬಂಧದಲ್ಲಿ ಹಳೆ ಒಡಂಬಡಿಕೆಯ ಸ್ವಾತಂತ್ರ್ಯ ಅಧ್ಯಯನ ಮಾಡುವುದರ ಮೂಲಕ ಇಸ್ರಾಯೇಲ್ಯರು ರಾಷ್ಟ್ರೀಯ ಜೀವನದಲ್ಲಿ ತಪ್ಪೆಸಗಿದ್ದಾರೆ, ಮತ್ತು ಯೇಸುಕ್ರಿಸ್ತನನ್ನು ನಿರಾಕರಿಸುವುದರ ಮೂಲಕ ಅವರ ಚಾರಿತ್ರಿಕ ನಿಯೋಗಕ್ಕೆ ವಿರೋಧವಾದ ಅಪರಾಧ ಮಾಡಿದ್ದಾರೆ ಎಂದು ತಿಳಿದು ಆತನ ನಿಶ್ಚಿತಾಭಿಪ್ರಾಯವು ಆತನ ಪಾಪಪ್ರಜ್ಞೆಯನ್ನು ಹಣ್ಣಾಗಿಸಿತು.

"ಕ್ರಿಸ್ತನ ಮೇಲಿನ ಈ ಪಾಪಪ್ರಜ್ಞೆಯು, ಪುರಾತನ ಪ್ರವಾದನೆಗಳ ಸಾಕಾರತೆ ಮತ್ತು ನೆರವೇರುವಿಕೆಯಾಗಿ, ಇಸ್ರೇಲ್ ದೇಶದ ಆದರ್ಶ ಮತ್ತು ಧ್ಯೇಯಗಳ ಸಾಕ್ಷರತೆಯಾಗಿ, ಕೇಂದ್ರೀಯ ಆಲೋಚನೆಯಾಗಿ ಅದರ ಸುತ್ತ ಸಮಗ್ರ ಚಳುವಳಿಕೆಯು ಸುತ್ತುಹಾಕುತ್ತದೆ. ನಮ್ರನಾದ ನಜರಾಯನು ನಿರೂಪಿಸಿದ ತತ್ವಗಳು ಮಾತ್ರವೇ ಜನರ ದೈವನಿರ್ಣಯವನ್ನು ನೆರವೇರಿಸುತ್ತವೆ ಮತ್ತು ಅವರು ಆಯ್ದುಕೊಂಡ ಜನಾಂಗವೆಂಬುದರ ಉದ್ದೇಶವನ್ನು ಸಾಧಿಸಲು ಶಕ್ತರನ್ನಾಗಿ ಮಾಡುತ್ತದೆ. ಈ ರೀತಿಯಾಗಿ ಅದನ್ನು ಇಸ್ರಾಯೇಲ್ಯರ ಸಾಮಾನ್ಯ ಮತ್ತು ಚಾರಿತ್ರಿಕ ಅಭಿವೃದ್ಧಿಯ ಗಂಭೀರವಾದ ತಡೆಯೆಂದು ಪರಿಗಣಿಸಲಾಗತ್ತದೆ. ಹದಿನೆಂಟು ನೂರು ವರ್ಷಗಳ ಹಿಂದೆ ಈ ಜನರು ಒಂದು ರಾಷ್ಟ್ರವಾಗಿ ಕ್ರೈಸ್ತರೆಲ್ಲರೂ ಗೌರವಿಸುತ್ತಿದ್ದ ಆ ತತ್ವಸಿದ್ಧಾಂತಗಳನ್ನು ಮತ್ತ ತತ್ವಗಳನ್ನು ನಿರಾಕರಿಸಿದ್ದು ಮಾತ್ರವಲ್ಲದೆ, ಈಗಲೂ ಸಹ ಮಾನ್ಯ ರಾಬಿನೋವಿಚ್ ಮತ್ತು ಆತನ ಅನುಯಾಯಿಗಳು, ನ್ಯಾಯಬದ್ಧವಾದ ಮತ್ತು ಇಸ್ರಾಯೇಲ್ಯರ ಹಿಂದಿನ ಚಾರಿತ್ರಿಕ ಅಭಿವೃದ್ಧಿಗೆ ಕೊಟ್ಟ ಸರಿಯಾದ ಒಂದೇ ಫಲವನ್ನು ಒಪ್ಪಿಕೊಳ್ಳಲು ನಿರಾಕರಿಸುತ್ತಿದ್ದಾರೆ. ಮೊದಲು ಆಯ್ಕೆಗೊಂಡ ಜನರು ರಾಷ್ಟ್ರೀಯ ಅಭಿವೃದ್ಧಿಯ ಹೆಸರಿನ ತಪ್ಪಾದ ಹೆಜ್ಜೆಯನ್ನು ಪ್ರವೇಶಿಸಿದ ಸ್ಥಳದಿಂದಲೇ ನೂತನವಾಗಿ ಪ್ರಾರಂಭಿಸುವುದರ ಮೂಲಕ ಈ ಉಲ್ಲಂಘನೆಯನ್ನು ಗುಣಪಡಿಸುವುದು ಸುಧಾರಕನಾದ Kischinev ಎಂಬಾತನ ಆದರ್ಶ ಧ್ಯೇಯವಾಗಿತ್ತು. 1880ರಲ್ಲಿ ಆತನು ಒಂದು ಕಾರ್ಯಕ್ರಮವನ್ನು ಪ್ರಕಟಿಸಿದನು. ಅದರಲ್ಲಿ ಆತನು ಯೆಹೂದ್ಯ ಧಾರ್ಮಿಕ ಗುರುಗಳ ಪದ್ಧತಿಯನ್ನು (Rabbinical system) ಸಂಪೂರ್ಣವಾಗಿ ಪುನಃರಚಿಸುವ ಬಗ್ಗೆ ಪ್ರತಿಪಾದಿಸಿದನು. ಆತನು ಮುಂದುವರೆದು ದಕ್ಷಿಣ ರಷ್ಯಾದ ಯೆಹೂದ್ಯರಿಗೆ ಕೃಷಿಯ ಅಭಿವೃದ್ಧಿಯುಂಟು ಮಾಡುವಲ್ಲಿ ಸಕ್ರಿಯನಾಗಿದ್ದನು. 1882ರ ಕಿರುಕುಳಗಳ ಸಮಯದಲ್ಲಿ ಆತನು ತನ್ನ ಜನರನ್ನು ಪಾಲೆಸ್ಟೈನಿಗೆ ಹಿಂತಿರುಗುವಂತೆ

ಪ್ರತಿಪಾದಿಸಿದನು. ಆ ಸಮಯದಲ್ಲಿ ಆತನ ಧಾರ್ಮಿಕ ಪಾಪಪ್ರಜ್ಞೆ ಬದಲಾವಣೆ ಉಂಟಾಯಿತು. ಅದು ಕ್ರೈಸ್ತರ ಧರ್ಮಪ್ರಚಾರಕ ಕಾರ್ಯಕ್ರಮದಿಂದಾದುದಲ್ಲ ಅಥವಾ ಆತನು ವಾಕ್ಯದ ಸಾಮಾನ್ಯ ಅರ್ಥದಲ್ಲಿ ಪರಿವರ್ತನೆ ಹೊಂದಲಿಲ್ಲ. ಬದಲಾವಣೆಯು ಕ್ರಮೇಣವಾಗಿ ಉಂಟಾಯಿತು. ದೀರ್ಘವಾದ ಚರ್ಚೆಯ ನಂತರ ಯೆಹೂದ್ಯ ರಾಷ್ಟ್ರೀಯ ಕ್ರೈಸ್ತರ ಸಭೆಗಳನ್ನು ಸ್ಥಾಪಿಸುವ ಆಲೋಚನೆಯು ಮನಸ್ಸಿನಲ್ಲಿ ಪಕ್ವಗೊಂಡಿತು. ಆತನು ಪಾಲೆಸ್ಟೈನಿನಿಂದ ಹಿಂದಿರುಗಿದ ನಂತರ ಆತನ ನಿಶ್ಚಿತಾಭಿಪ್ರಾಯವು “ಪವಿತ್ರ ಭೂಮಿಯ ಕೀಲಿಕೈ ನಮ್ಮ ಸಹೋದರನಾದ ಯೇಸುವಿನ ಕೈಯಲ್ಲಿದೆ” ಎಂಬುದಾಗಿತ್ತು. ‘ಸಹೋದರನಾದ ಯೇಸು’ ಎಂಬ ಪದಗಳಲ್ಲಿ ಆತನ ಧಾರ್ಮಿಕ ದೃಷ್ಟಿಕೋನದ ತಿರುಳು ಅಡಗಿದೆ. ಆತನ ಕಾರ್ಯವು ಸಫಲವಾಯಿತು, ಆತನ ಬೋಧನೆಗಳನ್ನು ಅನೇಕರು ಅಂಗೀಕರಿಸುವವರಾದರು.”

ರಾಬಿನ್‌ವಿಚ್‌ರವರು ತಾವು ಕ್ರಿಸ್ತನ ವಚನಬದ್ಧ ಮತ್ತು ಮುಕ್ತ ವಿಶ್ವಾಸಿಯಾಗಬೇಕೆಂದು ಆಲೋಚಿಸಲು ಪ್ರಾರಂಭಿಸಿದಾಗ ಅವರು ಕ್ರೈಸ್ತರಲ್ಲಿರುವ ಅನೇಕ ಪಂಗಡಗಳನ್ನು ನೋಡಿ ಕಳವಳಗೊಂಡರು ಮತ್ತು ಅವುಗಳಲ್ಲಿ ಯಾವುದಾದರೂ ಒಂದನ್ನು ಸೇರಲು ಹಿಂಜರಿದರು. ಆಗ ಅವರು “ಕಾನಾನನ್ನು ಸೇರಬೇಕಾದರೆ ಯೋರ್ದಾನನ್ನು ದಾಟಬೇಕಾಗುವಂತೆ ಯೇಸುವು ಆತ್ಮೀಕ ಹೊಂದುವಿಕೆಗೆ ಮತ್ತು ವಿಶ್ರಾಂತಿಗೆ ಮಾರ್ಗವಾಗಿದ್ದಾನೆ” ಎಂದು ಹೇಳಿದರು. ಕರ್ತನ ರಾತ್ರಿ ಭೋಜನದ ಬಗ್ಗೆ, “ತಮ್ಮ ಚಳವಳಿಯ ಸದಸ್ಯರು ಇದನ್ನು ಆಚರಿಸುವುದಿಲ್ಲ. ಪಸ್ಕದ ಭೋಜನದಂತೆ ಆಚರಿಸುವದನ್ನು ಹೊರತುಪಡಿಸಿ ಅವರು (ನಮ್ಮಂತೆ) ಇನ್ನೂ ಬೇರೆ ಸಮಯಗಳಲ್ಲಿ ಇದನ್ನು ಆಚರಿಸುವ ಮಾರ್ಗವನ್ನು ಇನ್ನೂ ಕಂಡಿಲ್ಲ" ಎಂದು ಹೇಳಿದರು. ಆತನು ಮತ್ತೂ ಹೇಳಿದ್ದೇನೆಂದರೆ, "ಯೇಸು ತನ್ನ ಶಿಷ್ಯರಿಗೆ ತನ್ನ ಪುನರುತ್ಥಾನವನ್ನು ನೆನಪು ಮಾಡಲು ಅಜ್ಞಾಪಿಸಲಿಲ್ಲ, ಅದರೆ ತನ್ನನ್ನೇ ನೆನಪು ಮಾಡಿಕೊಳ್ಳುವಂತೆ ಅಜ್ಞಾಪಿಸಿದನು" ಎಂದು ಹೇಳಿದನು. ಅವರಾಗಲೀ ಅವರ ಅನುಯಾಯಿ ಗಳಾಗಲೀ ಭಾನುವಾರವನ್ನು ಸಬ್ಬತ್ತಾಗಿ ಆಚರಿಸಲಿಲ್ಲ, ಆದರೆ ಯೆಹೂದಿ ಸಬ್ಬತ್ತನ್ನು ಆಚರಿಸುವುದನ್ನು ಮುಂದುವರಿಸಿದರು. ಸುನ್ನತಿಯು ಇನ್ನೂ ಜಾರಿ ಯಲ್ಲಿದೆ; ಆದರೆ ಅದು ರಕ್ಷಣೆಗೆ ಅಗತ್ಯವೆಂದು ಪರಿಗಣಿಸಲ್ಪಟ್ಟಿಲ್ಲ.

ಒಬ್ಬ ಲೂಥರನ್ ಪಾದ್ರಿಯು ಮಾನ್ಯ ರಾಬಿನ್ ವಿಚ್‌ರನ್ನು ಅವರ ಸಮಾಜದ ವತಿಯಿಂದ ಯೆಹೂದ್ಯರ ನಿಯೋಗಿಯನ್ನಾಗಿ ನೇಮಕ ಮಾಡಬೇಕೆಂದು ಲಂಡನ್ನಿನ ಸಮಿತಿಯೊಂದಕ್ಕೆ ಸೂಚಿಸಿದನೆಂದೂ, ಆದರೆ ಆ ಸಮಿತಿಯು ಆತನು ಆಗ ದೀಕ್ಷಾಸ್ನಾನ ಹೊಂದಿಕೊಂಡಿರಲಿಲ್ಲ ಎಂಬ ಕಾರಣಕ್ಕಾಗಿ ಅದನ್ನು ನಿರಾಕರಿಸಿತು ಎಂದೂ ವರದಿಯಾಗಿದೆ. ನಂತರದಲ್ಲಿ ಹೇಗೂ ಆತನು ಬರ್ಲಿನ್‌ನಲ್ಲಿ ದೀಕ್ಷಾಸ್ನಾನ ಹೊಂದಿಕೊಂಡನು. ಆದರೆ, ಅದು ಲೂಥರನ್ ಸಭೆಗಾಗಿಯಾಗಲೀ ಆಂಗ್ಲಿಕನ್ ಸಭೆಗಾಗಲೀ ಆಗಿರಲಿಲ್ಲ. ಆದರೆ, ಸಹಜವಾಗಿ ಕ್ರಿಸ್ತನ ಸಭೆಗಾಗಿ ಆಗಿತ್ತು. ರಾಬಿನ್ಸನ್‌ರವರು ರಷ್ಯಾ ಮತ್ತು ರೂಮೇನಿಯಾದ ಎಲ್ಲಾ ಭಾಗದಲ್ಲಿನ ಯೆಹೂದ್ಯರಿಂದ ಬಂದಿದ್ದ ಪತ್ರಗಳನ್ನು ಸ್ವೀಕರಿಸಿದ್ದರು. ಅದರಲ್ಲಿ ಅವರು ಚಳುವಳಿಯನ್ನು ಸೇರುವ ಅಥವ ಅಂತಹ ಮತ್ತೊಂದನ್ನು ಸ್ಥಾಪಿಸುವ ದೃಷ್ಟಿಯಿಂದ ಅದರ ನಿಯಮಗಳ ಬಗ್ಗೆ ತತ್ವ ಸಿದ್ಧಾಂತಗಳ ಬಗ್ಗೆ ವಿಚಾರಿಸಿ ಬರೆದಿದ್ದ ಪತ್ರಗಳಾಗಿದ್ದವು.

ಮಾನ್ಯ ರಾಬಿನ್ಸನ್‌ರವರು ಬಹಳ ಸಾಧುಸ್ವಭಾವದ, ನಮ್ರವಾದ ಪ್ರೀತಿಯುಳ್ಳ ಚೈತನ್ಯವನ್ನು ಹೊಂದಿದ್ದರು. ಕಣ್ಣೀರಿಗೂ, ಕ್ರೈಸ್ತ ಭರವಸೆಗಳಿಗೂ ಫಕ್ಕನೇ ಸ್ಪಂದಿಸುವವರಾಗಿದ್ದರು. ಅವರು ತಮ್ಮನ್ನು ಯಾವುದೇ ಪಂಗಡದೊಡನೆ ಗುರುತಿಸಿಕೊಳ್ಳಲು ಇಷ್ಟಪಡುತ್ತಿರಲಿಲ್ಲ. ಆದರೆ ತಮ್ಮ ಕ್ರೈಸ್ತತ್ವವನ್ನು ಹೊಸಒಡಂಬಡಿಕೆಯಿಂದಲೇ ನೇರವಾಗಿ ತೆಗೆದುಕೊಳ್ಳಲು ಮತ್ತು ಹಳೆಯ ಅಭ್ಯಾಸಗಳಿಂದ ಮತ್ತು ತತ್ವಗಳಿಂದ ಹೊಸವುಗಳ ಕಡೆಗೆ ಬೆಳೆಸಲು ಬಯಸುತ್ತಿದ್ದರು. ಆದುದರಿಂದ ತಮ್ಮ ಪ್ರಾರ್ಥನಾಪೂರ್ವಕವಾದ ನಿರಂತರ ದೇವರ ವಾಕ್ಯಾಧ್ಯಯನದಲ್ಲಿ ಪವಿತ್ರಾತ್ಮನು ತಾನೇ ತಮಗೆ ಬೋಧಿಸುವನೆಂದು ನಂಬಿದ್ದರು.

ಜರ್ಮನಿಯ ಯೆಹೂದ್ಯ ಮಿಷನ್ನುಗಳ (ಧರ್ಮಪ್ರಚಾರಕ ಮಂಡಳಿ) ನಾಯಕರೂ, ಮತ್ತು ಈ ಕಾರ್ಯಕ್ಕಾಗಿ ನಿವೇದಿತಗೊಂಡಿರುವ Saat auf Holfung ಎಂಬ ತ್ರೈಮಾಸಿಕದ ಸಂಪಾದಕರಾದ ಪ್ರೊ॥ Franz Delitzxch of Leipzig ಎಂಬುವವರು ಈ ನೂತನ ಧಾರ್ಮಿಕ ಬೆಳವಣಿಗೆಗಳ ಬಗ್ಗೆ ಸುಮಾರು ಎಪ್ಪತ್ತೈದು ಪುಟಗಳ ಕರಪತ್ರವೊಂದನ್ನು ಹೊರಡಿಸಿದರು. ಅದರಲ್ಲಿ ಅತ್ಯಂತ ಹೆಚ್ಚಿನ ಸ್ಥಳವನ್ನು ಹಿಬ್ರೂ ಮತ್ತು ಜರ್ಮನ್ ಭಾಷಾಂತರ (ಈ ಚಳುವಳಿಯ) ಮೂಲ ದಾಖಲೆಗಳು ಆಕ್ರಮಿಸಿ ಕೊಂಡಿದ್ದವು. ಈ ದಾಖಲೆಗಳಲ್ಲಿ ಹದಿಮೂರು ಪ್ರಬಂಧಗಳು ಅಡಕಗೊಂಡಿದ್ದವು; ನೂತನ ಒಡಂಬಡಿಕೆಯ ರಾಷ್ಟ್ರೀಯ ಯೆಹೂದ್ಯ ಸಭೆಯ ವಿಶ್ವಾಸದ ಅರಿಕೆ; ಈ ಸಭೆಯ ಅರ್ಥದಲ್ಲಿ

ಮೆಸ್ಸೀಯನಾದ ನಜರೇತಿನ ಯೇಸುವಿನ ಮೇಲಣ ನಂಬಿಕೆಯು ವಿವರಣೆ. ಅನುಬಂಧಗಳಲ್ಲಿ, ಮೆಸ್ಸೀಯನಾದ ಯೇಸುವನ್ನು ನಂಬುವವರಿಗೆ Haggada (ಹಗ್ಗದಾ) ಯೆಹೂದಿ ಪಸ್ಕದ ಬಗ್ಗೆ ಪಾಠ (ವಿಮೋಚನಾ ಕಾಂಡದ ಪಠನವೂ ಸೇರಿದಂತೆ); ಅಂತ್ಯದಲ್ಲಿ ಕರ್ತನ ರಾತ್ರಿ ಭೋಜನದ ಕ್ರಮ, ಕ್ರಿಸ್ತನಲ್ಲಿ ಯೆಹೂದ್ಯ ವಿಶ್ವಾಸಿಗಳಿಗೆ ಬೋಧಕನಾದ Friedmannನ್ನನ ಹೇಳಿಕೆ, Kischinevನ ಸಮ್ಮೇಳನದಲ್ಲಿ ಸ್ವೀಕಾರಗೊಂಡಂದಿನಿಂದ ಹೇಳಿಕೆಗಳು ಅನುಬಂಧ ಗಳಾಗಿವೆ. ಈ ಕರಪತ್ರವು ನೂತನ ಚಳುವಳಿಯ ಅಧ್ಯಯನಕ್ಕೆ ಬೇಕಾದ ಎಲ್ಲಾ ಅವಶ್ಯಕ ಸಂಗತಿಗಳನ್ನೂ ಒಳಗೊಂಡಿದೆ.

ನೂತನ ನಂಬಿಕೆಗೆ ತಳಹದಿಯಾಗಿದೆಯೆಂದು ಗಣನೆಗೆ ತೆಗೆದುಕೊಂಡಿರುವ ಈ ಪ್ರಬಂಧಗಳು ರಷ್ಯಾದಲ್ಲಿರುವ ಯೆಹೂದ್ಯರ ದುಃಖದಾಯಕ ಸ್ಥಿತಿಯ ಬಗ್ಗೆ ಪ್ರಾರಂಭಗೊಂಡು ಯೆಹೂದ್ಯರು ತಾವೇ ಸುಧಾರಿಸಿಕೊಳ್ಳುವ ಎಲ್ಲಾ ಪ್ರಯತ್ನಗಳು ವಿಫಲವಾಗಿವೆ ಎಂಬುದನ್ನು ಸಮರ್ಥಿಸುತ್ತವೆ. ಮತ್ತು ಮುಂದುವರೆದು ಈ ರೀತಿಯಾಗಿ ಹೇಳುತ್ತವೆ :–

ಆತ್ಮೀಕ ಪುನಃಶ್ಚೇತನದ ಆಳವಾದ ಮತ್ತು ಆಂತರ್ಯವಾದ ನೀತಿಯ ನವೀಕರಣದ ಅಗತ್ಯತೆ ಇದೆ. ನಾವು ನಮ್ಮ ಸುಳ್ಳು ದೇವರುಗಳನ್ನು, ಹಣದಾಸೆಯನ್ನು, ತೆಗೆದುಹಾಕಬೇಕು. ಮತ್ತು ಅದರ ಸ್ಥಳದಲ್ಲಿ ಸತ್ಯದ ಬಗ್ಗೆ ಪ್ರೀತಿ, 'ಕೆಡುಕಿನ ಬಗ್ಗೆ ಭಯ' ಇವುಗಳನ್ನು ಸ್ಥಾಪಿಸಿಕೊಳ್ಳಬೇಕು. ಹೇಗೂ ಇದಕ್ಕೊಬ್ಬ ನಾಯಕನ ಅವಶ್ಯಕತೆಯಿದೆ. ಆತನು ಯಾರಾಗಿರಬಹುದು? ಇಸ್ರಾಯೇಲ್ಯರಲ್ಲಿ ಯಾರೂ ಕಂಡು ಬರುವುದಿಲ್ಲ. "ನಾಯಕನ ಎಲ್ಲಾ ಅರ್ಹತೆಗಳುಳ್ಳವನು, ಇಸ್ರಾಯೇಲ್ಯರ ಬಗ್ಗೆ ಪ್ರೀತಿಯುಳ್ಳವನು, ಜೀವವನ್ನು ತ್ಯಾಗಮಾಡುವ ಜೀವಿತ, ಪರಿಶುದ್ಧತೆ, ಮಾನವ ಸ್ವಭಾವವದ ಬಗ್ಗೆ ಆಳವಾದ ಜ್ಞಾನ, ತನ್ನ ಜನರ ಪಾಪಗಳು, ಕೆಟ್ಟತನವನ್ನು ಬಹಿರಂಗಪಡಿಸುವಲ್ಲಿ ಪ್ರಾಮಾಣಿಕತೆ ಇವುಗಳುಳ್ಳವನು ನಜರೇತಿನ ಯೇಸುವೊಬ್ಬನೇ ಎಂಬುದನ್ನು ನಾವು ನಮ್ಮ ಜನರ ಇತಿಹಾಸದ ಪುಸ್ತಕಗಳ ಅನ್ವೇಷಣೆಯ ನಂತರ ಕಂಡುಕೊಂಡಿದ್ದೇವೆ. ಆತನ ಕಾಲದ ಬುದ್ಧಿವಂತ ಇಸ್ರಾಯೇಲ್ಯರಿಗೆ ಆತನನ್ನು ಅರ್ಥಮಾಡಿ ಕೊಳ್ಳಲಾಗಲಿಲ್ಲ. ಆದರೆ ನಾವು ನಿಶ್ಚಯಪೂರ್ವಕವಾಗಿ ಆತನು ಯೇಸುವೇ ಎಂದು ಹೇಳುತ್ತೇವೆ. ಆತನು ಮಾತ್ರವೇ ತನ್ನ ಸಹೋದರರ ಕ್ಷೇಮವನ್ನು ಬಯಸಿದನು. ಆದುದರಿಂದ ನಾವು ನಮ್ಮ ಸಹೋದರನಾದ ಯೇಸುವಿನ ನಾಮವನ್ನು ಪವಿತ್ರಗೊಳಿಸಬೇಕು. ನಾವು ನಮ್ಮ ಮನೆಗಳೊಳಗೆ ಸುವಾರ್ತಾ ಪುಸ್ತಕಗಳನ್ನು ಆಶೀರ್ವಾದಕರವೆಂದು ಸ್ವೀಕರಿಸಬೇಕು ಮತ್ತು ಅವುಗಳನ್ನು ನಮ್ಮ ಜ್ಞಾನಿಗಳು ನಮಗೆ ಕೊಟ್ಟಿರುವ ಪವಿತ್ರ ಪುಸ್ತಕಗಳೊಂದಿಗೆ ಸೇರಿಸಿಕೊಳ್ಳಬೇಕು".

ಅವರು ಸಿದ್ಧಪಡಿಸಿದ ನಂಬಿಕೆ ಕುರಿತಾದ ಗಮನಾರ್ಹ ಸಾಹಿತ್ಯ ಲೇಖನಗಳ ಒಂದು ಸರಮಾಲೆಯಲ್ಲಿ ಇಂತಿದೆ:

"ದೇವರ ಪರಿಶೋಧಿಸಲಾಗದ ಜ್ಞಾನದ ಒಂದು ಶಾಸನದ ಪ್ರಕಾರ, ನಮ್ಮ ಪಿತೃಗಳು ಕಠಿಣ ಹೃದಯದಿಂದ ತುಂಬಿದವರಾಗಿದ್ದರು, ದೇವರು ಅವರನ್ನು ಗಾಢವಾದ ನಿದ್ರೆಯ ಶಿಕ್ಷೆಯನ್ನು ನೀಡಿದ್ದರಿಂದ, ಅವರು ಯೇಸುವನ್ನು ವಿರೋಧಿಸಿದರು ಮತ್ತು ಆತನ ವಿರುದ್ಧವಾಗಿ ಇಂದಿನವರೆಗೂ ಪಾಪ ಮಾಡುತ್ತಲೇ ಇದ್ದಾರೆ. ಆದರೆ, ಅವರ ಅಪನಂಬಿಕೆಯಿಂದ ಅವರು ಇತರೆ ದೇಶಗಳನ್ನು ಹೆಚ್ಚಿನ ಉತ್ಸಾಹಕ್ಕೆ ನಡೆಸಿದರು. ಆ ಮೂಲಕ ಅವರು ಶಾಂತಿಯನ್ನು ವಾಗ್ದಾನ ಮಾಡುವ ಸುವಾರ್ತೆಯ ಮೂಲಕ ದಾವೀದನ ಮಗನೂ ನಮ್ಮ ರಕ್ಷಕನೂ ಆದ ಯೇಸುವಿನ ಬಗ್ಗೆ ಕೇಳಿದ ಮಾನವ ಜಾತಿಯ ಪಾಪ ಪರಿಹಾರಕ್ಕೆ ನೆರವಾದರು (ಯೆಶಾಯ 52:7). ಅವರುಗಳು ಇಸ್ರಾಯೇಲಿನ ಸಹವಾಸದಿಂದ ಅವಮಾನಕರವಾಗಿ ಆತನು ಹೊರಹಾಕಲ್ಪಟ್ಟಿದ್ದನು. ಆದಾಗ್ಯೂ, ದೇವರ ಕ್ರಿಸ್ತನ ವಿರುದ್ಧದ ನಮ್ಮ ಪಾಪದ ಪರಿಣಾಮವಾಗಿ, ಕ್ರಿಸ್ತ ನಂಬಿಕೆಯಿಂದ ಜಗತ್ತು ಶ್ರೀಮಂತವಾಗಿದೆ, ಮತ್ತು ಪೂರ್ಣವಾಗಿ ರಾಷ್ಟ್ರಗಳು ದೇವರ ರಾಜ್ಯವನ್ನು ಪ್ರವೇಶಿಸಿವೆ. (ಅವರು ಇಲ್ಲಿ ಸ್ಪಷ್ಟವಾಗಿಲ್ಲ. ರಾಷ್ಟ್ರಗಳಿಂದ ಚಿಕ್ಕಹಿಂಡಿನ ಪೂರ್ಣ ಸಂಖ್ಯೆಯವರೇ ಹೊರತು, ಕ್ರೈಸ್ತ ಪ್ರಪಂಚದವರು ಎಂದು ತಪ್ಪಾಗಿ ಕರೆದುಕೊಳ್ಳುವ ಪೂರ್ಣ ರಾಷ್ಟ್ರಗಳಲ್ಲ. ಪೌಲನು ಇದನ್ನು ಕುರಿತು ರೋಮಾ. 11:25ರಲ್ಲಿ ತಿಳಿಸಿದ್ದಾನೆ). ಈಗ ಸಹಾ ನಮ್ಮ ಪೂರ್ಣತೆಯ ಕಾಲವೂ ಬಂದಿದೆ ಮತ್ತು ಅಬ್ರಹಾಮನ ಸಂತತಿಯವರಾದ ನಾವು ಕರ್ತನಾದ ಯೇಸುವಿನ ಮೇಲಣ ನಂಬಿಕೆಯ ಮೂಲಕ ಆಶೀರ್ವಾದ ಹೊಂದಿಕೊಳ್ಳಬೇಕು. ನಮ್ಮ ಪಿತೃಗಳಾದ ಅಬ್ರಹಾಮ, ಇಸಾಕ, ಯಾಕೋಬರ ದೇವರು ನಮ್ಮ ಮೇಲೆ ದಯೆ ತೋರಿಸಿ ಕಡಿದುಹೋದ ಕೊಂಬೆಗಳನ್ನು ಪುನಃ ನಮ್ಮ ಪವಿತ್ರವಾದ ಹಳೆಯ ಬೇರಾದ ಯೇಸುವಿನಲ್ಲಿ ನೆಡುವನು ಎಂದು ಪೌಲನು ಸೂಚಿಸುತ್ತಾನೆ (ರೋಮಾ. 11:25). ಈ ರೀತಿಯಲ್ಲಿ ಎಲ್ಲಾ ಇಸ್ರಾಯೇಲ್ಯರೂ ನಿತ್ಯರಕ್ಷಣೆಯನ್ನು ಮತ್ತು ಯೆರೂಸಲೇಮನ್ನು ಹಂಚಿಕೊಳ್ಳುವರು. ನಮ್ಮ ಪವಿತ್ರ ನಗರವು ಪುನಃ ಕಟ್ಟಲ್ಪಡುವುದು ಮತ್ತು ಅಲ್ಲಿ ದಾವೀದನ

ಸಿಂಹಾಸನವು ನಿತ್ಯಕಾಲಕ್ಕೂ ಸ್ಥಾಪಿಸಲ್ಪಡುವುದು

ಸನ್ಮಾನ್ಯರಾದ ರಾಬಿನೋವಿಚ್ ರವರು ಲಂಡನ್ನಿನ ಒಬ್ಬ ಮಾನ್ಯರಿಗೆ ದಿನಾಂಕ 2ನೇ ಜನವರಿ 1885ರಂದು ಬರೆದ ಪತ್ರದ ಆಯ್ದು ತೆಗೆದ ಭಾಗವನ್ನು ಈ ಕೆಳಗೆ ನೀಡಲಾಗಿದೆ :–

"ನಿಮ್ಮ ಮೌಲ್ಯವುಳ್ಳ ಪತ್ರ ಮುಂತಾದವು ಸಿಕ್ಕಿವೆ ಅವುಗಳನ್ನು ಓದಿದಾಗ ನನ್ನ ಹೃದಯವು ಹರ್ಷಿಸಿತು ಮತ್ತು ಮೆಸ್ಸೀಯನಾದ ಯೇಸು ಕ್ರಿಸ್ತನಲ್ಲಿ ಶಾರೀರಿಕ ರೀತಿಯ ಕ್ರಿಸ್ತನ ಸಹೋದರರ ಬಗ್ಗೆ ನಿಮ್ಮ ಹೃದಯದ ಪ್ರೀತಿಯು ಎಷ್ಟೊ ಮಹತ್ವವುಳ್ಳದ್ದೂ, ಬಲವುಳ್ಳದ್ದೂ ಆಗಿದೆ ಮತ್ತು ನಿಮ್ಮ ಕಣ್ಣುಗಳಲ್ಲಿ ಇಸ್ರಾಯೇಲ್ ದೇಶದ ರಕ್ಷಣೆಯು ಎಷ್ಟು ಅಮೂಲ್ಯವಾಗಿದೆ ಎಂಬುದನ್ನು ಗ್ರಹಿಸಿಕೊಂಡೆ.

ನಮ್ಮ ಕರ್ತನಾದ ಯೇಸುವಿನ ದೇವರಾದ ಯೆಹೋವನ ಮುಂದೆ ಸಾಷ್ಟಾಂಗವೆರಗಿ ನನ್ನ ಹೃದಯದ ಅಂತರಾಳದಿಂದ ಇಸ್ರಾಯೇಲಿನ ಮಧುರ ಗಾಯಕನ ಹಾಡನ್ನು ಹಾಡಿ ಹರಸುವೆನು – "ನನ್ನ ಕೇಡಿನಲ್ಲಿ ಹಿಗ್ಗುವವರೆಲ್ಲರೂ ಆಶಾಭಂಗಪಟ್ಟು ಅವಮಾನ ಹೊಂದಲಿ. ನನ್ನನ್ನು ಹಿಯಾಳಿಸಿ ಆತ್ಮಸ್ತುತಿ ಮಾಡಿಕೊಳ್ಳುವವರು ಮಾನಭಂಗವನ್ನೂ ದುಷ್ಕೀರ್ತಿಯನ್ನೂ ಹೊದ್ದುಕೊಳ್ಳಲಿ. ನನ್ನ ನ್ಯಾಯಸ್ಥಾಪನೆಯನ್ನು ಬಯಸುವರು ಆನಂದದೊಡನೆ ಜಯಧ್ವನಿ ಮಾಡಲಿ. ತನ್ನ ಸೇವಕನ ಹಿತವನ್ನು ಕೋರುವ ಯೆಹೋವನಿಗೆ ಸ್ತೋತ್ರ" (ಕೀರ್ತನೆ 35) – ಆಮೆನ್ .

ಯೇಸುವನ್ನು ಮೆಸ್ಸೀಯನೆಂದು ನಂಬಿರುವ ದಕ್ಷಿಣ ರಷ್ಯದ ಇಸ್ರಾಯೇಲ್ಯ ಮಕ್ಕಳ ಬಗ್ಗೆ ನನ್ನ ಅಭಿಪ್ರಾಯ ಮತ್ತು ಹೇಳಿಕೆಗಳನ್ನು ನಾನು ನಿಮಗೆ ಕಳುಹಿಸುತ್ತಿದ್ದೇನೆ. ಅವುಗಳಿಂದ ನೀವು ಮೆಸ್ಸೀಯನಾದ (ಶಾರೀರಿಕವಾಗಿ ನಮ್ಮ ಸಹೋದರನಾದ) ಯೇಸುವಿನ ಮೇಲಣ ನಮ್ಮ ವಿಶ್ವಾಸದ ಮೂಲವನ್ನು ತಿಳುಕೊಳ್ಳಲು ನೀವು ಕಲಿತುಕೊಳ್ಳುವಿರಿ. ಆತನೇ ನಮ್ಮ ಹೃದಯದ ಅಂತರಾಳದಲ್ಲಿರುವ ಆಕಾಂಕ್ಷೆಯೂ ಹೆಬ್ಬಯಕೆಯೂ ಆಗಿದ್ದಾನೆ. ನಮ್ಮ ಕರ್ತನು ಎಲ್ಲಾ ರಾಷ್ಟ್ರಗಳವರ ಕಣ್ಣಿನಲ್ಲಿ ತನ್ನ ಪವಿತ್ರ ತೋಳನ್ನು ತೆರೆದಿಟ್ಟಿದ್ದಾನೆ, ಲೋಕದ ಎಲ್ಲಾ ಮೂಲೆಯವರೂ ನಮ್ಮ ದೇವರ ರಕ್ಷಣೆಯನ್ನು ನೋಡಿದ್ದಾರೆ, ಇಸ್ರಾಯೇಲ್ಯರ ಮಧ್ಯದಿಂದ ಎಲ್ಲಾ ಅಶುದ್ಧರನ್ನು ಹೊರಡಿಸಿಬಿಡುವ ಮತ್ತು ಕರ್ತನ ಪಾತ್ರೆಯನ್ನು ಹೊರುವವರ ಶುದ್ಧೀಕರಣದ ಸಮಯವು ಬಂದಿದೆ ಎಂಬುದರ ಬಗ್ಗೆ ನಮ್ಮ ಕರ್ತನಾದ ಯೇಸುವಿನಲ್ಲಿ ನಮ್ಮ ಸಹೋದರರಾದ ಆಂಗ್ಲ ಸ್ನೇಹಿತರನ್ನು ಈ ಕರಪತ್ರದ ಮೂಲಕ ಮನದಟ್ಟುಪಡಿಸಬಹುದು.

'ನಿಜವಾಗಿಯೂ ಕರ್ತನ ರಕ್ಷಣೆಯು ಆತುರವಾಗಿ ಹೊರಗೆ ಹೋಗುವುದಿಲ್ಲ ಮತ್ತು ಒಳಕ್ಕೆ ಬರುವುದೂ ಇಲ್ಲ (ಯೆಹೋಶುವ 6:1), ಅದು ವೇಗವಾಗಿ ನಡೆಯುವುದೂ ಇಲ್ಲ. ಆದರೆ ಆದ್ಯಂತನೂ, ವಿಶ್ವದ ಅರಸನೂ ಆದ ಯೆಹೋವನು ಇಸ್ರಾಯೇಲ್ಯ ಜನರ ಮುಂದೆ ಹಾದುಹೋಗುವಾಗ, ಇಸ್ರಾಯೇಲ್ಯರ ದೇವರು ಸಹ ತಾನೇ ಹಿಂರಕ್ಷಣಾ ಪಹರೆಯಾಗಿ, ಹೊರಹಾಕಲ್ಪಟ್ಟ ಇಸ್ರಾಯೇಲ್ಯರನ್ನು ಕೂಡಿಸುವವನಾಗಿಯೂ ಬರುತ್ತಾನೆ. ಮೊಂಡತನವೂ ಅಸಂತುಷ್ಟವೂ ಆದ ನನ್ನ ರಾಷ್ಟ್ರದ ಕಲ್ಯಾಣಕ್ಕಾಗಿ ತಾಮ್ರದ ಹಣೆಯೊಡನೆ ಅವರಿಗೆ ಸಾಕ್ಷಿ ಹೇಳುವುದಕ್ಕಾಗಿ ದೇವರಶಕ್ತಿ ಮತ್ತು "ದೇವರು ದಾವೀದನ ಸಂತಾನದವನಾದ ನಜ಼ರೇತಿನ ಯೇಸುವನ್ನು ಇಸ್ರಾಯೇಲ್ಯರ ರಕ್ಷಕನಾಗಿ ಎಬ್ಬಿಸಿದ್ದಾನೆ ಎಂಬಿತ್ಯಾದಿ ಸುವಾರ್ತೆಯೊಡನೆ ನಾನು ನನ್ನ ಸಮಯ ಮತ್ತು ಹೆಸರನ್ನು ಅರ್ಪಿಸುತ್ತೇನೆ".

"ದೇವರ ಶ್ರೀಮಂತಿಕೆ ಮತ್ತು ವಿವೇಕದ ಆಳವು ಅತ್ಯಂತ ಶ್ರೇಷ್ಟಮಟ್ಟದ್ದಾಗಿದ್ದು ಅದರ ಮೂಲಕವಾಗಿ ವಾಗ್ದಾನದ ಮೇಲೆ ಅವಲಂಬಿಸಿರುವ ನಮ್ಮ ಪಿತೃಗಳು ಯೇಸುವಿನ ವಿರುದ್ಧವಾಗಿ ದಂಗೆ ಎದ್ದರು. ಹಾಗಾಗಿ, ಕೃಪೆಯು ಅನ್ಯಜನಾಂಗಕ್ಕೆ ದಯಪಾಲಿಸಲಾಯಿತು. ವಾಗ್ದಾನದ ಮೂಲಕವಾಗಿ ಅಲ್ಲ. ಮೆಸ್ಸೀಯನ ಸುವಾರ್ತೆಯ ಮೂಲಕವಾಗಿ ಕೃಪೆಯುಂಟಾಯಿತು. ಈಗ ಪೂರ್ಣ ಪ್ರಮಾಣದಲ್ಲಿ ಅನ್ಯಜನರು ಬಂದಿರುವಾಗ, ಇಸ್ರಾಯೇಲಿನ ಮಕ್ಕಳಾದ ನಮಗೆ, ಇಸ್ರಾಯೇಲಿನ ದೇವರೂ ಅದರ ಅರಸನೂ ಆದಾತನ ಬಳಿಗೆ ಹಿಂತಿರುಗಿ ಬಂದು ಆತನ ಪ್ರಿಯ ಮಕ್ಕಳಾಗುವ ಸಮಯವು ಬಂದಿದೆ. ನಾವು ಮಿತಿಯಿಲ್ಲದ ನಮ್ಮ ಯಾಕೋಬನ ಪಿತ್ರಾರ್ಜಿತವನ್ನು ಒಪ್ಪಿಕೊಳ್ಳಬೇಕು. ಯಾಕೆಂದರೆ ಅಬ್ರಹಾಮನ ಮಕ್ಕಳೂ ಮೋಶೆಯ ಶಿಷ್ಯರೂ, ನಿತ್ಯಕಾಲಕ್ಕೂ ಇರುವ ದಾವೀದನ ಮನೆತನದ ಸೇವಕರೂ ಆದ ನಾವೇ ಅದರ ನ್ಯಾಯಯುತ ಬಾಧ್ಯಸ್ಥರು. ಹೀಗಾಗಿ ನಮ್ಮ ಪೂರ್ಣತೆಯು (ಅಂದರೆ ಅನೇಕ ಇಸ್ರಾಯೇಲ್ಯರು ಕ್ರಿಸ್ತನ ಬಳಿಗೆ ಬರುವುದು) ನಮ್ಮ ಶ್ರೀಮಂತಿಕೆಯಾಗುತ್ತದೆ ಮತ್ತು ರಾಷ್ಟ್ರದ ಶ್ರೀಮಂತಿಕೆಯಾಗುತ್ತದೆ ಸಂತ ಪೌಲನು ಹೇಳಿರುವಂತೆ ಯೆಹೋವನ ವಾಕ್ಯದ ಪ್ರಕಾರ ಆತನು ಪ್ರಥಮದಲ್ಲಿ ಜನಿಸಿದವನು ಮತ್ತು ಹಿಂತಿರುಗಿದ ಅನ್ಯಜನರಲ್ಲಿ ಪ್ರಧಾನನು.

ನನ್ನ ಸಹೋದರರುಗಳಲ್ಲಿ, ಮತ್ತು ದೊಡ್ಡ ಕೂಟಗಳಲ್ಲಿ ನಾನು ನಿಷ್ಠಾಪೂರ್ವಕವಾಗಿ "ನಿಮ್ಮನ್ನು ಧೂಳಿನಿಂದ ಝಾಡಿಸಿಕೊಳ್ಳಿರಿ, ನನ್ನ ಜನರೇ, ನಿಮ್ಮ ಅಂದವಾದ ಉಡುಪುಗಳನ್ನು ಧರಿಸಿಕೊಳ್ಳಿರಿ; ಇಷಯನ ಮಗನ ಮೂಲಕ, ನಜ಼ರೇತಿನ ಯೇಸುವಿನ ಮೂಲಕ ದೇವರು ನಿಮಗೆ ಅದ್ಭುತ ಕಾರ್ಯಗಳನ್ನು ಮಾಡಿದ್ದಾನೆ, ಓ ಇಸ್ರಾಯೇಲೇ, ಆತನು ನಮ್ಮ ಪಿತೃಗಳಲ್ಲಿ ಆಶೀರ್ವದಿಸಲ್ಪಟ್ಟ ಈ ಲೋಕದ ರಾಷ್ಟ್ರಗಳ ಮಧ್ಯದಲ್ಲಿಯೂ ಮಹತ್ಕಾರ್ಯಗಳನ್ನು ಮಾಡಲಿ".

"ಸಹಸ್ರಾರು ಜನರು ನನ್ನ ಮಾತುಗಳನ್ನು ಕೇಳಿಸಿಕೊಳ್ಳುತ್ತಿರುವುದಕ್ಕಾಗಿ ನಾನು ದೇವರನ್ನು ಬಹಳವಾಗಿ ಸ್ತುತಿಸುತ್ತೇನೆ. ಅನೇಕರು ಮತ್ತು ಇಸ್ರಾಯೇಲಿನ ಅರ್ಹ ಮಕ್ಕಳು ಮತ್ತು ದೇವರ ಕೃಪಾ ಕಾಲಕ್ಕಾಗಿ ಕಾಯುತ್ತಿದ್ದಾರೆ ಮತ್ತು ಹಂಬಲಿಸುತ್ತಿದ್ದಾರೆ. ರಷ್ಯಾದಲ್ಲಿರುವ ರಕ್ಷಣೆಯನ್ನು ಬಯಸುವ ಸಹೋದರರ ಹೆಸರಿನಲ್ಲಿ ನಾನು ನಿಮ್ಮಲ್ಲಿ ಅಂಗಲಾಚಿ ಬೇಡಿಕೊಳ್ಳುವುದೇನೆಂದರೆ, ಅವರು ಎಲ್ಲಿಯೇ ಇರಲಿ, ಮೌನವಾಗಿರದೆ, ಇಮ್ಮಾನುವೇಲನು ನಮ್ಮ ಸಂಗಡಲೂ ಇರುವ ತನಕ ಯೆಹೋವನು ತನ್ನನ್ನು ಮತ್ತು ಆತನ ವಾಸಸ್ಥಳವನ್ನು ತೋರಿಸುವ ತನಕ ಅವರು ಸಮಾಲೋಚನೆಗಳನ್ನು ನೀಡಲಿ ಮತ್ತು ಧೈರ್ಯವಾಗಿ ಮಾತನಾಡಲಿ"

ಇವುಗಳು ಬಲು ದೂರದಿಂದ ಬರೆದ ನನ್ನ ನಮ್ರ ಮಾತುಗಳಾಗಿವೆ.

**ಜೋಸೆಫ್ ರಾಬಿನೋವಿಚ್**

ಈ ಗಣನೀಯವಾದ ಜಾಗೃತಿಯೊಂದಿಗೆ, ಇದೇ ರೀತಿಯ ಚಳವಳುಕೆಯೊಂದು ಸೈಬೀರಿಯಾದಲ್ಲಿ ಪ್ರಗತಿಯಲ್ಲಿದೆ. ಇದರ ಬಗ್ಗೆ Presbyterian Witness ಎಂಬ ಪತ್ರಿಕೆಯಲ್ಲಿ ಮುಂದಿನ ಪರಿಗಣನೆಯಿಂದ ಪ್ರಕಟಗೊಂಡಿದೆ :

ಹಿಮಭರಿತ ಸೈಬೀರಿಯಾದಿಂದ ಸುವಾರ್ತಾ ಚಳುವಳಿಯ ಬಗ್ಗೆ ಸುದ್ದಿಯೊಂದು ಬರುತ್ತಿದ್ದು ಅದು ರಾಬಿನೋವಿಚ್‌ರವರ ಚಳುವಳಿಯಂತಹುದೇ ಆಗಿದೆ. ಇದರ ನಾಯಕ ಒಬ್ಬ ಪೋಲೆಂಡ್ ದೇಶದ ಯೆಹೂದಿ Jacob Scheinmann ಎಂಬಾತನು. ಆತನು ಇಪ್ಪತ್ತು ವರ್ಷಗಳ ಹಿಂದೆ ತನ್ನ ಸ್ವಂತ ಆಲೋಚನೆಯಿಂದ ದಾವೀದನ ಮಗನಾದ ನಜ಼ರೇತಿನ ಯೇಸುವೇ ನಿಜವಾದ ರಕ್ಷಕನೆಂಬ ತೀರ್ಮಾನಕ್ಕೆ ಬಂದನು. ಯೆಹೂದ್ಯ ಧರ್ಮಶಾಸ್ತ್ರದ ಕಟ್ಟಾ ಅನುಯಾಯಿಗಳು ಆತನನ್ನು ಸೈಬೇರಿಯಾಕ್ಕೆ ಸಾಗಹಾಕಿದರು. ಅಲ್ಲಿ ಆತನು ಹದಿನೈದು ವರ್ಷಗಳ ಕಾಲ ಕಠಿಣವಾದ ದುಡಿಮೆ ಮಾಡಿದನು. ಗಡಿಪಾರಾದವರಲ್ಲಿ ತಮ್ಮ ಸಹಚರರ ವಿಶ್ವಾಸವನ್ನು ಜಾಗೃತಗೊಳಿಸುವ ಕಾರ್ಯಕ್ಕೆ ದುಡಿದನು. ಅದನ್ನು ಅವರು ಬಹುಮಟ್ಟಿಗೆ ಗಮನ ಕೊಡದೇ ಹೋದರು. ಆತನು ವ್ಯಾಪಾರದಲ್ಲಿ ತೊಡಗಿದ್ದ Tomsk ಎಂಬಲ್ಲಿ ಆತನಿಗೆ ದೊರೆತ ಬೇಡವಾದ ಅಂಚೆ ಪತ್ರಗಳಲ್ಲಿ ಆತನಿಗೆ ರಾಬಿನೋವಿಚ್ ರವರ ಕರಪತ್ರವೊಂದು ದೊರಕಿತು. ಆತನು ಕೂಡಲೇ ಅವರನ್ನು ಸಂಪರ್ಕಿಸಿದನು. ಆತನು ಅವರ ದೃಷ್ಟಿಕೋನವನ್ನು "The Voice of one Crying in wilderness" (ಅರಣ್ಯರೋಧನದಲ್ಲಿನ ಒಂದು ಧ್ವನಿ) ಎಂಬ ಕರಪತ್ರದ ಮೂಲಕ ಪ್ರಸಾರಮಾಡುವಲ್ಲಿ ಕಾರ್ಯನಿರತನಾದನು. ನೂತನ ಒಡಂಬಡಿಕೆಯ ಡೆಲಿಚ್‌ರವರ (Delitzsch's) ಭಾಷಾಂತರವನ್ನು ಓದಿ ಅಧ್ಯಯನ ಮಾಡುವುದರಲ್ಲಿ ಸೈಬೀರಿಯಾ ಯೆಹೂದಿಗಳು ತಮ್ಮನ್ನು ತೊಡಗಿಸಿ ಕೊಂಡರು. ಸುಮಾರು 36,000 ಪ್ರತಿಗಳು ಈ ರೀತಿಯಾಗಿ ಉಪಯೋಗಿಸಲ್ಪಟ್ಟವು ಎಂದು ಹೇಳಲಾಗಿದೆ.

ಈ ರೀತಿಯಲ್ಲಿ ಇಸ್ರಾಯೇಲ್ಯರಿಗೆ ದೇವರ ಕೃಪೆಯ ಹಿಂತಿರುಗುವಿಕೆಯ ಗಣನೀಯ ಸೂಚನೆಗಳನ್ನು ನಾವು ಕಾಣುತ್ತೇವೆ; ಅವರನ್ನು ಇತರೆ ದೇಶಗಳಿಂದ ಬಹಳಷ್ಟು ಕಿರುಕುಳಗಳನ್ನು ನೀಡಿ ಹೊರಹಾಕಿದ್ದು, ಅವರನ್ನು ಸ್ವೀಕರಿಸುವಂತೆ ಪಾಲಿಸ್ತೈನನ್ನು ತೆರೆದದ್ದು, ಅವರನ್ನು ಆ ಸ್ಥಳಕ್ಕೆ ಅವರ ಅನುಕೂಲಕ್ಕೆ ತಕ್ಕಂತೆ ಅವರ ಅಭಿವೃದ್ಧಿಗೆ ಮತ್ತು ಸಹಾಯಕ್ಕೆ ಪರೋಪಕಾರಿ ಸಾಹಸೋದ್ಯಮಗಳ ಮಾರ್ಗದಲ್ಲಿ ವಿಶೇಷ ಸಂಸ್ಥಾನಗಳಿಗೆ ಅಹ್ವಾನಿಸಿದ್ದು ಮತ್ತು ಈ ಮಹತ್ವಪೂರ್ಣ ಚಳುವಳಿಯು ಇಸ್ರಾಯೇಲ್ಯರ ಕುರಡುತನವನ್ನು ಬದಲಾಯಿಸುವುದರ ಪ್ರಾರಂಭವೂ ಆಗಿದೆ. ಈಗ ಇವೆಲ್ಲವೂ ದೇವರಿಂದಾಯಿತು ಎಂಬುದು ಸ್ಪಷ್ಟವಾಗಿದೆ ! ಶಾರೀರಿಕ ಇಸ್ರಾಯೇಲ್ಯರ ಪುನಃಸ್ಥಾಪನೆಯ ಈ ಕಾರ್ಯದಲ್ಲಿ, ಮಾತ್ರವಲ್ಲದೆ ಆತ್ಮೀಕ ಇಸ್ರಾಯೇಲ್ಯರನ್ನು ಒಟ್ಟುಗೂಡಿಸುವ ಮಹಾ ಸುಗ್ಗಿಯ ಕಾರ್ಯದಲ್ಲಿ ಈ ಹೊರಹಾಕಲ್ಪಟ್ಟ ಹೆಸರು ಮಾತ್ರ ಸಭೆಯ (ನಾಮಾಂಕಿತ ಸಭೆ) ಪಾರುಪತ್ಯವನ್ನು ಪೂರ್ಣವಾಗಿ ನಿರ್ಲಕ್ಷಿಸಲಾಗಿದೆ. ಈಗ ಪ್ರಗತಿಯಲ್ಲಿರುವ ಈ ಎರಡೂ ಮಹಾ ಕಾರ್ಯಗಳಲ್ಲಿ ಹೆಸರು ಮಾತ್ರ ಕ್ರೈಸ್ತ ಪ್ರಪಂಚದ ವಿವಿಧ ಸಂಸ್ಥೆಗಳನ್ನು ನಿಶ್ಚಿಂತವಾಗಿ ಪಕ್ಕಕ್ಕೆ ಸರಿಸಲಾಯಿತು. ಆತನ ಸ್ವಂತ ಸಮಯ ಮತ್ತು ರೀತಿಯಲ್ಲಿ ಮತ್ತು ನೂತನ ನಮ್ರ ಮತ್ತು ಬಿರುದು

ಬಾವಲಿಗಳಿಲ್ಲದ ಸಾಧನಗಳಿಂದ, ಯೆಹೂದ್ಯ ಸುಗ್ಗಿಯಲ್ಲಿದ್ದಂತೆ ದೇವರು ತನ್ನ ಮಹಾಕಾರ್ಯವು ಸಫಲವಾಗುವಂತೆಯೂ, ಅಭಿವೃದ್ಧಿ ಹೊಂದಿ ಕೊಳ್ಳುವಂತೆಯೂ ಮಾಡುತ್ತಿದ್ದಾನೆ.

ಈಗ ನಾವು ಇದು ಏನನ್ನು ಸೂಚಿಸುತ್ತದೆ? ಎಂದು ಕೊಳ್ಳುತ್ತೇವೆ. ಈ ಸುಗ್ಗಿಯ ಕಾಲದಲ್ಲಿ ಗುರುತಿಸಿದ ಆರಂಭಗಳೂ ಮತ್ತು ಕ್ಷಿಪ್ರವಾದ ದಾಪುಗಾಲುಗಳು ಈ ರೀತಿಯಲ್ಲಿ ಪ್ರಕಟವಾಗುತ್ತಿರುವ ಈ ಅಪರೂಪದ ಮತ್ತು ಅದ್ಭುತವಾದ ಕಾರ್ಯದ ಪರಿಣಾಮವೇನು? ಎಂಬುದಾಗಿ ಪ್ರಶ್ನಿಸುತ್ತೇವೆ. ಅಪೋಸ್ತಲನಾದ ಪೌಲನು ಇಸ್ರಾಯೇಲ್ಯರ ಒಟ್ಟುಗೂಡುವಿಕೆಯು ಅದು ಎಲ್ಲಾ ಮಾನವಜಾತಿಯ ಒಟ್ಟುಗೂಡುವಿಕೆಯನ್ನು ಅಥವಾ ಪುನರ್‌ವಶವನ್ನು ಸೂಚಿಸುವವನಾಗಿ "ಅವರು ಬಿದ್ದುಹೋದದ್ದು ಸರ್ವಲೋಕದ ಭಾಗ್ಯಕ್ಕೂ ಅವರು ಸೋತುಹೋದದ್ದು ಅನ್ಯಜನಗಳ ಭಾಗ್ಯಕ್ಕೂ (ಅವರ ದೈವಿಕ ಕೃಪೆಯ ಸರತಿಯಲ್ಲಿದ್ದಂತೆ) ಮಾರ್ಗವಾಗಿರಲಾಗಿ ಅವರ ಪೂರ್ಣ ಪುನಃಸ್ಥಾಪನೆಯು ಎಷ್ಟೋ ಹೆಚ್ಚಾಗಿ ಭಾಗ್ಯಕ್ಕೆ ಕಾರಣವಾಗುವುದು" (ರೋಮಾ. 11:12) ಎಂಬ ಮಾತುಗಳಿಂದ ನಿರ್ದಿಷ್ಟವಾಗಿ ತೋರಿಸಿಕೊಡುವವನಾಗಿದ್ದಾನೆ. ಶಾರೀರಿಕ ಇಸ್ರಾಯೇಲ್ಯರನ್ನು ಹೊರಹಾಕುವುದರ ಮೂಲಕ ಅನ್ಯಜನರು ಮಹಾಕರೆಯ ಕೃಪೆಯನ್ನು ಹೊಂದಿ ಕೊಂಡರು ಮತ್ತು ಅದನ್ನು ಮೆಚ್ಚಿಕೊಂಡ "ಕೆಲವರು" ಅದನ್ನು ಪಡಕೊಳ್ಳುವಲ್ಲಿ ಎದುರಾದ ಅಡ್ಡಿಗಳನ್ನು ಜಯಿಸಿದವರು, ಕ್ರಿಸ್ತನೊಂದಿಗೆ ಜೊತೆಬಾಧ್ಯಸ್ಥಿಕೆಗೆ ಎತ್ತಲ್ಪಡುತ್ತಾರೆ. ಅವರು ಮಹಾ ವಿಮೋಚಕನಾದ ಕ್ರಿಸ್ತನ ದೇಹವಾಗುತ್ತಾರೆ. ಇದು ಶಾರೀರಿಕ ಇಸ್ರಾಯೇಲ್ಯರನ್ನು ಹೊರಹಾಕಿದ ಉದ್ದೇಶ ಮತ್ತು ಫಲಿತಾಂಶವಾಗಿದೆ; ಆದರೆ ಅವರು ಪುನಃ ಒಂದಾಗಿ ಕೂಡುವುದು ಮತ್ತು ವಾಗ್ದತ್ತ ದೇಶದಲ್ಲಿ ಅವರ ಪುನಃಸ್ಥಾಪನೆಯು ದೇವರ ಯೋಜನೆಯುಲ್ಲಿ ಮತ್ತೊಂದು ಹೆಜ್ಜೆಯನ್ನು ಗುರುತಿಸುತ್ತದೆ. "ಪುನಃವಶವು ಯೆಹೂದ್ಯರಿಗೆ ಮೊದಲು, ಕಟ್ಟಕಡೆಯಲ್ಲಿ ಭೂಲೋಕದ ಎಲ್ಲಾ ಕುಟುಂಬಗಳಿಗೂ ಇನ್ನೇನು ಪ್ರಾರಂಭವಾಗಲಿದೆ" ಎಂದು ಅವು ಪ್ರಕಟಿಸುತ್ತದೆ. ಭೂಲೋಕದ ಮಹಾ ಜೂಬಿಲಿಯು ಪರಿಚಯಿಸಲ್ಪಡುತ್ತಿದೆ ಮತ್ತು ಅದು ಯೆಹೂದ್ಯರೊಂದಿಗಿನ ದೇವರ ಕ್ರಮದಲ್ಲಿ ಪ್ರಾರಂಭ ವಾಗಲಿದೆ. ಈ ರೀತಿಯಾಗಿ ರಾಬಿನೋವಿಚ್‌ರವರು ಮತ್ತು ಶೈಯಿಮನ್ (Scheinmann) ರವರು ಹಾಗೂ ಅವರ ಜೊತೆ ಕೆಲಸಗಾರರು ದೇವರ ಸಾಧನಗಳಾಗಿ ಆತನ ಪುರಾತನ ಜನರನ್ನು ಪುನರ್‌ವಶಕ್ಕೆ ತಯಾರು ಮಾಡುವವರಾಗಿದ್ದಾರೆ, ಅಂತೆಯೇ ನಾವು ಸಹ ದೇವರೊಂದಿಗೆ ಸುವಾರ್ತಾ ಯುಗದ ಸುಗ್ಗಿಯ ಕಾಲದಲ್ಲಿನ ಕೊಯ್ಲಿನ ಕಾರ್ಯದಲ್ಲಿ ಕರ್ತನ ಜೊತೆ ಕೆಲಸದವರಾಗಿರುವುದು ಮತ್ತು ಅದರ ಆಯ್ದ, ಆತ್ಮೀಕವರ್ಗದವರಾಗುವುದು ನಮ್ಮ ಭಾಗ್ಯವಾಗಿದೆ. ಖಂಡಿತವಾಗಿ, ಇಸ್ರಾಯೇಲ್ಯರು ಪೂರ್ಣವಾಗಿ ಅವರ ಸ್ವಭೂಮಿಗೆ ಮತ್ತು ದೈವಿಕ ಕೃಪೆಗೆ ಹಿಂತಿರುಗುವುದು. ಯಾರ ಮೂಲಕವಾಗಿ ಪುನಃವಶವು ನೆರವೇರ ಬೇಕಾಗಿದೆಯೋ ಆ ಮಹಾ ವಿಮೋಚಕನು, ಶಿರಸ್ಸು ಮತ್ತು ದೇಹವು ಅಧಿಕಾರಕ್ಕೆ ಎತ್ತಲ್ಪಟ್ಟಿರುವುದು, ದೇವರ ರಾಜ್ಯವು ಬಂದಿದೆ, ಶಾರೀರಿಕ ಇಸ್ರಾಯೇಲ್ಯರು ಪ್ರಥಮ ಫಲವಾಗಿರುವ ಪುನಃವಶವು ಆಗಲೇ ಪ್ರಾರಂಭವಾಗಿದೆ. "ಯಾಕೆಂದರೆ ಇಸ್ರಾಯೇಲ್ಯರನ್ನು ತಳ್ಳುವದರಿಂದ ಲೋಕವು ದೇವರ ಸಂಗಡ ಸಮಾಧಾನವಾಗಿರುವುದಕ್ಕೆ ಮಾರ್ಗವಾದ ಮೇಲೆ ಅವರನ್ನು ಸೇರಿಸಿಕೊಳ್ಳುವವರಿಂದ ಏನಾಗುವುದು ? ಸತ್ತವರು ಜೀವಿತರಾಗಿ ಎದ್ದು ಬಂದಂತಾಗುತ್ತದಲ್ಲವೇ" – ಈ ಪುನಃವಶವು ಜೀವಂತರಿಗೆ ಮಾತ್ರವಲ್ಲ, ಸತ್ತವರಿಗೆ ಸಹಾ; ವಾಗ್ದಾನಾನುಸಾರ ಇಸ್ರಾಯೇಲ್ಯರಿಗೆ ಮಾತ್ರವಲ್ಲ. ಎಲ್ಲಾ ಮಾನವ ಜಾತಿಯವರಿಗೂ. ಅದರಲ್ಲಿ ಇಸ್ರಾಯೇಲ್ಯರು ಒಂದು ಸಂಕೇತವಾಗಿದ್ದಾರೆ ಮತ್ತು ಪ್ರಥಮ ಫಲವಾಗಿದ್ದಾರೆ. ಈ ಕೃಪೆಯ ಪ್ರಾರಂಭವು ಪ್ರಬಲವಾದ ಮಳೆಯ ಮುನ್ನ ಬರುವ ತುಂತುರು ಹನಿಗಳು ಮಾತ್ರ. ಅದು ಇಸ್ರಾಯೇಲ್ಯರನ್ನು ಮಾತ್ರವೇ ಉಲ್ಲಾಸ ಗೊಳಿಸುವುದಲ್ಲ, ಎಲ್ಲಾ ಮಾನವ ಜಾತಿಯವರನ್ನೂ ಉಲ್ಲಾಸಗೊಳಿಸುತ್ತದೆ. ಹೋರಾಟದ ಅಲೆಯು ಇಸ್ರಾಯೇಲ್ಯರ ಮೇಲೆ ಇನ್ನೂ ಬಲವಾಗಿ ಬೀಸಬೇಕಾಗಿದ್ದರೂ ಮತ್ತು ಅವರನ್ನು ಒಂದು ಸಮಯದಲ್ಲಿ ಇನ್ನೂ ಹೆಚ್ಚಿನ ಸಂಕಟಕ್ಕೆ ತರುವುದಾದರೂ ಅವುಗಳೆಲ್ಲಾದುರ ಮಧ್ಯದಲ್ಲಿ ದೇವರು ಅವರ ಸಂಗಡ ಇರುತ್ತಾನೆ ಮತ್ತು ಸೂಕ್ತಸಮಯದಲ್ಲಿ ಅವರಿಗೆ ಸಹಾಯಮಾಡಿ ಅವರನ್ನು ಮೇಲಕ್ಕೆತ್ತುತ್ತಾನೆ.

ಈ ಸಂಬಂಧದಲ್ಲಿ ಕೆಳಗಿನ ಸಾರ್ವಜನಿಕ ವಾರ್ತಾ ಪತ್ರಿಕೆಯ ಸಮಾಚಾರವು ಮಹತ್ವವುಳ್ಳದ್ದಾಗಿದೆ, ಪ್ರಸ್ತುತಸತ್ಯದ ಬೆಳಕಿನಲ್ಲಿ ನಡೆಯುವವರೆಲ್ಲರೂ ಈ ಚಳುವಳಿಕೆಯು ಪರಿಣಾಮವನ್ನು ಆಳವಾದ ಕುತೂಹಲದಿಂದ ಗಮನಿಸುವರು ಮತ್ತು ಅವರು ಯೆಶಾಯ ಪ್ರವಾದಿಯ ಮೂಲಕ ದೇವರು ಪ್ರಕಟಿಸಿದ "ನನ್ನ ಜನರನ್ನು ಸಂತೈಸಿರಿ, ಸಂತೈಸಿರಿ; ಯೆರೂಸಲೇಮಿನ ಸಂಗಡ ಹೃದಯಂಗಮವಾಗಿ ಮಾತನಾಡಿರಿ; ಅದಕ್ಕೆ ಗಡು (ಮೇರೆ, ನಿಗದಿಯಾದ

ಸಮಯವು) ತೀರಿತು, ಅದರ ಎಲ್ಲಾ ಪಾಪಗಳಿಗೂ ಯೆಹೋವನ ಕೈಯಿಂದ ಎರಡರಷ್ಟು (2ನೇ ಸಂಪುಟ, 7ನೇ ಅಧ್ಯಾಯ) ಶಿಕ್ಷೆಯಾಯಿತು ಎಂದು ಆ ನಗರಿಗೆ ಕೂಗಿ ಹೇಳಿರಿ; ಇದೇ ನಿಮ್ಮ ದೇವರ ಆಜ್ಞೆ" ಎಂಬ ದೇವರ ವಾಕ್ಯದ ಮೂಲಕ ಪ್ರಕಟಿಸಿದ ಸಮಯವು ಬಂದಿದೆ ಎಂದು ಗ್ರಹಿಸಿಕೊಳ್ಳುತ್ತಾರೆ – ಯೆಶಾಯ 40:1,2.

ಉಲ್ಲೇಖಿಸಿದ ಸಮಾಚಾರವು ಈ ಕೆಳಗಿನಂತೆ ಅನುಸರಿಸಿ ಹೋಗುವುದು :

## ಒಂದು ಯೆಹೂದ್ಯ ರಾಜ್ಯವನ್ನು ಪ್ರಸ್ತಾಪಿಸಲಾಗಿದೆ
## A Jewish Kingdom Proposed

ವಾಷಿಂಗ್ಟನ್ ಡಿ.ಸಿ. ಮಾರ್ಚ್, 05, 1891

ಚಿಕಾಗೋವಿನ "ವಿಲಿಯಮ್ ಇ ಬ್ಲಾಕ್ ಸ್ಟೋನ್ ಎಂಬುವವರು ಈ ದಿನ ಸಂಯುಕ್ತ ಸಂಸ್ಥಾನದ ಅಧ್ಯಕ್ಷರನ್ನು ಕಾರ್ಯದರ್ಶಿ ಬ್ಲೈನ್‌ರವರೊಡನೆ ಭೇಟಿ ಮಾಡಿ ರಷ್ಯನ್ ಯೆಹೂದ್ಯರ ಪರವಾಗಿ ಒಂದು ಜ್ಞಾಪಕಾರ್ಥವನ್ನು ಸಲ್ಲಿಸಿದರು".

"ಅವರು ಆ ಸ್ಮಾರಕವು ಇತ್ತೀಚೆಗೆ ಚಿಕಾಗೋದಲ್ಲಿ ನಡೆದ ಕ್ರೈಸ್ತರು ಮತ್ತು ಯೆಹೂದ್ಯರ ಸಮ್ಮೇಳನದ ಫಲ ಎಂಬುದಾಗಿ ವಿವರಿಸಿದರು, ಮತ್ತು ಅದು ರಷ್ಯಾವನ್ನು ವಿರೋಧಿಸುವುದಿಲ್ಲ, ಆದರೆ ಯೆಹೂದ್ಯರಿಗೆ ಅವರ ಹಳೆಯ ವಾಸಸ್ಥಳವಾದ ಪಾಲಿಸ್ತೈನನ್ನು ಅವರ ಅಧಿಕಾರಕ್ಕೆ ಕೊಡುವದನ್ನು ಶಾಂತಿಯುತವಾಗಿ ಬಯಸುವುದಾಗಿದೆ ಎಂಬ ಸತ್ಯಕ್ಕೆ ವಿಶೇಷ ಗಮನಕೊಡುವಂತೆ ಕೋರಿಕೊಂಡರು.

"ಅವರು ಒಂದು ಕಾರ್ಯಚಟುವಟಿಕೆಯುಳ್ಳ ಸರ್ಕಾರದ ಅಡಿಯಲ್ಲಿ ಕೃಷಿ ಮತ್ತು ಆರ್ಥಿಕ ಎರಡೂ ಕ್ಷೇತ್ರಗಳಲ್ಲಿಯೂ ಆ ದೇಶದ ಮಹಾಬೆಳವಣಿಗೆಯ ಸಾಧ್ಯತೆಯ ಅನೇಕ ಸಾಕ್ಷಿಗಳ ಬಗ್ಗೆ ಗಮನಸೆಳೆದರು. ಮತ್ತು ಈಗ ಯೊಪ್ಪಾದಿಂದ ಯೆರೂಸಲೇಮಿನವರೆಗೆ ನಿರ್ಮಿಸುತ್ತಿರುವ ರೈಲು ಮಾರ್ಗವನ್ನು ದಮಸ್ಕ, ಟಡ್ಮೋರ್ ಮತ್ತು ಕೆಳಗೆ ಯೂಫ್ರಟಿಸ್‌ವರೆಗೆ ವಿಸ್ತರಿಸುವುದಾದರೆ ಅದು ಒಂದು ಅಂತರರಾಷ್ಟ್ರೀಯ ಮಹಾಮಾರ್ಗವಾಗುವುದರಲ್ಲಿ ವಿಫಲವಾಗುವುದಿಲ್ಲ" ಎಂದು ತಿಳಿಸಿದರು.

"ತುರ್ಕಿ ಸರ್ಕಾರದ ಬಡತನವು ನಷ್ಟ ಪರಿಹಾರಕ್ಕೆ ಮುಖ್ಯತ್ವವನ್ನು ಕೊಡುತ್ತದೆ, ಹೇಗೆಂದರೆ ಯೆಹೂದ್ಯ ಬಂಡವಾಳಷಾಹಿಗಳ ಮೂಲಕ ಒಂದಂಶ ತುರ್ಕಿ ಸರ್ಕಾರದ ಸಾಲಕ್ಕೆ ಹಣ ಸಹಾಯ ಮಾಡುವುದಾಗಿದೆ, ಮತ್ತು ಶಾಂತಿಯುತವಾದ ರಾಯಭಾರ ವಿಚಾರ ವಿನಿಮಯಗಳು ಮಾತ್ರವೇ ಕೋರಿಕೊಳ್ಳಲಾಗಿದೆ, ಕೊನೆಗೆ ಭೂಮಿ ಮತ್ತು ಆಸ್ತಿಯ ಎಲ್ಲಾ ಖಾಸಗಿ ಒಡೆತನವನ್ನು ಜಾಗರೂಕತೆಯಿಂದ ಗೌರವಿಸಲಾಗುವುದು ಮತ್ತು ರಕ್ಷಿಸಲಾಗುವುದು ಎಂದು ಅವರು ಹೇಳಿದರು. ಮುಕ್ತಾಯದಲ್ಲಿ ಅವರು ರಷ್ಯಾದೊಂದಿಗೆ ಅಂಥಾಃ ಸ್ನೇಹ ಸಂಬಂಧ ಮತ್ತು ಪೂರ್ವ ಏಷ್ಯಾ ಖಂಡದಲ್ಲಿ ಯಾವುದೇ ಜಂಜಾಟಿಲ್ಲದಿರುವಿಕೆಯ ಕಾರಣ ನಮ್ಮ ಸರ್ಕಾರವು ಈ ಸ್ನೇಹ ಚಳುವಳಿಯನ್ನು ಪ್ರಾರಂಭಿಸಿ ಈ ಅಲೆದಾಡುವ ಮಿಲಿಯಾಂತರ ಇಸ್ರಾಯೇಲ್ಯರಿಗೆ ಅವರ ಶಾಶ್ವತ ನಿವಾಸದಲ್ಲಿ ನೆಲೆಸುವಂತೆ ಮಾಡುವುದು ಅತ್ಯಂತ ಸಮಂಜಸವಾದ ಮತ್ತು ನಿರೀಕ್ಷಾಪೂರ್ಣವಾದ ಕಾರ್ಯವಾಗಿದೆ" ಎಂದು ತಿಳಿಸಿದರು.

"ಅಧ್ಯಕ್ಷರು ಬ್ಲಾಕ್‌ಸ್ಟೋನ್‌ರವರ ಮಾತುಗಳನ್ನು ಗಮನಪೂರ್ವಕವಾಗಿ ಕೇಳಿಸಿಕೊಂಡು ಆ ಪ್ರಸ್ತಾಪಕ್ಕೆ ಗಂಬೀರವಾದ ಪರಿಗಣನೆಯನ್ನು ನೀಡುವುದಾಗಿ ವಾಗ್ದಾನ ಮಾಡಿದರು".

## ಸ್ಮಾರಕ
## The Memorial

ಸ್ಮಾರಕದ ಮೂಲ ವಿಷಯ ಇಂತಿದೆ :

"ರಷ್ಯಾದ ಯೆಹೂದ್ಯರಿಗೆ ಏನು ಮಾಡಬೇಕು? ರಷ್ಯಾಕ್ಕೆ ಅದರ ಆಂತರಿಕ ವಿಷಯಗಳ ಬಗ್ಗೆ ಆದೇಶ ನೀಡುವುದು ಅವಿವೇಕ ಮತ್ತು ಅಪ್ರಯೋಜಕವಾಗಿದೆ. ಯೆಹೂದ್ಯರು ಆಕೆಯ ಸಾಮ್ರಾಜ್ಯದಲ್ಲಿ ಶತಮಾನಗಳ ಕಾಲದಿಂದ ಪರದೇಶಿಗಳಂತೆ ಜೀವಿಸಿದ್ದಾರೆ ಮತ್ತು ಅವರುಗಳು ಆಕೆಯ ಮೂಲ ಸಂಪತ್ತಿಗೆ ಹೊರೆಯಾಗಿದ್ದಾರೆ ಮತ್ತು ಅವರ ಒಕ್ಕಲಿಗ ಪ್ರಜೆಗಳ ಕಲ್ಯಾಣಕ್ಕೆ ಹಾನಿಕಾರಕವಾಗಿದ್ದಾರೆ ಹಾಗೂ ಅವರನ್ನು ಹಾಗೇ ಉಳಿಯಲು ಬಿಡಬಾರದು ಎಂಬುದಾಗಿ ಬಲವಾಗಿ ನಂಬಿದ್ದಾಳೆ. ಅವರು ಅಲ್ಲಿಂದ ತೆರಳಲೇಬೇಕು ಎಂದು ನಿರ್ಧರಿಸಲಾಗಿದೆ. ಹೀಗೆ ಸ್ಪೇನಿನ Sephardimನಂತೆ, (ಫಾರ್ಸ್‌ನ) ಈ Ashkenazim ದೇಶಬಿಟ್ಟು ಹೋಗಲೇ ಬೇಕು ಎಂದು ಆಕೆಯು ನಿರ್ಧರಿಸಿದ್ದಾಳೆ. ಆದರೆ ಅಂಥಾಃ ಎರಡು ಮಿಲಿಯನ್ ಬಡ ಜನರು ಹೋಗುವುದಾದರೂ ಎಲ್ಲಿಗೆ? ಯೂರೋಪಿನಲ್ಲಿ ಕಿಕ್ಕಿರಿದ ಜನಸಮೂಹ ಇದೆ ಮತ್ತು ಅಲ್ಲಿ ಹೆಚ್ಚು ಕೃಷಿಜನರಿಗೆ ಅವಕಾಶವಿಲ್ಲ. ಅವರು ಅಮೇರಿಕಾಕ್ಕೆ ಬರಬೇಕೆ? ಇದು ಪ್ರಚಂಡವಾಗಿ ದುಬಾರಿಯಾಗಿದೆ ಮತ್ತು ಇದಕ್ಕೆ ವರ್ಷಗಳೇ ಹಿಡಿಯುತ್ತವೆ.

"ಪಾಲಿಸ್ಟೈನನ್ನು ಅವರಿಗೆ ಹಿಂದಕ್ಕೆ ಕೊಡ ಬಾರದೇಕೆ? ದೇವರು ದೇಶಗಳನ್ನು ಹಂಚಿಕೊಟ್ಟ ಪ್ರಕಾರವಾಗಿ ಅದು ಅವರ ವಾಸಸ್ಥಳವಾಗಿದೆ. ಸ್ಥಳಾಂತರಿಸಲು ಸಾಧ್ಯವಿಲ್ಲದ ಸ್ಥಳದಿಂದ ಅವರನ್ನು ಒತ್ತಾಯಪೂರ್ವಕವಾಗಿ ಹೊರಹಾಕಲಾಗಿದೆ. ಅವರ ಕೃಷಿಯ ಅಡಿಯಲ್ಲಿ ಅದು ಗಣನೀಯವಾಗಿ ಫಲಪ್ರದವಾದ ಭೂಮಿಯಾಗಿತ್ತು. ಮಿಲಿಯಾಂತರ ಇಸ್ರಾಯೇಲ್ಯರನ್ನು ಸಂರಕ್ಷಣೆ ಮಾಡುವುದಾಗಿತ್ತು. ಅವರುಗಳು ಅದರ ಪರ್ವತ ತಪ್ಪಲುಗಳಲ್ಲಿ ಉದ್ಯಮಶೀಲರಾಗಿ ಕೃಷಿಮಾಡಿದ್ದರು. ಅವರುಗಳು ಕೃಷಿಕರು ಮತ್ತು ಉತ್ಪಾದಕರುಗಳು, ಮಾತ್ರವಲ್ಲದೆ ಮಹಾ ವಾಣಿಜ್ಯ ಮಹತ್ವವುಳ್ಳ, ನಾಗರೀಕತೆ ಮತ್ತು ಧಾರ್ಮಿಕ ಕೇಂದ್ರವಾದ ರಾಷ್ಟ್ರದವರು. ಮಳೆಯು ಹೆಚ್ಚುತ್ತಿದೆ ಎಂಬುದಾಗಿಯೂ ಹೇಳಲಾಗಿದೆ ಮತ್ತು ಆ ಭೂಮಿಯು ಅದರ ಪುರಾತನ ಫಲವತ್ತತೆಯನ್ನು ಮರಳಿ ಪಡೆಯುತ್ತಿದೆ ಎಂಬುದಕ್ಕೆ ಅನೇಕ ನಿದರ್ಶನಗಳಿವೆ.

"1878ರ ಬರ್ಲಿನ್ ಒಪ್ಪಂದದ ಪ್ರಕಾರ ಬಲ್ಗೇರಿಯಾವು ಬಲ್ಗೇರಿಯನ್ನರಿಗೆ ಮತ್ತು ಸರ್ವಿಯಾವು ಸರ್ವಿಯನ್ನರುಗಳಿಗೆ ಅಧಿಕಾರವನ್ನು ಕೊಟ್ಟಂತೆ, ಈಗ ಪಾಲಿಸ್ಟೈನನ್ನು ಯೆಹೂದ್ಯರಿಗೆ ಕೊಡಬಾರದೇಕೆ? ಈ ಪ್ರಾಂತ್ಯಗಳು ಮಾತ್ರವಲ್ಲದೆ, ರುಮಾನಿಯಾ, ಮಾಂಟೆನೆಗ್ರೋ ಮತ್ತು ಗ್ರೀಸ್ ಇವುಗಳನ್ನು ತುರ್ಕಿಯಿಂದ ಕಸಿದುಕೊಂಡು ಅದರ ಸ್ವಾಭಾವಿಕ ಒಡೆಯರುಗಳಿಗೆ ನೀಡಲಾಯಿತು. ಅದರಂತೆ ಪಾಲಿಸ್ಟೈನ್ ಸಹಾ ಅಧಿಕಾರಯುಕ್ತವಾಗಿ ಯೆಹೂದ್ಯರಿಗೆ ಸೇರಿದ್ದಲ್ಲವೇ?"

ಅವರ ಸರ್ಕಾರದಲ್ಲಿ ಅಧಿಕಾರ ಸ್ವಯಂಶಾಸನ ಇರುವುದಾದರೆ ಲೋಕದಲ್ಲಿರುವ ಯೆಹೂದ್ಯರು ಕಷ್ಟಾನುಭವಪಡುತ್ತಿರುವ ತಮ್ಮ ಸಹೋದರರನ್ನು ಒಟ್ಟಾಗಿಸಿ ಅವರನ್ನು ಅವರ ಬಹಳ ಕಾಲದಿಂದಲೂ ಮಾನ್ಯ ಮಾಡಲಾಗಿದ್ದ ವಾಸಸ್ಥಳದಲ್ಲಿ ಪುನಃ ಸ್ಥಾಪಿಸುವರು. ಹದಿನೇಳು ಶತಮಾನಗಳಿಗೂ ಮೇಲ್ಪಟ್ಟು ಅವರು ಅಂಥಾಃ ಸವಲತ್ತಿನ ಅವಕಾಶಗಳಿಗಾಗಿ ತಾಳ್ಮೆಯಿಂದ ಕಾಯುತ್ತಿದ್ದಾರೆ. ಅವರು ಬೇರೆಲ್ಲಿಯೂ ಕೃಷಿಕರಾಗಲಿಲ್ಲ. ಯಾಕೆಂದರೆ ಅವರು ತಾವು ವಿವಿಧ ದೇಶಗಳಲ್ಲಿ ಸ್ವಲ್ಪ ಕಾಲವೇ ವಾಸವಾಗಿರುವವರು. ಮತ್ತು ಇನ್ನೂ ಪಾಲಿಸ್ಟೈನಿಗೆ ಹಿಂತಿರುಗಿ ತಮ್ಮ ಸ್ವಂತ ಭೂಮಿಯಲ್ಲಿ ಉಳುಮೆ ಮಾಡುವವರು ಎಂದು ನಂಬಿದ್ದರು. ತುರ್ಕಿ ದೇಶವು ಯಾವುದೇ ಆದಂತಹ ಹಕ್ಕಿನಿಂದ ಪಡೆದುಕೊಂಡಿರುವ ಸ್ಥಳಗಳನ್ನು ಸರಿಸಮವಾಗಿ ಆ ಬೆಲೆಯನ್ನು ರಾಷ್ಟ್ರೀಯ ಸಾಲದಿಂದ ಪುನಃ ಕೊಂಡುಕೊಳ್ಳಲು ಸಾಧ್ಯ. ಈ ಸಾಲವನ್ನು ಯೆಹೂದ್ಯರು ವೈಯುಕ್ತಿಕವಾಗಿ ಸಾಲ ತೀರಿಸಲು ಪಾಲು ತೆಗೆದುಕೊಳ್ಳಬಹುದು.

"ಎಲ್ಲಾ ದೇಶಗಳು, ಮುಖ್ಯವಾಗಿ ಯೂರೋಪಿನ ಕ್ರೈಸ್ತ ದೇಶಗಳು ಇಸ್ರಾಯೇಲ್ಯರಿಗೆ ಕರುಣೆ ತೋರಿಸುವ ಸೂಕ್ತವಾದ ಸಮಯ ಬಂದಿದೆ ಎಂದು ನಾವು ನಂಬುತ್ತೇವೆ. ಮಿಲಿಯಾಂತರ ಗಡಿಪಾರಾದವರು, ಅವರ ದಾರುಣ ಕಷ್ಟಾನುಭವಗಳ ಕಾರಣ ನಮ್ಮ ಸಹಾನುಭೂತಿಗಾಗಿ, ನ್ಯಾಯ ಮತ್ತು ಮಾನವೀಯತೆಗಾಗಿ ಕರುಣಾಜನಕವಾಗಿ ಮೊರೆ ಇಡುತ್ತಿದ್ದಾರೆ. ರೋಮನ್ನ, ಪೂರ್ವಿಕರಿಂದ ಕ್ರೂರವಾಗಿ ಕೊಳ್ಳೆಗೊಳಗಾದ ಅವರ ದೇಶವನ್ನು ನಾವು ಅವರಿಗೆ ಪುನಃವಶಪಡಿಸೋಣ .....

"ಈ ನಿಟ್ಟಿನಲ್ಲಿ ನಾವು ಸಂಯುಕ್ತ ಸಂಸ್ಥಾನದ ಅಧ್ಯಕ್ಷರಾದ ಹಿಸ್ ಎಕ್ಸಲೆನ್ಸಿ ಮತ್ತು ಸರ್ಕಾರದ ಕಾರ್ಯದರ್ಶಿಗಳಾದ Hon J.G. Blaineರವರಿಗೆ ಅವರು ತಮ್ಮ ಒಳ್ಳೆಯ ಅಧಿಕಾರ ಸ್ಥಾನಗಳನ್ನು ಉಪಯೋಗಿಸಬೇಕು ಮತ್ತು ಅವರ ಸಾಮ್ರಾಜ್ಯದ ಪ್ರಭುಗಳಾದ ಅಲೆಗ್ಜಾಂಡರ್ III, Czar of Russia, ಬ್ರಿಟನ್ನಿನ ಮತ್ತು ಭಾರತದ ಚಕ್ರವರ್ತಿನಿ ರಾಣಿ ವಿಕ್ಟೋರಿಯಾ; ವಿಲಿಯಂ II ಜರ್ಮನಿಯ ಚಕ್ರವರ್ತಿ; ಆಸ್ಟ್ರೋ-ಹಂಗೇರಿಯಾದ ಚಕ್ರವರ್ತಿ ಫ್ರಾನ್ಸಿಸ್ ಜೋಸೆಫ್; ತುರ್ಕಿಯ ಸುಲ್ತಾನ ಅಬ್ದುಲ್ ಹಮೀದ್ II, Her Royal Majesty Marie Christina, ಸ್ಪೈನಿನ ಮಹಾರಾಣಿ ರೀಜೆಂಟ್; ಫ್ರಾನ್ಸ್‌ನ ಗಣರಾಜ್ಯ ಸರ್ಕಾರ ಮತ್ತು ಬೆಲ್ಜಿಯಂ, ಹಾಲೆಂಡ್, ಡೆನ್ಮಾರ್ಕ್, ಸ್ವೀಡನ್, ಪೋರ್ಚುಗಲ್, ರೊಮಾನಿಯಾ, ಸರ್ವಿಯಾ, ಬುಲ್ಗೇರಿಯಾ ಮತ್ತು ಗ್ರೀಕ್ ಸರ್ಕಾರ ಇವುಗಳ ಮೇಲೆ ಹಿಡುವಳಿಕೆಯನ್ನು ರಕ್ಷಿಸುವಂತೆ ಮತ್ತು ಇಸ್ರಾಯೇಲ್ಯರ ಪರಿಸ್ಥಿತಿಯನ್ನು, ಮತ್ತು ತಮ್ಮ ಪುರಾತನ ನಿವಾಸವಾದ ಪಾಲಿಸ್ಟೈನಿನ ಮೇಲಿನ ಅವರ ಹಕ್ಕೇಳಿಕೆಯನ್ನು ಪರಿಗಣಿಸುವಂತೆ ಬೇಗನೇ ಒಂದು ಅಂತರರಾಷ್ಟ್ರೀಯ ಸಮ್ಮೇಳನವನ್ನು ಏರ್ಪಡಿಸುವಂತೆ ಪ್ರಭಾವವನ್ನು ಬೀರಬೇಕೆಂದು ಮತ್ತು ಅವರ ಕಷ್ಟಾನುಭವದ ಪರಿಸ್ಥಿತಿಯನ್ನು ನ್ಯಾಯ ಮತ್ತು ಯೋಗ್ಯರೀತಿಯಲ್ಲಿ ಉಪಶಮನಗೊಳಿಸುವ ದಿಸೆಯಲ್ಲಿ ಉತ್ತೇಜನ ನೀಡುವಂತೆ ಬಿನ್ನಹಮಾಡುತ್ತೇವೆ.

[ಈ ಬಿನ್ನವತ್ತಳೆಯು (ಸ್ಮಾರಕ ಮನವಿಯು) ಎಲ್ಲಾ ಉದ್ಯೋಗದಲ್ಲಿನ ಪ್ರಮುಖ ಜನರ ಮತ್ತು ಚಿಕಾಗೋ, ಬೋಸ್ಟನ್, ನ್ಯೂಯಾರ್ಕ್, ಫಿಲಿಡೆಲ್ಫಿಯಾ,

ಬಾಲ್ಟಿಮೋರ್ ಮತ್ತು ವಾಷಿಂಗ್ಟನ್ನಿನ ಪಂಥದವರ ಸಹಿಪಡೆದಿದೆ]

## ಆಂಗ್ಲೋ– ಇಸ್ರಾಯೇಲ್ಯರ ಪ್ರಶ್ನೆ
## The Ango Israelitish Question

ಈ ಪುಸ್ತಕದ ಮೊದಲನೆಯ ಆವೃತ್ತಿಯು ಪ್ರಕಟಗೊಂಡಂದಿನಿಂದ, ವಿಶೇಷವಾಗಿ ಈ ಅಧ್ಯಾಯದ ಮೇಲಿನ ಟೀಕೆಯು 'ಇಸ್ರಾಯೇಲಿನ ನಿಶಾನೆ' (Banner of Israel) ಎಂಬ ಆಂಗ್ಲ ಪತ್ರಿಕೆಯೊಂದರಲ್ಲಿ ಪ್ರಕಟವಾಯಿತು. ಈ ಪತ್ರಿಕೆಯು ಆಂಗ್ಲೋ–ಸಾಕ್ಸನ್ ಜನರು ಇಸ್ರಾಯೇಲ್ಯರ ಕಳೆದುಹೋದ ಹತ್ತು ಕುಲಗಳ ಪ್ರತಿನಿಧಿ ಎಂಬ ವಿಚಾರಸರಣಿಗೆ ನಿವೇದಿತವಾಗಿದೆ. 1891ರ ಡಿಸೆಂಬರ್ ತಿಂಗಳಲ್ಲಿ ನಮ್ಮ ಸಂಚಿಕೆ 'Zion's Watch Tower' ನಲ್ಲಿ ಪ್ರಕಟವಾದ ಲೇಖನವನ್ನು ಅದು ಕೆಳಕಂಡ ಹೆಚ್ಚುವರಿ ಅಂಶಗಳನ್ನು ಮುಟ್ಟುವ ಕಾರಣ ಕುತೂಹಲಕಾರಿಯಾಗಿದೆ ಎಂದು ನಂಬಿ ಇಲ್ಲಿ ಪುನಃ ಪ್ರಕಟಿಸುತ್ತಿದ್ದೇವೆ :–

THE BANNER OF ISRAELನ ಸಂಪಾದಕರಿಗೆ,

ಪ್ರಿಯ ಮಾನ್ಯರೇ,

ನಿಮ್ಮ ಪತ್ರಿಕೆಯಲ್ಲಿ ಪ್ರಕಟವಾದ ಇತ್ತೀಚಿನ ಒಂದು ಲೇಖನವು SCRIPTURE STUDIES Vol. IIIನ್ನು ಪುನರ್ವಿಮಶಿಸುತ್ತಾ, ವಿಶೇಷವಾಗಿ ಇಸ್ರಾಯೇಲ್ಯರು ತಮ್ಮ ದೇಶವಾದ ಪಾಲಿಸ್ತೈನಿಗೆ ಹಿಂತಿರುಗುವ ಆಂಗ್ಲೋ– ಇಸ್ರಾಯೇಲ್ ಪ್ರಶ್ನೆಗೆ ಸಂಬಂಧಿಸಿದಂತೆ ಬರೆದಿರುವುದು ನಮ್ಮ ಗಮನಕ್ಕೆ ಬಂದಿದೆ; ಅದು ಉತ್ತರವನ್ನು ಅರಸುವುದರಿಂದ ನಾನು ತ್ವರಿತವಾಗಿ ಮತ್ತು ಸಂಕ್ಷಿಪ್ತವಾಗಿ ನಿಮಗೆ ಉತ್ತರಿಸಬಯಸುತ್ತೇನೆ.

ಚರ್ಚಿಸಬೇಕಾದ ಅಂಶವು ರೆಹೊಬ್ಬಾಮನ ಕಾಲದಲ್ಲಿ ಇಸ್ರಾಯೇಲ್ಯರ ಹತ್ತು ಕುಲಗಳಿಂದ ಎರಡು ಕುಲಗಳು ಪ್ರತ್ಯೇಕಗೊಂಡ ನಂತರ ಅವರು ಎಂದಾದರೂ ನಿಜವಾಗಿಯೂ ಒಂದಾದರೆ ಅಥವಾ ಹಾಗೆಂದು ಲೆಕ್ಕಿಸಲ್ಪಟ್ಟರೆ ಎಂಬ ಪ್ರಶ್ನೆಯ ಮೇಲೆ ತಿರುಗಿದೆ. ನಿಮ್ಮ ವರದಿಗಾರರು ಯಾವುದೇ ಪುನರ್ಮಿಲನ ಇದ್ದಿಲ್ಲವೆಂದೂ ಮತ್ತು ಇಸ್ರಾಯೇಲ ಎಂಬ ಹೆಸರು ಆ ದಿನ ಮೊದಲುಗೊಂಡು ಪ್ರತ್ಯೇಕವಾಗಿ ಹತ್ತು ಕುಲಗಳಿಗೆ ಸೇರುತ್ತದೆಯೇ ಹೊರತು, ಯೆಹೂದ್ಯರೆನಿಸಿಕೊಂಡ ಯೂದ ಮತ್ತು ಬೆನ್ಯಾಮೀನ ಎಂಬ ಎರಡು ಕುಲಗಳಿಗಲ್ಲ ಎಂದು ಹೇಳುತ್ತಾರೆ. ಈ ತಪ್ಪು ಅವರ ವಿಚಾರ ಸರಣಿಗೆ ಅಗತ್ಯವಾಗಿತ್ತು ; ಆಂಗ್ಲೋ–ಸಾಕ್ಸನ್ನರು ಆ ಹತ್ತು ಕುಲಗಳು ಮತ್ತು ಅವರುಗಳ ಅಭಿವೃದ್ಧಿ ಈ ಸತ್ಯದ ಕಾರಣದಿಂದಾಗಿದೆ. ಪಾಳುಬಿದ್ದ ಎಪ್ಪತ್ತು ವರ್ಷಗಳವರೆಗೆ, ವಿಶೇಷವಾಗಿ ಬಾಬಿಲೋನಿನ ಸೆರೆಯಿಂದ ಹಿಂತಿರುಗಿದ ನಂತರ ಇಸ್ರಾಯೇಲ್ಯ ರಾಷ್ಟ್ರವು ದೇವರ ವಾಗ್ದಾನಗಳನ್ನು ಗೌರವಿಸಿದ ಎಲ್ಲಾ ಕುಲಗಳು ಒಂದೇ ಎಂದು ದೇವರಿಂದ ಮಾನ್ಯತೆ ಹೊಂದಿ ಪಾಲೆಸ್ತೈನಿಗೆ ಹಿಂತಿರುಗಿತು ಮತ್ತು ಕೋರೇಷನು ಆತನು ಅನುಮತಿಯ ಆಜ್ಞೆಯನ್ನು ಹೊರಡಿಸಿದನು ಎಂಬುದನ್ನು ನಾವು ಎತ್ತಿಹಿಡಿಯುತ್ತೇವೆ. ಹಿಂತಿರುಗಿ ಬಾರದವರು ಇಸ್ರಾಯೇಲಿನ ಪ್ರಜಾಸಮುದಾಯಕ್ಕೆ ಸೇರಿದವರೂ ಅಲ್ಲ. ನಿಜವಾದ ಇಸ್ರಾಯೇಲ್ಯರು ಅಲ್ಲ, ಆದುದರಿಂದ ಅವರು ಅನ್ಯಜನರು ಎಂಬುದನ್ನು ನಾವು ಎತ್ತಿಹಿಡಿಯುತ್ತೇವೆ. ಈ 'ಕಳೆದು ಹೋದವರು' ನಿಜವಾಗಿಯೂ ಇಸ್ರಾಯೇಲ್ಯರಲ್ಲದವರು ಬರುವ ಸಹಸ್ರಮಾನದ ನೂತನ ಒಡಂಬಡಿಕೆಯ ಅಡಿಯಲ್ಲಿ ಮಾನ್ಯತೆ ಮತ್ತು ಆಶೀರ್ವಾದವನ್ನು ಪಡಕೊಳ್ಳಬೇಕು, ಸುವಾರ್ತಾಯುಗದಲ್ಲಿ ಅಲ್ಲ ಎಂಬುದನ್ನು ನಾವು ದೃಢಪಡಿಸುತ್ತೇವೆ. ಕೆಲವು ಅಂಶಗಳ ಬಗ್ಗೆ, ನಮ್ಮ ದೃಷ್ಟಿಕೋನದ ಮೇಲೆ ಸ್ವಲ್ಪಮಟ್ಟಿನ ತಪ್ಪು ತಿಳುವಳಿಕೆ ಇದೆ. ಹತ್ತು ಕುಲಗಳು ಉಳಿದ ಎರಡು ಕುಲಗಳಿಂದ ಬೇರ್ಪಟ್ಟವು ಎಂಬುದನ್ನಾಗಲೀ, ಅಥವಾ ಬಹು ಸಂಖ್ಯೆಯವರನ್ನು ಪ್ರತಿನಿಧಿಸುವ ಹತ್ತು ಕುಲಗಳು ಎಲ್ಲರ ಮೂಲ ಹೆಸರನ್ನು (ಇಸ್ರಾಯೇಲ್) ಉಳಿಸಿಕೊಂಡಿತು ಮತ್ತು ಎರಡು ಕುಲಗಳಿಗೆ Judah (ಯೆಹೂದ್ಯ) ಎಂಬ ಹೆಸರಾಯಿತು ಎಂಬುದನ್ನಾಗಲೀ ಅಥವಾ ಈ ಬೇರ್ಪಡುವಿಕೆಗೆ ಗಣನೀಯ ಕಾರಣಗಳಿದ್ದವು ಅಥವಾ ಅದು ಅವರ ದಂಡನೆಗಾಗಿರುವ ದೇವರ ಯೋಜನೆಗೆ ಅನುಸಾರವಾಗಿತ್ತು ಅಥವಾ ಆ ಹತ್ತುಕುಲಗಳು ಆ ಎರಡು ಕುಲಗಳಿಗಿಂತ ಸುಮಾರು ಎಪ್ಪತ್ತು ವರ್ಷಗಳ ಹಿಂದೆಯೇ ಸೆರೆವಾಸಕ್ಕೆ ಹೋದರು ಅಥವಾ ದೇವರು ಲೋಕ ಪ್ರಾರಂಭವಾದಂದಿನಿಂದ ಇದ್ದ ತನ್ನ ಪ್ರವಾದಿಗಳ ಮೂಲಕ ನುಡಿದಂತೆ ಎಲ್ಲಾ ಸಂಗತಿಗಳ ಪುನರ್‌ವಶದ ಸಮಯದಲ್ಲಿ ಬಹುಶಃ ಆ ಹತ್ತು ಕುಲಗಳ ಹಾಗೂ ಆ ಎರಡು ಕುಲಗಳ ವಂಶಜರಿಗೆ ಮತ್ತು ಲೋಕದ ಮೇಲಣ ಎಲ್ಲಾ ಮಾನವ ಜಾತಿಯವರಿಗೆ ಯಾವುದೋ ಒಂದು ರೀತಿಯ ಆಶೀರ್ವಾದವನ್ನು ಇಟ್ಟಿದ್ದನೆಂಬುದನ್ನು ನಾವು ಅಲ್ಲಗಳೆಯುವುದಿಲ್ಲ (ಅ.ಕೃ. 3:19–21)

ನಮ್ಮ ಹಕ್ಕೇಳಿಕೆ ಏನೆಂದರೆ, "ಮಹಾಬೋಧಕನು ಸ್ಪಷ್ಟಪಡಿಸಿದ್ದು "ಬರಬೇಕಾದ ರಕ್ಷಣೆಯು ಯೆಹೂದ್ಯರೊಳಗಿಂದ ಬರುತ್ತದಷ್ಟೆ", "ಒಳ್ಳೇದನ್ನು ನಡೆಸುವ ಪ್ರತಿಯೊಬ್ಬನಿಗೆ "ಪ್ರಭಾವವೂ, ಮಾನವೂ,

ಮನಶ್ಶಾಂತಿಯೂ ಉಂಟಾಗುವುವು – ಯೆಹೂದ್ಯರಿಗೆ ಮೊದಲು, ಅನಂತರ ಗ್ರೀಕರಿಗೆ ಸಹ. ದೇವರಿಗೆ ಪಕ್ಷಪಾತವಿಲ್ಲ" (ರೋಮಾ. 2:10,11) ಎಂದು ಮಹಾ ಅಪೋಸ್ತಲನು ಪ್ರಕಟಿಸಿರುವುದೂ ಸರಿಯಾಗಿದೆ. ಈ ಬಗ್ಗೆ ನಮ್ಮ ತಿಳುವಳಿಕೆ ಏನೆಂದರೆ, ಬಾಬೇಲಿನ ಸೆರೆಹಿಡಿಯುವಿಕೆಯ ನಂತರದಲ್ಲಿ ಯೆಹೂದ್ಯರು ಎಂಬ ಹೆಸರು ಇಸ್ರಾಯೇಲ್ಯರೊಂದಿಗೆ ಸಮಾನಾರ್ಥ ಹೆಸರಾಯಿತು ಮತ್ತು ಧರ್ಮಶಾಸ್ತ್ರವನ್ನು ಅನುಸರಿಸುವ ರೆಲ್ಲರನ್ನೂ, ಅಬ್ರಹಾಮನ ವಾಗ್ದಾನದ ನಿರೀಕ್ಷೆಯುಳ್ಳವ ರೆಲ್ಲರನ್ನೂ, ಹತ್ತು ಕುಲಗಳಲ್ಲಿ ಕೆಲವರನ್ನು ಸಹಾ ಮಾತ್ರವಲ್ಲದೆ, ಅನ್ಯಜನಗಳಿಂದ ಮತಾಂತರ ಹೊಂದಿದ ಮತ್ತು ಸುನ್ನತಿ ಮಾಡಿಸಿಕೊಂಡವರು ಸಹ ಇದರಲ್ಲಿ ಒಳಗೊಂಡವು. ಮಾತ್ರವಲ್ಲದೆ, ಹತ್ತುಕುಲಗಳ ದಂಗೆಯ ಸಮಯದಲ್ಲಿ ಈ ಕುಲಗಳ ಎಲ್ಲಾ ವ್ಯಕ್ತಿಗತ ಸದಸ್ಯನೂ ಇದರೊಳಕ್ಕೆ ಸೇರಲಿಲ್ಲ, ಕೆಲವರು ಯೂದಾಯ ರಾಜ್ಯಕ್ಕೆ ನಿಷ್ಠಾವಂತರಾಗಿದ್ದರು ಮತ್ತು ಯೆಹೂದ್ಯ ರೊಂದಿಗೆ ಜೀವಿಸುವುದನ್ನು ಮುಂದುವರಿಸಿದರು (1 ಅರಸು 12:17).

ನಾವು ಈ ಮಹತ್ವವಾದ ಅಂಶವನ್ನು ಕಂಡುಕೊಂಡಿದ್ದೇವೆ ಮತ್ತು ಸೂಚಿಸುವವರಾಗಿದ್ದೇವೆ: ನಮ್ಮ ಕರ್ತನು ಮತ್ತು ಅಪೋಸ್ತಲರು "ಹನ್ನೆರಡು ಕುಲಗಳವರನ್ನು", ಅದೂ ಯೆರೂಸಲೇಮಿನಲ್ಲಿ ಜೀವಿಸುವ ಜನರನ್ನುದ್ದೇಶಿಸಿ 'ಇಸ್ರಾಯೇಲ್ಯನ ಮನೆತನದವರು' ಎಂದು ಒಂದೇ ಹೆಸರಿನಿಂದ ಸಂಬೋಧಿಸಿದ್ದನ್ನು ಕೇಳಿದ್ದೇವೆ, ಅದು ಸಹಾ ಯೆರೂಸಲೇಮಿನ ವಾಸಿಸುವ ಜನರನ್ನು ನೇರವಾಗಿ ಮಾತನಾಡುವ ಸಮಯದಲ್ಲಿ ಎಲ್ಲರೂ ಒಪ್ಪಿಕೊಳ್ಳುವಂತೆ ಅವರುಗಳು ಮುಖ್ಯವಾಗಿ ಯೆಹೂದ ಕುಲಕ್ಕೆ ಸೇರಿದವರು, ಆದರೆ ಭಾಗಶಃವಾಗಿ ಎಲ್ಲಾ ಹನ್ನೆರಡು ಕುಲಗಳಿಗೂ ಸೇರಿದವರು. ಕರ್ತನು ಮತ್ತು ಅಪೋಸ್ತಲರು ಆ ರೀತಿಯಾಗಿ ಹನ್ನೆರಡು ಕುಲಗಳವರನ್ನು ಒಂದು ಜನಾಂಗ ಎಂದು ಸಂಬೋಧಿಸಿದ ಸಂಗತಿಯೂ ಹಾಗೂ, ಮತ್ತು ಅವರಿಗೆ ಆ ರೀತಿಯಾಗಿ ಅನ್ವಯಿಸಿದ ಪ್ರವಾದನೆಗಳು, ನಾವು ಅದರಂತೆ ಮಾಡುವುದಕ್ಕೆ ಸಾಕಷ್ಟು ಕಾರಣವಾಗಿದೆ ಎಂಬುದು ನಮಗೆ ಕಂಡುಬರುತ್ತದೆ.

ಈ ಪ್ರಸ್ತಾಪದ ವಿವಿಧ ಹಂತಗಳಿಗೆ ಸಂಬಂಧಿಸಿದ ದೇವರ ವಾಕ್ಯದ ವಚನಗಳಿಗೆ ಬಹಳಷ್ಟು ಸ್ಥಳ ಬೇಕಾಗುತ್ತದೆ. ಆದರೆ ಯಾರು 'Young Concordance'ನ ಪ್ರತಿಯನ್ನು ತೆಗೆದುಕೊಳ್ಳುತ್ತಾರೋ ಅವರು ಪುಟ 528ನ್ನು ತಿರುಗಿಸಲಿ. ಅದರಲ್ಲಿ ಹೊಸಒಡಂಬಡಿಕೆಯಲ್ಲಿ 'ಇಸ್ರಾಯೇಲ್ಯರು' ಎಂದು ಉಪಯೋಗಿಸಿರುವ ವಿವಿಧ ಪ್ರಕರಣಗಳು ಕಂಡು ಬರುತ್ತವೆ. ಇವು 'ಇಸ್ರಾಯೇಲ್ಯ ಮನೆತನದವರು' ಎಂಬುದು 'ಹತ್ತು ಕುಲಗಳಿಗೆ' ಮಾತ್ರವೇ ಅನ್ವಯವಾಗುವುದಲ್ಲ. ಆದರೆ ಎಲ್ಲಾ ಇಸ್ರಾಯೇಲ್ಯರಿಗೆ ಎಂಬುದಕ್ಕೆ ಅಗಾಧವಾದ ಸಾಕ್ಷ್ಯಗಳಾಗಿವೆ ಎಂಬುದಾಗಿ ಕಂಡುಬರುತ್ತದೆ, ಈ ಮುಂದಣ ವಾಕ್ಯ ಭಾಗಗಳನ್ನು ಗಮನಿಸಿರಿ": ಮತ್ತಾಯ 8:10, 10:26; 15:24,31; 27:9, 42; ಮಾರ್ಕ 12 : 29; 15:32; ಲೂಕ 1:54, 68 ಮತ್ತು ವಿಶೇಷವಾಗಿ 80ನೇ ವಚನ; ಮಾತ್ರವಲ್ಲದೆ 2:25, 32, 34; 24:21; ಮತ್ತು ಜಾಗರೂಕವಾಗಿ ಗಮನಿಸಿ, ಯೋಹಾನ 1:31, 49; 3:10; 12:13; ಮಾತ್ರವಲ್ಲದೆ ಅ.ಕೃ 2:22, 36; 3:12; 4:10, 27; 5:21, 30, 31, 35; 13:16, 24; 21:28; ರೋಮಾ. 9:6, 31; 10:19; 11:25, 26; 1 ಕೊರಿಂಥ 10:18; ಗಲಾತ್ಯ 6:16; ಎಫೆಸ 2:12; ಫಿಲಿಪ್ಪಿ 3:5; ಇಬ್ರಿಯ 8:8.

"ಬರಬೇಕಾದ ರಕ್ಷಣೆಯು ಯೆಹೂದ್ಯರೊಳಗಿಂದ ಬರುತ್ತದಷ್ಟೇ" ಅಥವಾ ಒಡಂಬಡಿಕೆಯನ್ನು ಪಾಲಿಸುವ ಇಸ್ರಾಯೇಲ್ಯರದು ಎಂಬುದರ ಅರ್ಥ : – (1) ನಮ್ಮ ಕರ್ತನಾದ ಯೇಸು ಈ ಪೀಳಿಗೆಯಲ್ಲಿ ಬಂದವನು (2) ಅದರಲ್ಲಿ ಈ ಯೆಹೂದ್ಯರ ಶೇಷಭಾಗದವರು (ಅಪೋಸ್ತಲರು ಮತ್ತು ಆದಿಸಭೆಯ ಹಲವರು) ಇವರನ್ನು ಇಸ್ರಾಯೇಲ್ಯರ ಶೇಷಭಾಗದವರು ಎಂದು ಕರೆಯಲಾಗುತ್ತದೆ (ರೋಮಾ. 9:27; 11:1,5,7). ಅನ್ಯಜನರಿಗೆ ಮೈತ್ರಿ ಸಂದೇಶವನ್ನು ನೀಡುವ ಸೇವಕರುಗಳಾದರು (3) ಕರ್ತನ ಹಂಚಿಕೆಯಲ್ಲಿ, ಮುಂದಣ ಪುನರ್‌ವಶದ ಕಾರ್ಯದಲ್ಲಿ ಮೊಂಡತನ (ಕುರುಡುತನ) ದಿಂದ ಪುನಃಸಂಪಾದಿಸಿದ ಶಾರೀರಿಕ ಇಸ್ರಾಯೇಲ್ಯರು ಮಧ್ಯಮವಾಗಿ ಉಪಯೋಗಿಸಲ್ಪಟ್ಟು ಅವರ ಮೂಲಕವಾಗಿ ರಕ್ಷಣೆಯ ಪ್ರವಾಹವು ಮಹಿಮೆ ಹೊಂದಿದ ಇಸ್ರಾಯೇಲ್ಯರಿಂದ ಹೊರಟು ಪ್ರಪಂಚದ ಎಲ್ಲಾ ಕುಟುಂಬಗಳಿಗೂ ಹರಿಯುವುದು; ಯೆಶಾಯ 2:3ರಲ್ಲಿ ಬರೆದಿರುವಂತೆ "ಚಿಯೋನಿನಿಂದ (ಸುವಾರ್ತಾ ಸಭೆ, ಮಹಿಮೆ ಹೊಂದಿದ ಆತ್ಮೀಕ ಇಸ್ರಾಯೇಲರು) ಧರ್ಮೋಪದೇಶವೂ, ಯೆರೂಸಲೇಮಿನಿಂದ (ಪುನಃ ಸ್ಥಾಪಿತರಾದ ಐಹಿಕ ಇಸ್ರಾಯೇಲ್ಯರು) ಯೆಹೋವನ ವಾಕ್ಯವೂ ಹೊರಡುವುವು".

ಆದರೆ ಯಾವುದೇ ಸಂದರ್ಭದಲ್ಲಿ ಈ ಹತ್ತು ಕುಲಗಳವರು ಈ ರೀತಿಯ ವಾಗ್ದಾನಗಳಿಂದ ಹೊರಗುಳಿ ದಿದ್ದಾರೆ; ಚಿಯೋನಾಗಲೀ, ಯೆರೂಸಲೇಮಾಗಲೀ (ಸಂಕೇತವಾಗಿಯೂ ಅಲ್ಲ, ನಿಜವಾದದೂ ಅಲ್ಲ)

ಅವರಿಗೆ ಸೇರಿರುವುದಿಲ್ಲ. ಅಬ್ರಹಾಮನಿಗೆ ಮಾಡಿದ ಎಲ್ಲಾ ಒಡಂಬಡಿಕೆಗಳಲ್ಲಿ ಅವರಿಗೆ ಪಾಲು ದೊರೆಯಬೇಕಾದಲ್ಲಿ ಅವರು ಒಂದೋ ಆತ್ಮೀಕ ಇಸ್ರಾಯೇಲ್ಯರೊಡನೆ ಕೂಡಿಕೊಳ್ಳಬೇಕು. ಯೂದ ಕುಲದ ಸಿಂಹವೇ ಅದರ ಶಿರಸ್ಸಾಗಿದ್ದಾನೆ, ಅಥವಾ ಅವರು ಬರಲಿರುವ ಪುನರ್ವಶದ ಸಮಯದಲ್ಲಿ ಆತನ ಪಾಲನ್ನು ಪಡಕೊಳ್ಳಬೇಕಾದರೆ ಯೆರೂಸಲೇಮಿನ ಅಕ್ಷರಶಃ ಯೂದ ಕುಲದವರ ಸಹವಾಸ ಮಾಡಬೇಕು. ಯಾಕೆಂದರೆ "ದೇವರು ಯೆಹೂದದ ಪಾಳಯಗಳಿಗೆ ಮೊದಲು ಜಯವನ್ನುಂಟುಮಾಡುವನು" (ಜೆಕರ್ಯ 12;7).

ನಿಮ್ಮ ಬಾತ್ಮೀದಾರನ (ವರದಿಗಾರನ) ವಾದವು ಕೆಳಗಣ ಆಯ್ದು ತೆಗೆದವುಗಳಲ್ಲಿ ಒಂದಾಗಿದೆ ಎಂದು ಕಂಡು ಬರುತ್ತದೆ. ನಾವು ಅವುಗಳನ್ನು ನಿಮ್ಮ ಪತ್ರಿಕೆಯಿಂದ ಉಲ್ಲೇಖಿಸುತ್ತೇವೆ :–

"ಇಸ್ರಾಯೇಲ್ಯರು ಹಿಂದಿರುಗದಿರುವ ಬಗ್ಗೆ ಯೆರೆಮೀಯ 29:1,4,10ನ್ನು ಎಜ್ರ 1:1ರೊಂದಿಗೆ ಹೋಲಿಸುವಾಗ, ಕೊರೇಷನ ಆಜ್ಞೆಯು ಪ್ರತ್ಯೇಕವಾಗಿ ಯೆಹೂದ್ಯರಿಗಾಗಿಯೇ ನುಡಿದ ಪ್ರವಾದನೆಯ ನೆರವೇರಿಕೆಯಾಗಿದೆ ಎಂಬುದನ್ನು ತೋರಿಸುತ್ತದೆ ಮತ್ತು ಯೆಹೆಜ್ಕೇಲ 4:3–8ರಲ್ಲಿ ಇಸ್ರಾಯೇಲ್ಯರ 'ಸೆರೆ' ಎಂಬ ಪದವು ಯೂದಾಯದಿಂದ ಬಹಳ ದೂರದವರೆಗೂ ವಿಸ್ತರಿಸಬೇಕು ಎಂಬುದು ಸ್ಪಷ್ಟವಾಗಿದೆ. ಈ ಹತ್ತು ಕುಲಗಳವರು ಕೋರೇಷನ ಪ್ರಸ್ತಾಪದಲ್ಲಿ ಒಳಪಟ್ಟರು ಎಂಬುದಕ್ಕೆ ಯಾವುದೇ ರುಜುವಾತಿಲ್ಲ".

ನಾವು ಈ ಹೇಳಿಕೆಗಳಿಗೆ ಆಕ್ಷೇಪಣೆಗಳನ್ನು ಎತ್ತಿ ನೀಡಿರುವ ವೇದ ವಚನಗಳನ್ನು ಜಾಗ್ರತೆಯಾಗಿ ಓದಿಕೊಳ್ಳುವಂತೆ ನಿಮ್ಮ ಓದುಗರನ್ನು ಕೇಳಿ ಕೊಳ್ಳಬೇಕಾಗಿದೆ. ಯೆರೆಮೀಯ (29:01–10) ಜನರನ್ನು ಎಂದೂ ಯೆರೂಸಲೇಮಿಗೆ ಹಿಂತಿರುಗುವ ಅಪೇಕ್ಷೆ ಇಲ್ಲದ್ದವರಂತೆ ತೃಪ್ತರಾಗಿ ನೆಲೆಗೊಳ್ಳುವಂತೆ ಹೇಳುವುದಿಲ್ಲ, ಅದರೆ ಅವರು ಬಾಬೇಲ್ ದೇಶದಲ್ಲಿ ಮನೆಯೋ ಎಂಬಂತೆ ಅನುಕೂಲವುಳ್ಳವರಾಗಿರುವಂತೆ ಮಾಡಿಕೊಳ್ಳಬೇಕು, ಯಾಕೆಂದರೆ ಎಪ್ಪತ್ತು ವರ್ಷಗಳವರೆಗೆ ಬಿಡುಗಡೆ ದೊರೆಯದು ಮತ್ತು ಇಂತಹ ದೀರ್ಘಕಾಲದ ಸೆರೆಯನ್ನು ಅವರು ಇದುವರೆಗೆ ಅನುಭವಿಸಿರುವುದಿಲ್ಲ.

ಎಜ್ರ 1:1 ಯೆಹೂದ ಮತ್ತು ಬೆನ್ಯಾಮೀನ್ ಕುಲಗಳವರಿಗೆ ತಮ್ಮ ಸೌಕರ್ಯಗಳನ್ನು ಪಡೆಯಲು ಅಥವಾ ಹಿಂದಿರುಗುವಿಕೆಗೆ ಯಾವ ಮಿತಿಯನ್ನೂ ವಿಧಿಸಿರುವುದಿಲ್ಲ. ಇದಕ್ಕೆ ವ್ಯತಿರಿಕ್ತವಾಗಿ 3ನೇ ವಚನದಲ್ಲಿ ಕೊರೇಷನು "ನಿಮ್ಮಲ್ಲಿ ಯಾರು ಆತನ ಪ್ರಜೆಗಳಾಗಿರುತ್ತಾರೋ ಅವರು..." ಎಂತಲೂ, 4ನೇ ವಚನದಲ್ಲಿ "ಉಳಿದವರು ಯಾವ ಊರಿನಲ್ಲಿ ಪ್ರವಾಸಿಗಳಾಗಿರುತ್ತಾರೋ ಅವರು" ಎಂತಲೂ ಹೇಳಿ ಆಹ್ವಾನವನ್ನು. ಕೊರೇಷನ ರಾಜ್ಯಕ್ಕೂ, "ಯಾವ ಊರಿನಲ್ಲಿ ಪ್ರವಾಸಿಗಳಾಗಿರುತ್ತಾರೋ" ಎಂತಲೂ ಹೇಳುವುದರ ಮೂಲಕ ಇಡೀ ಲೋಕಕ್ಕೂ ವಿಸ್ತರಿಸಿದ್ದಾನೆ. ಮತ್ತು 5ನೇ ವಚನವು ಯೆಹೂದ ಮತ್ತು ಬೆನ್ಯಾಮೀನ್ ಕುಲಗಳ ಪ್ರಧಾನರು ಸ್ಪಂದಿಸಿದ್ದು ಮಾತ್ರವಲ್ಲ, ಯಾಜಕರುಗಳು ಮತ್ತು ಲೇವಿಯರು ಇವರೆಲ್ಲ ರೊಡನೆಯೂ ದೇವರು ಉತ್ಸಾಹವನ್ನು ಎಬ್ಬಿಸಿದನು.– ಅಂದರೆ, ಸಿಮಿಯೋನನಂತೆ ಅವರ ಹೃದಯವು "ಯೆಹೂದ್ಯರ ಸಂತೈಸುವಿಕೆಗಾಗಿ ಕಾಯುತ್ತಿದ್ದವು" ಅಂಥವರಲ್ಲಿ ಕೆಲವರು ಅಲ್ಪಸಂಖ್ಯೆಯವರಾಗಿದ್ದರೂ ಹತ್ತು ಕುಲಗಳಿಗೆ ಸೇರಿದವರಾಗಿದ್ದರು. ಉದಾಹರಣೆಗೆ, ಸಿಮಿಯೋನ ನೊಡನೆ ಅಸೇರನ ಕುಲದ ಫನುವೇಲನ ಮಗಳೂ ಪ್ರವಾದಿನಿಯೂ ಆದ ಅನ್ನಳು ಸಹಾ ದೇವಾಲಯದಲ್ಲಿ ಸಂತೈಸುವಿಕೆಗಾಗಿ ಕಾಯುತ್ತಿದ್ದಳು (ಲೂಕ 2:36).

ಯೆಹೆಜ್ಕೇಲ 4:3–8ರ ಉಲ್ಲೇಖದಂತೆ, ಯೆಹೂದದವರ ಮೇಲೆ ನಾಲ್ವತ್ತು ವರ್ಷ, ಅಥವಾ ಉಳಿದ ಇಸ್ರಾಯೇಲ್ಯರ ಮೇಲೆ ಮುನ್ನೂರ ತೊಂಬತ್ತು ವರ್ಷಗಳು ಯಾವಾಗ ನೆರವೇರುವುದು ಎಂಬುದರ ಬಗ್ಗೆ ಯಾವು ಸೂಚನೆಯೂ ಇಲ್ಲ. ಈ ತೊಂದರೆಯನ್ನು ಎರಡು ಭಾಗಗಳನ್ನಾಗಿ ಮಾಡಿರುವುದಾದರೂ ಅವೆಲ್ಲವೂ ಒಂದೇ ರಾಜಧಾನಿಯಾದ ಯೆರೂಸಲೇಮಿನಲ್ಲಿ ವಿವರ ಗೊಳಿಸಿರುವಂತೆ ಒಂದೇ ಜನಗಳ ವಿರುದ್ಧವಾಗಿ ಬರುವುದು ಎಂಬ ಸತ್ಯವನ್ನು ನಿಮ್ಮ ಬಾತ್ಮೀದಾರರು ಉದಾಸೀನಮಾಡಿದ್ದಾರೆ. ಆದರೆ, ಇದನ್ನು ಪ್ರವಾದಿಯು ತನ್ನ ಸ್ತಬ್ಧ ಚಿತ್ರದ ಬೋಧನೆಯ ಭಾಗವಾಗಿ ಚಿತ್ರಿಸಿದ್ದಾನೆ. ಕೆಲವರು ಈ ಪಾಠವು ದಂಗೆಯ ಸಮಯದಿಂದ ಪ್ರಾರಂಭವಾಗಿ ಅವರುಗಳು ಯೆರೂಸಲೇಮಿನ ಪಾಳುಬೀಳುವಿಕೆಯ ಸುಮಾರು 390 ವರ್ಷಗಳ ಮುಂಚೆ ವಿಗ್ರಹಾರಾಧಕರಾದ ಹತ್ತು ಕುಲಗಳ ಬಗ್ಗೆ ಮತ್ತು ಉಳಿದ ಎರಡು ಕುಲಗಳ ಬಗ್ಗೆ ಪಾಳುಬೀಳುವಿಕೆಯ ನಾಲ್ವತ್ತು ವರ್ಷಗಳ ಹಿಂದೆ, ಪ್ರಾರಂಭವಾದ ದೇವರ ರೌದ್ರವನ್ನು ನಮಗೆ ಬೋಧಿಸುತ್ತದೆ ಎಂದು ಭಾವಿಸುತ್ತಾರೆ. ಈ ಎರಡು ಕುಲಗಳು ಅರಸನಾದ ಮನಸ್ಸೆಯ ಅಧಿಪತ್ಯದಲ್ಲಿ ವಿಗ್ರಹಾರಾಧಕರಾದರು

(2 ಅರಸು. 23:1–25). ನಂತರ ಯೆರೂಸಲೇಮಿನ ಮತ್ತು ದೇಶದ ಸಂಪೂರ್ಣ ನಾಶನದ ಮೂಲಕ ಅವರ ಪಾಪಗಳಿಗೆ ಪ್ರಾಯಶ್ಚಿತ್ತ ಮಾಡಿ, ದೇವರು ತನ್ನ ರೌದ್ರವನ್ನು ಶಮನಗೊಳಿಸಿದನು. ಇದು ಸರಿಯಾದುದ್ದಾದರೆ, ಅವರು ಬಾಬೇಲಿನಲ್ಲಿರುವಾಗಲೇ ಯಾರು ಆತನ ವಾಗ್ದಾನಗಳನ್ನು ಗೌರವಿಸಿ ಎಪ್ಪತ್ತು ವರ್ಷಗಳ ನಿರ್ಜನತೆಯು ಮುಗಿಯುವವರೆಗೂ ಕಾದರೋ ಅವರಿಗೆ ಆತನ ಕೃಪೆಯು ಹಿಂತಿರುಗಿತು ಮತ್ತು ಅವರು ಆತನ ಪವಿತ್ರನಗರದ ಆಲಯದಲ್ಲಿ ಆತನಿಗೆ ಆರಾಧನೆಮಾಡುವವರಾದರು,

ಆಗ ನಾವು ಉತ್ತರಿಸಿ ಹೇಳುವುದೇನೆಂದರೆ: ಈ ಹತ್ತು ಕುಲಗಳಲ್ಲಿ ಸಿದ್ಧರಾದವರಿಗೆ ಮತ್ತು ನಂಬಿಗಸ್ತರಿಗೆ ಅಡಚಣೆಯುಂಟಾಯಿತು ಮತ್ತು ಅವರು ಪಾಳುಬೀಳುವಿಕೆಯ ಎಪ್ಪತ್ತು ವರ್ಷಗಳ ನಂತರ ತಮ್ಮ ದೇಶಕ್ಕೆ ಹಿಂತಿರುಗಿ ಹೋಗಲಿಲ್ಲ ಎಂಬುದಕ್ಕೆ ಯಾವ ಪುರಾವೆಯೂ ಇರುವುದಿಲ್ಲ. ಇದಕ್ಕೆ ವ್ಯತಿರಿಕ್ತವಾಗಿ ಅವರುಗಳಿಗೆ ಹಿಂತಿರುಗಿ ಹೋಗುವ ಸ್ವಾತಂತ್ರ್ಯವಿತ್ತು ಮತ್ತು ಕೆಲವರು ಅದನ್ನು ಕಾರ್ಯಗತಗೊಳಿಸಿದರು.

SCRPTURE STUDIES, Vol. IIIಯಲ್ಲಿ (ಅಂದರೆ ಸತ್ಯವೇದ ಗ್ರಂಥಾಧ್ಯಯನ ಸಂಪುಟ – 3) "ಅವರು (ಹತ್ತು ಕುಲಗಳು) ಇಸ್ರಾಯೇಲ್ಯರ ಒಡಂಬಡಿಕೆಯನ್ನು ಪರಿತ್ಯಜಿಸಿ ವಿಗ್ರಹಾರಾಧಕರುಗಳೂ, ಅವಿಶ್ವಾಸಿಗಳೂ ಮತ್ತು ಕಾರ್ಯತಃ ಅನ್ಯಜನರಾದರು" ಎಂಬುದನ್ನು ಉಲ್ಲೇಖಿಸಿದ ನಂತರದಲ್ಲಿ ನಿಮ್ಮ ವರದಿಗಾರರು ಮುಂದುವರೆದು :

ಇದು ಸಂಪೂರ್ಣವಾಗಿ ಸರಿಯಾದುದು; ಹತ್ತು ಕುಲಗಳವರು ತಮ್ಮ ಧರ್ಮತ್ಯಾಗ ಮಾಡಿದರು ಮತ್ತು ಅವರನ್ನು ಮೋಶೆಯ ಒಡಂಬಡಿಕೆಯಿಂದ ವಿಚ್ಛೇಧಿಸಲಾಯಿತು (ಯೆರೆಮೀಯ 3:8) ಎಂದಿದ್ದಾರೆ. ಆದರೆ, ಅವರು ಸಂಗಾತಿಯ ಆಭರಣವನ್ನು ಉದಾಸೀನ ಮಾಡಿದ್ದಾರೆ. ಅವರುಗಳು ಇನ್ನೂ ನೂತನ ಹಾಗೂ ಉತ್ತಮವಾದ ಒಡಂಬಡಿಕೆಯೊಂದಿಗೆ ಪುನರ್ವಿವಾಹ ಮಾಡಿಕೊಳ್ಳಬೇಕಾಗಿದೆ (ಯೆಶಾಯ 54: 4–8; ಹೋಶೇಯ 2:7, 19; ಯೆರೆಮೀಯ 31:31–33). ಇಸ್ರಾಯೇಲ್ಯರು ಕಾರ್ಯತಃ ಅನ್ಯಜನರು ಮತ್ತು ಈ ದಿನದವರೆಗೆ ಅನ್ಯಜನರೆಂದು ಪರಿಗಣಿಸಲ್ಪಟ್ಟಿದ್ದಾರೆ; ಆದರೆ ಅದು; "ಎಫ್ರಾಯೀಮನು ಬಲಿಷ್ಠನಾಗುವನು. ಅವನ ಸಂತತಿಯಲ್ಲಿಯೇ ಜನರು ಹೇರಳವಾಗಿ ಹುಟ್ಟುವರು" (ಆದಿ 48:19) ಎಂಬ ಪ್ರವಾದನೆಗನು ಸಾರವಾಗಿಯೇ ಅದೆ. ಎಫ್ರಾಯೀಮನ ಸಂತತಿ ಯವರಾದ ಇಸ್ರಾಯೇಲ್ಯರನ್ನು ಅಳತೆಮಾಡಲು, ಲೆಕ್ಕಿಸಲು ಸಾಧ್ಯವಿಲ್ಲ. ಅವರುಗಳು "ಲೋ ಅಮ್ಮಿ" "ಏಕೆಂದರೆ ನೀವು ನನ್ನ ಪ್ರಜೆಯಲ್ಲ, ನಾನು ಇನ್ನು ನಿಮ್ಮ ದೇವರಲ್ಲ" (ಹೋಶೇಯ 1:9, 10). ಅಂದರೆ ಅವರು ಹೆಸರುಮಾತ್ರದ ಅನ್ಯಜನರು.

ಮೇಲಿನ ಹೇಳಿಕೆಯ ಬಗ್ಗೆ ನಾವು ನಮ್ಮ ಭಿನ್ನಾಭಿಪ್ರಾಯವನ್ನು ವ್ಯಕ್ತಪಡಿಸುತ್ತೇವೆ. ಕರ್ತನಿಗೆ ಪುನರ್ ವಿವಾಹವಾಗಿಲ್ಲ ಅಥವಾ ಆತನು ಹತ್ತು ಕುಲಗಳನ್ನು ಪುನರ್‌ವಿವಾಹಮಾಡಿಕೊಳ್ಳುವುದೂ ಇಲ್ಲ. ಉಲ್ಲೇಖನಗಳು ಈ ತರಹದ ಯಾವುದನ್ನೂ ರುಜುವಾತುಪಡಿಸುವುದೂ ಇಲ್ಲ. ಹೋಶೇಯನು ಕೆಲವು ಕೆಟ್ಟ ಜನರ ಕಠಿಣ ಚಿತ್ರಣಗಳನ್ನು ನೀಡಿದ್ದಾನೆ ಹೋಶೇಯನು 1:4,6,7 ವಚನಗಳಲ್ಲಿ ಹತ್ತು ಕುಲಗಳನ್ನು ಎರಡು ಕುಲಗಳಿಂದ ಪ್ರತ್ಯೇಕವಾದುದೆಂದು ತೋರಿಸುವಂತೆ ಕಂಡುಬರುತ್ತದೆ. ಆದರೆ ಇನ್ನು ಮುಂದೆ ಕರುಣೆಯನ್ನು ಭರವಸೆ ಕೊಡುವುದಿಲ್ಲ, ಬದಲಾಗಿ ಹತ್ತನ್ನು ಸಂಪೂರ್ಣವಾಗಿ ತೆಗೆದುಹಾಕುವುದು ಮತ್ತು ಯೂದಾಯದ ಮೇಲೆ ಕರುಣೆ ತೋರುವುದಾಗಿದೆ. 9 ಮತ್ತು 10ನೇ ವಚನಗಳು ಓಲೀವ್ ಮರದ ಸ್ವಾಭಾವಿಕ ಕೊಂಬೆಗಳಾದ ಎಲ್ಲಾ ಇಸ್ರಾಯೇಲ್ಯರ ಒಂದು ಸಮಯದ ನಿರಾಕರಣೆಯನ್ನು ಮತ್ತು ಆತ್ಮೀಕ ಇಸ್ರಾಯೇಲ್ಯರ ಮೂಲ ಬೇರು ಅಥವಾ ವಾಗ್ದಾನದಲ್ಲಿ ಕಸಿಮಾಡುವುದನ್ನು ತೋರಿಸುತ್ತದೆ. – ಅವರುಗಳು ಅನ್ಯಜನರಿಂದ ಬಂದವರು, ಕರ್ತನಿಂದ ತನ್ನ ಜನರಾಗಿ ಈ ಹಿಂದೆ ಮಾನ್ಯತೆ ಪಡಕೊಳ್ಳದವರು, ಅಪರಿಚಿತರಾದವರು, ಪರಕೀಯರು ಮತ್ತು ಇಸ್ರಾಯೇಲ್ಯರ ಪ್ರಜಾಸಮುದಾಯಕ್ಕೆ ಹೊರಗಿನವರು, ಆದರೆ ಈಗ ಕ್ರಿಸ್ತನ ಮೂಲಕ ಹತ್ತಿರಕ್ಕೆ ತರಲ್ಪಟ್ಟು ಭಾಗೀಧಾರರಾಗಿ ಮಾಡಲ್ಪಟ್ಟವರೂ ಆಗಿದ್ದಾರೆ. ಈ ವೇದವಚನದ ಅನ್ವಯವನ್ನು ಅಪೊಸ್ತಲನಾದ ಪೌಲನು ಮಾಡಿದ್ದಾನೆ (ರೋಮಾ. 9:23–26). ಹೋಶೇಯ 1:10–11ನೇ ವಚನದಲ್ಲಿ 'ಆಗ', ನಿರಾಕರಣೆಯ ಸಮಯದಲ್ಲಿ ಮತ್ತು ಆತ್ಮೀಕ ಇಸ್ರಾಯೇಲ್ಯರನ್ನು ಮಾನ್ಯ ಮಾಡುವ ಸಮಯದಲ್ಲಿ, ಯೂದಾಯ ಮತ್ತು ಇಸ್ರಾಯೇಲ್ ಒಂದೇ ಶಿರಸ್ಸಿನಡಿಯಲ್ಲಿ ಪುನಃ ಒಗ್ಗೂಡುವುವು ಎಂದು ಪ್ರಕಟಿಸುತ್ತದೆ.

ಹೋಶೇಯ 2:1–7ರಲ್ಲಿನ ಒಂದು ರುಜುವಾತು ಗಳಲ್ಲಿ ಒಂದು ಪ್ರಸ್ತಾಪಿಸಲ್ಪಟ್ಟಿದೆ; ಆದರೆ ಈ ವಚನಗಳ ಜಾಗರೂಕ ಹುಡುಕುವಿಕೆಯು ನಮ್ಮ ಕರ್ತನು ಅವರನ್ನು ಪುನರ್‌ವಿವಾಹನಾಗುತ್ತೇನೆಂಬ ಯಾವ ವಾಗ್ದಾನವನ್ನೂ ಮಾಡಿಲ್ಲವೆಂಬುದನ್ನು ಬಹಿರಂಗಪಡಿಸುತ್ತದೆ. ವಚನ

13ರ ವರೆಗೆ ಓದಿದರೆ ವ್ಯತಿರಿಕ್ತತೆಯ ರುಜುವಾತಾಗುತ್ತದೆ. ನಂತರದಲ್ಲಿ 14–18 ವಚನಗಳು 'ಈ ದಂಗೆಯ ಜನರಿಗೆ ಅಬ್ರಹಾಮನ ನಿಜವಾದ ಸಂತಾನದ ಸಹಸ್ರಮಾನದ ಆಳ್ವಿಕೆಯು ತೆರೆಯಲಿದೆ ಎಂಬ ನಿರೀಕ್ಷೆಯ ಬಾಗಿಲನ್ನು' ತೋರ್ಪಡಿಸುತ್ತದೆ (ಗಲಾತ್ಯ 3:16,29). 18ನೇ ವಚನವು ಈ ನಿರೀಕ್ಷೆಯ ಬಾಗಿಲಿನ ದಿನಾಂಕವನ್ನು ಅದು ಸಂಕಟದ ಸಮಯದ ನಂತರ, ಯುದ್ಧಗಳು ಇನ್ನಿಲ್ಲವಾಗುವಾಗ ಎಂಬುದಾಗಿ ಕಂಡುಹಿಡಿಯುತ್ತದೆ.

19 ಮತ್ತು 20ನೇ ವಚನಗಳು ಎಲ್ಲಾ ಶಾರೀರಿಕ ಸಂತಾನದವರಿಗೂ ಅನ್ವಯವಾಗುವುದಾದರೆ, ಅದು ಎಲ್ಲಾ ಸಂತಾನದವರಿಗೂ (ಈ ಹಿಂದೆ ಪ್ರಸ್ತಾಪಿಸಿದಂತೆ) ಅನ್ವಯವಾಗಬೇಕು – ಹೋಶೇಯ ಅಧ್ಯಾಯ 1:11ನ್ನು ನೋಡಿರಿ – ಆ ಪ್ರಕರಣದಲ್ಲಿ ಸುವಾರ್ತಾ ಯುಗಕ್ಕೆ ಮುಂಚೆ, ಯುದ್ಧಗಳು ಇನ್ನಿಲ್ಲದಿರುವಾಗ ನೆರವೇರುವುದೆಂಬ ಕರೆಯನ್ನು ನೀಡಿರುವುದಿಲ್ಲ. ಅದರೆ ಈ ವಚನಗಳು (ವ. 19 ಮತ್ತು 20) ಶಾರೀರಿಕ ಇಸ್ರಾಯೇಲ್ಯರನ್ನು ಹೊರಹಾಕಿದಾಗ ಆಯ್ಕೆಗೊಂಡ ಆತ್ಮೀಕ ವರ್ಗಕ್ಕೆ ಸಂಬಂಧಿಸಿದೆ ಎಂದು ನಂಬುವುದಕ್ಕೆ ಒಳ್ಳೆಯ ಕಾರಣಗಳಿವೆ. ಈ ದೃಷ್ಟಿಕೋನಕ್ಕೆ, 23ನೇ ವಚನವು, ಮಾತ್ರವಲ್ಲದೆ ಅಧ್ಯಾಯ 1:10 ಇವುಗಳು ಬೆಂಬಲ ನೀಡುತ್ತವೆ. ಇವೆರಡನ್ನೂ ರೋಮಾ. 9:23–26ರಲ್ಲಿ ಉಲ್ಲೇಖಿಸಲಾಗಿದೆ. ಇದು "ಇಸ್ರಾಯೇಲ್ಯರು ಹುಡಿಕಿದ್ದು ಅವರೆಲ್ಲರಿಗೂ ದೊರೆಯಲಿಲ್ಲ. ಅವರೊಳಗೆ ಆಯಲ್ಪಟ್ಟವರಿಗೆ ದೊರೆಯಿತು. ಮಿಕ್ಕವರು ಮೊಂಡರಾದರು" (ರೋಮಾ. 11:7) ಎಂಬ ಅಪೋಸ್ತಲನ ಈ ಹೇಳಿಕೆಗೆ ಚೆನ್ನಾಗಿ ಒಪ್ಪಿಗೆಯಾಗುತ್ತದೆ.

ಯೆಶಾಯ 54:1–8ರ ಪ್ರಕಾರ, ಅಪೋಸ್ತಲನಾದ ಪೌಲನು ಅದರ ಮೇಲೆ ಮನುಷ್ಯಾತೀತ (Superhuman) ಬುದ್ಧಿವಂತಿಕೆಯ ಬೆಳಕನ್ನು ಚೆಲ್ಲಿದ್ದಾನೆ ಮತ್ತು ಅದನ್ನು ಆತ್ಮೀಕ ಚಿಯೋನಿಗೆ ಅನ್ವಯಿಸಿದ್ದಾನೆ. ಅದು ನಮ್ಮ ಮಾತೆ ಅಥವಾ ಒಡಂಬಡಿಕೆಯಾಗಿದ್ದು ಸಾರಾಳಿಂದ ಸಂಕೇತಗೊಂಡಿದೆ. ಅಬ್ರಹಾಮನ ಶಾರೀರಿಕ ಸಂತಾನವು ವಾಗ್ದಾನದ ಬಾಧ್ಯಸ್ಥಿಕೆಯಿಂದ ಹೊರಹಾಕಲ್ಪಟ್ಟಿದೆ ಮತ್ತು ನಿಜ ಸಂತಾನವಾದ, ಕ್ರಿಸ್ತನು (ಇಸಾಕ ಮತ್ತು ರೆಬಕ್ಕಳಿಂದ ನಮೂನೆಗೊಂಡ) ವಾಗ್ದಾನದ ಏಕೈಕ ಸಂತಾನವಾಗಿ ಸ್ವೀಕರಿಸಲ್ಪಟ್ಟಿದ್ದಾನೆ (ಗಲಾತ್ಯ 4:22, 24, 26–31).

ಯೆರೆಮೀಯ 31: 29–33 ವಚನದ ಈ ಅಂಶದ ಬಗ್ಗೆ ಸಮಗ್ರವಾಗಿದೆ. ಇದು ಇಸ್ರಾಯೇಲ್ಯರು ಎಂದು ಕರೆಸಿಕೊಳ್ಳುವ ಹತ್ತು ಕುಲಗಳು ಯೂದಾಯ ಎಂದು ಕರೆಸಿಕೊಳ್ಳುವ ಎರಡು ಕುಲಗಳಿಂದ ಪ್ರತ್ಯೇಕಗೊಂಡ ಸಮಯದಲ್ಲಿ ಬರೆಯಲ್ಪಟ್ಟಿತು. ಆದುದರಿಂದ ಹತ್ತು ಕುಲಗಳು ಮಾತ್ರವೇ ಎಂಬ ತಪ್ಪು ತಿಳುವಳಿಕೆ ಉಂಟಾಗದಂತೆ ಇವೆರಡನ್ನೂ ಹೇಳುವುದು ಪ್ರವಾದಿಗೆ ಅಗತ್ಯವಾಗಿತ್ತು. ಆದರೆ ಇಲ್ಲಿ ವಚನ 31ರಲ್ಲಿ; ಆತನು ಎರಡನ್ನೂ ಒಟ್ಟಾಗಿಸಿದ್ದಾನೆ, ಹಾಗೆ ಅವನ್ನು ಒಂದಾಗಿ ಕೂಡಿಸಿದಮೇಲೆ ಆತನು 33 ಮತ್ತು 36ನೇ ವಚನಗಳಲ್ಲಿ ಎಲ್ಲವುಗಳಿಗೂ ಒಂದೇ ಹೆಸರನ್ನು ಉಪಯೋಗಿಸುತ್ತಾನೆ ಮತ್ತು ಇದು 38–40ನೇ ವಚನಗಳಲ್ಲಿ ದೃಢಗೊಳ್ಳುತ್ತದೆ. ಅವು ಎರಡು ಕುಲಗಳ ಭಾಗದಲ್ಲಿರುವ ಸ್ಥಳಗಳ ಬಗ್ಗೆ ಮತ್ತು ಯೆರೂಸಲೇಮಿನ ಬಗ್ಗೆ ಹೇಳುತ್ತವೆ.

ಮುಂದೆ ನಾವು ಲಕ್ಷಿಸೋಣ : ಈ ಪ್ರವಾದನೆಯು ಇನ್ನೂ ನೆರವೇರಿರುವುದಿಲ್ಲ ; ಹೀಗಾಗಿ ಹತ್ತು ಕುಲಗಳು, ಅವರು ಸ್ಪಷ್ಟವಾಗಿ ತಮ್ಮನ್ನು ಗುರುತಿಸಿಕೊಂಡರೂ ಇನ್ನೂ ಜಂಬಕೊಚ್ಚಿಕೊಳ್ಳುವ ಕಾರಣವಿಲ್ಲ. ನೂತನ ಒಡಂಬಡಿಕೆಯನ್ನು ಅವರೊಂದಿಗೆ ಮಾಡಿ ಕೊಳ್ಳುವವರೆಗೆ, ಒಡಂಬಡಿಕೆಯ ನಿಯಮವು ಅವರ ಹೃದಯಗಳಲ್ಲಿ ಬರೆಯುವವರೆಗೆ ಅವರು ಕಾಯುವದು ಇನ್ನೂ ಒಳ್ಳೆಯದು. ಆಗ ಖಂಡಿತವಾಗಿ ಅವರು ತಮ್ಮನ್ನು ತಾವು ಹಳೆ ಒಡಂಬಡಿಕೆಯವರು ಎಂದು ಕೊಚ್ಚಿಕೊಳ್ಳುವುದಿಲ್ಲ, ಆದರೆ ತಾವು ಹೊಸ ಒಡಂಬಡಿಕೆಯವರು ಎಂದು ಕೊಚ್ಚಿಕೊಳ್ಳುತ್ತಾರೆ.

ಈ ಸುವಾರ್ತಾಯುಗದಲ್ಲಿ ನೂತನ ಒಡಂಬಡಿಕೆ ಮತ್ತು ಆಶೀರ್ವದಿತ ಹೃದಯ–ಬರಹಗಳು ಮತ್ತು ಆತ್ಮೀಕ–ಬೋಧನೆಗಳು ಹತ್ತು ಕುಲಗಳಿಗಾಗಿ ಅಲ್ಲ ಅಥವಾ ಎರಡು ಕುಲಗಳಿಗೂ ಅಲ್ಲ. ಅದು ಮೊದಲಿಗೆ ಮಧ್ಯಸ್ಥಗಾರನ ರಕ್ತದಿಂದ (ಮರಣದಿಂದ), ಶಿರಸ್ಸು ಮತ್ತು ದೇಹದಿಂದ, ಯೆಹೂದ್ಯ ಮತ್ತು ಅನ್ಯಜನರಿಂದ ಮುದ್ರಿತವಾಗಬೇಕು. ಶಾರೀರಿಕ (ಇಷ್ಮಾಯೇಲನ) ಸಂತಾನವು, ಆತ್ಮೀಕ (ಇಸಾಕನ) ಸಂತಾನವು ಎಲ್ಲವನ್ನೂ ಬಾಧ್ಯವಾಗಿ ಪಡಕೊಳ್ಳುವ ತನಕ ಮತ್ತು ಆತನು ತನ್ನ ಭಾಗವನ್ನು ಇಸಾಕನಿಂದ ಪಡಕೊಳ್ಳುವವರೆಗೆ ಕಾಯಬೇಕು. ಆ ದಿನಗಳಲ್ಲಿ, ಶಾರೀರಿಕ ಸಂತಾನವು ತನ್ನ ಪಾಲನ್ನು ಪಡಕೊಳ್ಳುವಾಗ, ವಚನ 29 ಮತ್ತು 30ರಲ್ಲಿ ಹೇಳಿರುವ ಸಹಸ್ರಮಾನದ ಭಾಗ್ಯಗಳು ಪಡೆದುಕೊಳ್ಳುತ್ತಾರೆ.

ಪ್ರಿಯರೇ, ನಾವು ನಮ್ಮ ಕರೆಯನ್ನು ಮತ್ತು ಅಯ್ಕೆಯನ್ನು ನಂಬಿಕೆಯಲ್ಲಿ ವಿಧೇಯರಾಗುವ ಮೂಲಕ ಖಚಿತಪಡಿಸಿಕೊಳ್ಳೋಣ ಮತ್ತು ಆತ್ಮೀಕ ಆಶೀರ್ವಾದಗಳು ಶಾರೀರಿಕ ಸಂಬಂಧಗಳಿಂದ ಬರುತ್ತವೆ ಎಂಬ ನಿರೀಕ್ಷೆಯನ್ನು ಇಟ್ಟುಕೊಳ್ಳದೇ ಇರೋಣ, ಇದು

ಹಾಗಿರುವುದಿಲ್ಲವೆಂದು ಕರ್ತನ ವಚನಗಳು ಸ್ಪಷ್ಟವಾಗಿ ತೋರಿಸಿವೆ. ಆಂಗ್ಲೋ-ಸಾಕ್ಸನ್ ಕುಲಗಳು ಕಳೆದುಹೋದ ಹತ್ತು ಕುಲಗಳ ಅಕ್ಷರಶಃ ಸಂತಾನದವರಾದರೆ, ಅದು ನಿಜವಾಗಿಯೂ ಅವರ ಅನುಕೂಲತೆಗಾಗಿದೆ, ಕರ್ತನು ಸಂಬಂಧಗಳನ್ನು ಉದಾಸೀನ ಮಾಡುವವನಾಗಿದ್ದು ಅವರನ್ನು ಅನ್ಯಜನರ ಲೆಕ್ಕಕ್ಕೆ ತೆಗೆದುಕೊಳ್ಳುತ್ತಾನೆ; ಯಾಕೆಂದರೆ ಉಳಿಕೆಯವರು ಆಯ್ಕೆಗೊಂಡಾಗ, ಆತನ ಕೃಪೆಯು ಸ್ವಾಭಾವಿಕ ಸಂತತಿಯವರಿಂದ ಹಿಂದಕ್ಕೆ ಪಡಕೊಳ್ಳಲಾಯಿತು ಮತ್ತು ಆತನು ಅನ್ಯಜನಗಳಿಂದ ತನ್ನ ಮನೆಗೆ ಜನರನ್ನು ತೆಗೆದುಕೊಳ್ಳುತ್ತಾನೆ. ಅವರುಗಳು ಈ ಹಿಂದೆ ಆತನ ಜನರಾಗಿರಲಿಲ್ಲ. ಮತ್ತು ನಾವು ಕಂಡುಕೊಂಡಂತೆ, ಆಯ್ದ ಸಭೆಯು ಸಹಸ್ರಮಾನ ಯುಗದ ಉದಯ (dawn) ಪೂರ್ಣಗೊಳ್ಳುವವರೆಗೂ ಆತನ ಕೃಪೆಯು ಹಿಂತಿರುಗುವಿಕೆಯು ವಾಗ್ದಾನ ಮಾಡಲ್ಪಟ್ಟಿರುವುದಿಲ್ಲ.

ವೇದ ವಚನಗಳ ಬೋಧನೆಗಳನ್ನು ಅರ್ಥ ಮಾಡಿಕೊಳ್ಳುವಾಗ ಗ್ರೇಟ್ ಬ್ರಿಟನ್, ಜರ್ಮನಿ ಮತ್ತು ಸಂಯುಕ್ತ ಸಂಸ್ಥಾನ ಇವುಗಳು ರೆಹಬ್ಬಾಮನ ಕಾಲದಲ್ಲಿ ಎರಡು ಕುಲಗಳಿಂದ ಪ್ರತ್ಯೇಕಗೊಂಡ ಹತ್ತು ಕುಲಗಳ ಸಂತಾನದಲ್ಲಿ ಕೆಲವರನ್ನು ಹೊಂದಿವೆ ಎಂಬ ನಮ್ಮ ತಿಳುವಳಿಕೆಗೆ ವಿರೋಧವಾಗಿ ಕಂಡುಬರುವುದಿಲ್ಲ. ಆದರೆ ಪ್ರಸ್ತುತ ಬಳಕೆಯಲ್ಲಿರುವ ಮೂಲ ಸ್ವರೂಪದ ಮಿಶ್ರಣದ ಚಿರಪರಿಚಯವುಳ್ಳವರು ವಿಶೇಷವಾಗಿ ಸಂಯುಕ್ತ ಸಂಸ್ಥಾನದವರು ಈ ಯಾವುದೇ ದೇಶದಲ್ಲಿ ಶುದ್ಧ ಇಸ್ರಾಯೇಲ್ಯರ ವಂಶವಿದೆ ಎಂಬ ಬಗ್ಗೆ ಹಕ್ಕೇಳಿಕೆ ನೀಡಲಾಗದು. ನಾವು ಈ ದೇಶಗಳ ಅಭ್ಯುದಯವು, ಲೋಕದ ಇತರೆ ಕೆಲವು ದೇಶಗಳಿಗಿಂತ ಹೆಚ್ಚಾಗಿ ಅವರ ಪೀಳಿಗೆಗೆ ಆಗುತ್ತದೆ ಎಂಬ ಪ್ರಶ್ನೆಯ ಬಗ್ಗೆ ಚರ್ಚೆಯನ್ನೂ ಮಾಡುವಂತಿಲ್ಲ. ಬಹುಶಃ ಇದ ಸತ್ಯವಾಗಿದೆ. ಆದರೆ ನಾವು ಅದನ್ನು ಸಂರಕ್ಷಿಸಿಕೊಳ್ಳಲು ಏನು ಮಾಡುತ್ತೇವೆಂದರೆ: ಇದುವರೆಗೆ ಕರ್ತನ ಸಭೆಯ ಮಹಾಕರೆಯ ಬಗ್ಗೆ, ವಿಭಾಗದ ಮಧ್ಯ ಗೋಡೆಯು ಮುರಿದು ಹೋಗಿರುವಾಗ, ಇಸ್ರಾಯೇಲ್ಯ ಮೂಲದ ಒಬ್ಬ ವ್ಯಕ್ತಿಯ ಅಥವಾ ದೇಶದ ಕೃಪಾ ಒಡಂಬಡಿಕೆಯ ಷರತ್ತಿನ ಮೇರೆಗೆ, ಒಬ್ಬ ವ್ಯಕ್ತಿ ಅಥವಾ ದೇಶವು ಬೇರೆ ದೇಶ ಅಥವಾ ವ್ಯಕ್ತಿಯ ಮೇಲೆ ಯಾವುದೇ ಅನುಕೂಲತೆಗಳನ್ನು ಪಡಕೊಳ್ಳುವುದಿಲ್ಲ. ಇದರಿಂದ 'ಎಲ್ಲಾ ಇಸ್ರಾಯೇಲ್ಯರು' 'ಸ್ವಾಭಾವಿಕ ಕೊಂಬೆಗಳು' ಒಡಂಬಡಿಕೆಯ ಮಧ್ಯಸ್ಥನಾದ ಕ್ರಿಸ್ತನನ್ನು ಅಂಗೀಕರಿಸಿದ ಉಳಿಕೆ ಭಾಗದವರನ್ನು ಬಿಟ್ಟು ಮುರಿದುಹೋದವು; ರಾಷ್ಟ್ರೀಯತೆಯ ನಿಮಿತ್ತ ಆ ಉಳಿಕೆಭಾಗದವರು (remants) ಇತರರ ಮೇಲೆ ಸರ್ವಶ್ರೇಷ್ಠತೆಯನ್ನು ಪಡೆಯಲಿಲ್ಲ. ದೇವರು, ಅಪೋಸ್ತಲರ ಮೂಲಕ ಆತ್ಮೀಕ ಇಸ್ರಾಯೇಲ್ಯರ ಆಯ್ಕೆಯ ಸಮಯದಲ್ಲಿ ಶಾರೀರಿಕವಾಗಿ ಇಸ್ರಾಯೇಲ್ಯರಿಗೆ ಯಾವುದೇ ಹೆಚ್ಚಿನ ಒಲವು ತೋರಿರುವದರ ಬಗ್ಗೆ ಬೋಧಿಸಿರುವುದಿಲ್ಲ; ಆದರೆ ಆತನು ಆತ್ಮೀಕ ಇಸ್ರಾಯೇಲ್ಯರ ತಂಡ ಪೂರ್ಣಗೊಂಡ ಮೇಲೆಯೇ ಆತನ ಕೃಪೆಯು ಶಾರೀರಿಕ ಮನೆತನದವರ ಕಡೆಗೆ ತಿರುಗುವುದು ಎಂದು ಪ್ರಕಟಿಸಿದ್ದಾನೆ.

ಆತ್ಮೀಕ ಇಸ್ರಾಯೇಲ್ಯರು ಬಹಳವಮಟ್ಟಿಗೆ ಪೂರ್ಣಗೊಂಡಿದ್ದಾರೆಂದು ನಾವು ನಂಬುವುದರಿಂದ, ನಾವು ಶಾರೀರಿಕವಾಗಿ ಇಸ್ರಾಯೇಲ್ಯರಾಗಿರುವವರು ತಮ್ಮ ಮೊಂಡತನದಿಂದ ತಿರುಗಿಕೊಂಡ ಮೇಲೆ ಅವರಿಗೆ ಆಶೀರ್ವಾದವುಂಟಾಗುವುದೆಂದು ನಾವು ನಿರೀಕ್ಷಿಸಿದ್ದೇವೆ ಮತ್ತು ಅವರುಗಳು ಆತ್ಮೀಕ ಇಸ್ರಾಯೇಲ್ಯರಿಂದ ಆಶೀರ್ವಾದಪಡಕೊಳ್ಳುವಲ್ಲಿ ಮತ್ತು ಪುನಃವಶ ಹೊಂದುವುದರಲ್ಲಿ ಮೊದಲನೆಯವರೆಂದು ನಿರೀಕ್ಷಿಸುವವರಾಗಿದ್ದೇವೆ. ಹೀಗಾಗಿ ಅವರು "ಕರುಣೆಯ ಮೂಲಕ ಕರುಣೆಯನ್ನು ಹೊಂದಿಕೊಳ್ಳುವರು" (ರೋಮಾ. 11:31). ಅವರು ಆ ರೀತಿಯಾಗಿ ಸಂಪೂರ್ಣವಾದ ಮತ್ತು ಮಹಿಮೆಹೊಂದಿದ ಕ್ರಿಸ್ತನ ಸಭೆಯ ಕರುಣೆಯನ್ನು ಹೊಂದಿಕೊಂಡ ಮೇಲೆ, ಅವರು ನಿಜವಾಗಿಯೂ ಲೋಕದ ಎಲ್ಲಾ ಕುಟುಂಬಗಳನ್ನೂ ಆಶೀರ್ವದಿಸುವ ಸಾಧನಗಳಾಗಿ ಉಪಯೋಗಿ ಸಲ್ಪಡುತ್ತಾರೆ, ಈ ರೀತಿಯಲ್ಲಿ ಅಬ್ರಹಾಮನ ಆಶೀರ್ವಾದವು ಶಾರೀರಿಕವಾಗಿರುವವರು ಮತ್ತು ಆತ್ಮೀಕವಾಗಿರುವವರು ಎರಡೂ ಸಂತತಿಯವರಿಗೂ ನೆರವೇರುವುದು,- "ಆದಕಾರಣ ಆ ಬಾಧ್ಯತೆಯು ಕೃಪೆಯಿಂದಲೇ ದೊರಕುವಂಥಾದ್ದಾಗಿರುವಂತೆ ಅದು ನಂಬಿಕೆಯ ಮೂಲಕ ಸಿಕ್ಕುತ್ತದೆ. ಹೀಗೆ ಆ ವಾಗ್ದಾನವು ಅಬ್ರಹಾಮನ ಸಂತತಿಯವರೆಲ್ಲರಿಗೂ, ಅಂದರೆ ಧರ್ಮಶಾಸ್ತ್ರವನ್ನು ಆಧಾರವಮಾಡಿಕೊಂಡವರಿಗೆ ಮಾತ್ರವಲ್ಲದೆ ಅಬ್ರಹಾಮನಲ್ಲಿದ್ದಂಥ ನಂಬಿಕೆಯುಳ್ಳವರಿಗೆ ಸಹ ಸ್ಥಿರವಾಗಿ ನಿಲ್ಲುವುದು" (ರೋಮಾ. 4:16)

ನಿಮ್ಮ ಸನ್ಮಾನ್ಯ,

- The Author of Studies in Scripture
- ಸತ್ಯವೇದ ಗ್ರಂಥಾಧ್ಯಯನಗಳ ಲೇಖಕ

'ಇಸ್ರಾಯೇಲ್' ಎಂಬ ಪದವು ಕಳೆದುಹೋದ ಹತ್ತು ಕುಲಗಳವರಿಗೆ ಮಾತ್ರವೇ ಮತ್ತು ಯೂದಾಯ ಎಂಬ ಹೆಸರು ಬಾಬೇಲಿನಿನ ಸೆರೆಯಿಂದ ಪಾಲೆಸ್ಟೈನಿಗೆ ಹಿಂತಿರುಗಿ ಬಂದವರಿಗೆ ಮಾತ್ರವೇ ಅನ್ವಯವಾಗುತ್ತದೆ

ಎಂದು ಹೇಳುವವರು ಈ ಕೆಳಗಣ ಸಾಧಾರಣ ಸತ್ಯಗಳಿಗೆ ಉತ್ತರಿಸುವವರೆಗೆ ಅಂಥಾಃ ಪ್ರತಿಪಾದನೆ ಮಾತುಗಳನ್ನು ಸ್ಥಗಿತಗೊಳಿಸಬೇಕು. ನಮ್ಮ ಕರ್ತನು "ತಪ್ಪಿಸಿಕೊಂಡ ಕುರಿಗಳಂತಿರುವ ಇಸ್ರಾಯೇಲ್ಯನ ಮನೆತನದವರ ಬಳಿಗೇ ಹೊರತು ಮತ್ತಾರ ಬಳಿಗೂ ನಾನು ಕಳುಹಿಸಲ್ಪಡಲಿಲ್ಲ" (ಮತ್ತಾಯ 15:24; 10:6) ಎಂದಿದ್ದಾನೆ, ಆತನು ಯೂದಾಯ ಮನೆತನದವರ ಬಗ್ಗೆ ಒಂದು ಮಾತನ್ನೂ ಹೇಳಿರುವುದಿಲ್ಲ. ಹೀಗಿದ್ದರೂ ಆಂಗ್ಲೋ–ಇಸ್ರಾಯೇಲ್ಯರು ನಮಗೆ ಹೇಳುವಂತೆ, ಆತನು ಪಾಲೆಸ್ಟೈನಿನಲ್ಲಿ ಮಾಡಿದ ಎಲ್ಲಾ ಬೋಧನೆಗಳೂ ಇಸ್ರಾಯೇಲ್ಯರ ಮನೆತನದವರಿಗೆ ಅಲ್ಲವೇ ಅಲ್ಲ, ಆದರೆ ಯೂದಾಯದ ಮನೆತನದವರಿಗೆ ಎಂಬುದಾಗಿ. ಪುನಃ, ಇದೇ ವಿಚಾರ ಸರಣಿಯ ಪ್ರಕಾರ, ಸಂತ ಪೇತ್ರನು ಪಂಚಾಶತ್ತಮದಂದು ಪವಿತ್ರಾತ್ಮ ಭರಿತನಾಗಿ ಬೋಧಿಸುವಾಗ "ನೀವು ಶಿಲುಬೆಗೆ ಹಾಕಿಸಿದ ಈ ಯೇಸುವನ್ನೇ ದೇವರು ಒಡೆಯನನ್ನಾಗಿಯೂ, ಕ್ರಿಸ್ತನನ್ನಾಗಿಯೂ ಮಾಡಿದ್ದಾನೆಂಬುದು ಇಸ್ರಾಯೇಲ್ ಕುಲದವರಿಗೆಲ್ಲಾ ನಿಸ್ಸಂದೇಹವಾಗಿ ತಿಳಿದಿರಲಿ" ಎಂದು ಹೇಳುವುದರ ಮೂಲಕ (ಪೇತ್ರನೇ) ದೊಡ್ಡ ತಪ್ಪನ್ನೇ ಮಾಡಿದ್ದಾನೆ. ಇಸ್ರಾಯೇಲ ಮನೆತನದವರಿಗೆ ಅಲ್ಲ, ಆದರೆ ಕ್ರಿಸ್ತನನ್ನು ಶಿಲುಬೆ ಹಾಕಿದ ಅಪರಾಧ ಮಾಡಿದ ಯೂದಾಯ ಮನೆತನದವರಿಗೆ ಎಂದು ಆಂಗ್ಲೋ–ಇಸ್ರಾಯೇಲ್ಯರು ನಮಗೆ ಹೇಳುವವರಾಗಿದ್ದಾರೆ. ಯೇಸು ಮತ್ತು ಆತನ ಅಪೋಸ್ತಲರುಗಳು ತಪ್ಪುಮಾಡಿದರು ಮತ್ತು ಆಂಗ್ಲೋ–ಇಸ್ರಾಯೇಲ್ಯರ ಕಲ್ಪನೆ ಸರಿಯಾಗಿದೆ ಎಂದು ಯಾರು ಬೇಕಾದರೂ ನಿರ್ಧರಿಸಲಿ, ನಾವು ದೇವರು ಸತ್ಯವಾಗಿದ್ದಾನೆ ಎಂದು ಹೇಳುತ್ತೇವೆ; ನಾವು ನಮ್ಮ ಕರ್ತನ ಮತ್ತು ಸಂತ ಪೇತ್ರನ ಮಾತುಗಳಿಗೆ ಅನುಗುಣವಾಗಿ, ಮತ್ತು ನೂತನ ಒಡಂಬಡಿಕೆಯ ಬೋಧನೆ ಮತ್ತು ಉದ್ದೇಶಗಳನ್ನು ನಾವು ನಮ್ಮ ದೃಷ್ಟಿಗೆ ತೆಗೆದುಕೊಳ್ಳುತ್ತೇವೆ.

ಮೋಶೆ ಧರ್ಮೋಪದೇಶಕಾಂಡ 28:15, 46,49, 63–67ರಲ್ಲಿ ಹೇಳಿರುವ ಶಾಪಗಳು ಕರ್ತನಿಗೆ ಅವಿಧೇಯತೆ ತೋರಿದಲ್ಲಿ ಇಸ್ರಾಯೇಲ್ಯರಿಗೆ 12 ಕುಲದವರಿಗೂ ಉಂಟಾಗುತ್ತದೆ ಎಂಬುದು ಕರ್ತನ ದಿನದಲ್ಲಿ ಬಹಳ ಅಕ್ಷರಶಃವಾಗಿ ನೆರವೇರಿಕೆಯಾಗುವಂತೆ ಕಂಡುಬರುತ್ತದೆ (ಮುಖ್ಯವಾಗಿ ಯೂದಾಯ ಮತ್ತು ಬೆನ್ಯಾಮೀನ್ ಕುಲಗಳು, ಆದರೆ ಕರ್ತನಿಗೆ ಗೌರವ ತೋರುವ ಇನ್ನು ಹತ್ತುಕುಲಗಳ ಪ್ರತಿನಿಧಿಗಳೂ ಇದರಲ್ಲಿ ಸೇರುತ್ತಾರೆ). ನಮ್ಮ ಕರ್ತನು ಧರ್ಮಶಾಸ್ತ್ರದಲ್ಲಿ ಮತ್ತು ಪ್ರವಾದನೆಗಳಲ್ಲಿ ಬರೆದ ಎಲ್ಲಾ ಸಂಗತಿಗಳೂ ಅವರುಗಳ ಮೇಲೆಯೂ ನೆರವೇರುತ್ತವೆ ಎಂದು ಕರ್ತನು ಪ್ರಕಟಿಸಿದ್ದಾನೆ ಮತ್ತು ಅಪೋಸ್ತಲನಾದ ಪೌಲನು ಸಹ ಆ ಭವಿಷ್ಯವಾಣಿಗಳು ಅವರುಗಳ ಮೇಲೆ ಅತ್ಯಧಿಕಾಂಶವಾಗಿ ನೆರವೇರಿವೆ ಎಂದು ಪ್ರಕಟಿಸುತ್ತಾನೆ (1 ಥೆಸಲೋನಿಕ 2:15:16).

ಆದರೆ ಬ್ರಿಟಿಷ್ ದೇಶವು ಇಲ್ಲಿ ಹೇಳಿರುವಂತೆ ಇಸ್ರಾಯೇಲಿನ ಯಾವುದೇ ಭಾಗವಾಗಿದ್ದಲ್ಲಿ ವಚನ 64 ಮತ್ತು 65ನೇ ವಚನಗಳು ನೆರವೇರಿರುವಂತೆ ತೋರುವುದಿಲ್ಲ.

* * * * * * *